# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಫೆಬ್ರುವರಿ, ೨೦೧೫ ಸಂಪುಟ: ೪ ಸಂಚಿಕೆ: ೭

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ :** ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/-

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨೪೨೨೮೪ ಈಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ನಮ್ಮ ಗಣರಾಜ್ಯೋತ್ಸವ ಸಮಾರಂಭದ ಅತಿಥಿಯಾಗಿ ಬಂದು ಹೋಗಿದ್ದಾರೆ. ಇದನ್ನು ಮೋದಿ ಸರ್ಕಾರ ತನ್ನ ಹೆಗ್ಗಳಿಕೆಯೆಂದು ಹೇಳಿಕೊಳ್ಳುತ್ತಿದೆ. ನಮ್ಮ ವಿದೇಶಾಂಗ ನೀತಿ-ಬಹುಶಃ ಇಂದಿರಾ ಗಾಂಧಿಯವರ ಕಾಲದ ಹೊರತಾಗಿ-ಅಮೆರಿಕಾವನ್ನು ಓಲೈಸಿ ಗೆಲ್ಲುವುದೇ ತನ್ನ ಸಾಧನೆ ಎಂದು ಭಾವಿಸಿರುವುದರಿಂದ ಇದೇನೂ ಅಚ್ಚರಿಯ ಸಂಗತಿಯಲ್ಲ. ಇದೇ ಸಂದರ್ಭದಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನಾಗರಿಕ ಪರಮಾಣು ಒಪ್ಪಂದ ಅಂತಿಮವಾಗಿ ಇತ್ಯರ್ಥವಾಗಿರುವುದಾಗಿ ಎರಡೂ ದೇಶಗಳು ಘೋಷಿಸಿವೆ. ಜೊತೆಗೆ ರಕ್ಷಣಾ ಸಾಧನ ಸಲಕರಣೆಗಳ ಜಂಟಿ ಉತ್ಪಾದನೆಯ ಒಪ್ಪಂದವೂ ಯಶಸ್ವಿಯಾಗಿ ಇತ್ಯರ್ಥವಾಗಿದೆ ಎಂದೂ ಹೇಳಲಾಗುತ್ತಿದೆ. ಈ ಒಪ್ಪಂದಗಳ ಪರಿಣಾಮಗಳ ಚರ್ಚೆಯನ್ನು ಅತ್ತ ಒತ್ತಟ್ಟಿಗಿರಿಸಿ ಒಂದು ಮಾತು ಹೇಳುವುದಾದರೆ, ಮೋದಿ ದೇಶದ ಜನತೆಗೆ ಭರವಸೆ ನೀಡಿದ್ದ 'ಅಚ್ಛೇ ದಿನ'ಗಳನ್ನು ತರುವಲ್ಲಿ ಸದ್ಯಕ್ಕಂತೂ ಯಶಸ್ವಿಯಾಗಿರದಿದ್ದರೂ, ವಿದೇಶಾಂಗ ವ್ಯವಹಾರಗಳ ವಿಷಯದಲ್ಲಿ ಅವರು ಅನಿರೀಕ್ಷಿತ ಯಶಸ್ಸನ್ನು ಸಾಧಿಸಿದ್ದಾರೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಪರಮಾಣು ನಾಗರಿಕ ಒಪ್ಪಂದ ಮೂಲತಃ ಮೋದಿಯವರೇ ಒಪ್ಪಿಕೊಂಡಂತೆ ಮನಮೋಹನ ಸಿಂಗ್‌ರ ಕೊಡುಗೆ. ಆ ಒಪ್ಪಂದದ ಒಂದು ತೊಡಕಾಗಿದ್ದ ಅಣುಸ್ಥಾವರ ಅವಘಡದ ಹಣಕಾಸಿನ ಹೊಣೆಯನ್ನು ಯಾರು, ಎಷ್ಟು ಹೊರಬೇಕೆಂಬ ವಿಷಯವನ್ನು ಈಗ ಒಂದು ವಿಮೆ ವ್ಯವಸ್ಥೆಯ ಮೂಲಕ ಇತ್ಯರ್ಥಪಡಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಮೂಲ ಪ್ರಶ್ನೆ ಇದ್ದೇ ಇದೆ: ನಮಗೆ ನಿಜವಾಗಿ ಅಣು ಸ್ಥಾವರಗಳು ಬೇಕಾಗಿವೆಯೇ? ಈಗ ಸ್ಥಾಪಿತವಾಗಿರುವ ಸ್ಥಾವರಗಳನ್ನೇ ನಾವು ಸುರಕ್ಷಿತವಾಗಿ ನಿರ್ವಹಿಸಲಾಗದಿರುವಾಗ ಮತ್ತು ಚರ್ನೋಬಿಲ್ ಮತ್ತು ಫುಕುಶಿಮಾಗಳ ಭೀಕರ ದುರಂತಗಳ ನಂತರ ಜಗತ್ತಿನ ಸರಿ ಸುಮಾರು ಎಲ್ಲ ದೇಶಗಳೂ ಅಣುಸ್ಥಾವರಗಳ ಸ್ಥಾಪನೆಯನ್ನು ನಿಲ್ಲಿಸುವ ಮತ್ತು ಇರುವ ಸ್ಥಾವರಗಳನ್ನು ಸ್ಥಗಿತಗೊಳಿಸುವ ನಿರ್ಧಾರ ಕೈಗೊಳ್ಳುತ್ತಿರುವಾಗ ಇನ್ನಷ್ಟು ಸ್ಥಾವರಗಳನ್ನು ಆಹ್ವಾನಿಸುವ ಈ ಒಪ್ಪಂದ ಯಾರ ಒಳಿತಿಗಾಗಿ? ಮೊನ್ನೆ ತಾನೇ, ರಷ್ಯಾದ ಸಹಯೋಗದಲ್ಲಿ ಮತ್ತು ಜನವಿರೋಧವನ್ನು ಹತ್ತಿಕ್ಕಿ ಸ್ಥಾಪಿತವಾದ ಕೂಡಂಕುಳಂ ಸ್ಥಾವರದ ಒಂದನೇ ಘಟಕದ ಟರ್ಬೈನ್ ಗಂಭೀರ ತೊಂದರೆಗೆ ಸಿಕ್ಕಿರುವ ಮತ್ತು ಅದಕ್ಕೆ ಕಾರಣವಾಗಿರಬಹುದಾದ ಬೇಜವಾಬ್ದಾರಿಯುತ ಮತ್ತು ಅದಕ್ಕಿಂತ ಹೆಚ್ಚಾಗಿ ಪಾರದರ್ಶಕವಾಗಲು ನಿರಾಕರಿಸುವ ನಿರ್ಮಾಣ ವಿಧಾನಗಳ ಬಗ್ಗೆ ಈಗ ಆತಂಕಮಯ ಚರ್ಚೆಗಳು ನಡೆದಿವೆ ಎಂಬುದನ್ನು ನಾವು ಗಮನಿಸಬೇಕು

ಆದರೆ 'ಅಭಿವೃದ್ಧಿ' ಎಂಬ ಹುಚ್ಚುಹೊಳೆಯ ಪ್ರವಾಹಕ್ಕೆ ನಮ್ಮನ್ನು ತೆತ್ತುಕೊಂಡಿರುವ ನಾವು ಇಂತಹ ಸೂಕ್ಷ್ಮ ವಿಷಯಗಳ ಬಗ್ಗೆ ಯೋಚನೆ ಮಾಡಲಾಗದ ದರಿದ್ರ ಸ್ಥಿತಿಯನ್ನು ತಲುಪಿದ್ದೇವೆ. ನಮ್ಮ ಕಣ್ಮುಂದೆ ನಮ್ಮ ಮಕ್ಕಳಿಗೆ ಹುಚ್ಚು ಹಿಡಿಯುವಷ್ಟು ಸಂಬಳ ಕೊಡುವ ಕೈಗಾರಿಕೆಗಳು, ಉದ್ಯಮಗಳು, ಅವುಗಳ ಉತ್ಪನ್ನಗಳನ್ನು ಬಿಕರಿ ಮಾಡುವ ಬೃಹತ್ ಮಾಲ್‌ಗಳು, ಅವಕ್ಕೆ ತಕ್ಕುನಾದ ಸ್ಮಾರ್ಟ್ ಸಿಟಿಗಳು, ಬುಲೆಟ್ ಟ್ರೈನ್‌ಗಳ ಕನಸಿನಲ್ಲಿ ಮುಳುಗಿ ಹೋಗಿದ್ದೇವೆ.

ಹಾಗಾಗಿಯೇ ಈ ಸರ್ಕಾರ ಮೊನ್ನೆ ಅನುಮೋದಿಸಿಕೊಂಡ ಹೊಸ ವಿಮಾ ಮಸೂದೆ ಮತ್ತು ಈಗ ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತರುವ ತರಾತುರಿಯಲ್ಲಿರುವ ಭೂಸ್ವಾಧೀನ ಕಾಯ್ದೆ ತಿದ್ದುಪಡಿ ಮಸೂದೆಗಳ ಬಗ್ಗೆ, ರಾಜಕೀಯ ಹಿತಾಸಕ್ತಿಯ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಪ್ರತಿಭಟನೆಗಳನ್ನು ಬಿಟ್ಟರೆ ಜನರ ಮಧ್ಯೆ ಗಂಭೀರ ಚರ್ಚೆಗಳೇ ಇಲ್ಲವಾಗಿದೆ. ನಮ್ಮ ಸರ್ಕಾರಿ ಸ್ವಾಮ್ಯದ ವಿಮಾ ಸಂಸ್ಥೆಗಳು ಜನರಿಗೆ ಸಮರ್ಪಕ ಸೇವೆ ಒದಗಿಸುತ್ತಾ ಲಾಭದಲ್ಲಿ ನಡೆಯುತ್ತಿರುವಾಗ ಈ ಕ್ಷೇತ್ರಕ್ಕೆ ವಿದೇಶಿ ನೇರ ಬಂಡವಾಳದ ಹರಿವನ್ನು ಹೆಚ್ಚಿಸುವ ಅಗತ್ಯವಾದರೂ ಏನು ಮತ್ತು ಯಾರ ಹಿತಾಸಕ್ತಿಗಾಗಿ ಎಂದು ಯಾರೂ ಕೇಳುತ್ತಿಲ್ಲ. ಇನ್ನು ಹೋದ ವರ್ಷವಷ್ಟೇ ಬಿಜೆಪಿಯ ಒಪ್ಪಿಗೆಯೊಂದಿಗೇ ಕಾನೂನಾಗಿದ್ದ ಭೂಸ್ವಾಧೀನ ಕಾಯ್ದೆಯಲ್ಲಿ ಭೂಸ್ವಾಧೀನಕ್ಕೆ ಕೆಲವು ಸಂದರ್ಭಗಳಲ್ಲಿ ಭೂಒಡೆಯನ(ಅಂದರೆ ರೈತನ) ಒಪ್ಪಿಗೆ ಹಾಗೂ ಪರಿಸರಾತ್ಮಕ ಮತ್ತು ಸಾಮಾಜಿಕ ಪರಿಣಾಮಗಳ ಅಂದಾಜು ಅಗತ್ಯವಿಲ್ಲ ಎಂಬ ತಿದ್ದುಪಡಿ ತರುವ ಸುಗ್ರೀವಾಜ್ಞೆಯ ಹಿಂದಿರುವುದು ರಾಷ್ಟ್ರೀಯ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ಬೃಹತ್ ಕೈಗಾರಿಕೋದ್ಯಮಿಗಳ ರಿಯಲ್ ಎಸ್ಟೇಟ್ ಹಿತಾಸಕ್ತಿ ಎಂಬುದರ ಬಗ್ಗೆ ಎಷ್ಟು ಜನ ತಲೆಕಡಿಸಿಕೊಂಡಿದ್ದಾರೆ? 'ಅನ್ನ ತಿನ್ನುವವರೆಲ್ಲರೂ ಈ ಸುಗ್ರೀವಾಜ್ಞೆಯನ್ನು ವಿರೋಧಿಸಬೇಕು' ಎಂಬ ದೇವನೂರ ಮಹಾದೇವ ಅವರ ಮಾತಿನಲ್ಲಿನ 'ಅನ್ನ' ಎಂಬ ಶಬ್ದಕ್ಕೆ ಸಾಮಾನ್ಯಾರ್ಥಕ್ಕಿಂತ ಹೆಚ್ಚಿನ ಅರ್ಥವಿದೆ ಎಂದು ನಾನು ಭಾವಿಸಿದ್ದೇನೆ.

ರಿಯಲ್ ಎಸ್ಟೇಟ್ ಹಿತಾಸಕ್ತಿ ಎಂದೊಡನೆ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುರ್ಚಿಗೇ ಮುಳುವಾಗುತ್ತಿರುವಂತೆ ತೋರುತ್ತಿರುವ ಅರ್ಕಾವತಿ ಡಿನೋಟಿಫಿಕೇಷನ್ ಪ್ರಕರಣ ನೆನಪಿಗೆ ಬಾರದಿರದು. ಸಿದ್ದರಾಮಯ್ಯ ತಮ್ಮ ಸ್ಥಾನದ ಸುಭದ್ರತೆಗಾಗಿ ಸಮತುಲಿತವಾದ ಜನಪರ ಆಡಳಿತಕ್ಕೆ ಬದಲು ಪಟ್ಟಭದ್ರ ಜಾತಿ ಹಿತಾಸಕ್ತಿಗಳನ್ನು ನಂಬಿ ಹೊರಟಿದ್ದೇ ಅವರ ಇಂದಿನ ಈ ಅಸುರಕ್ಷತೆಗೆ ಕಾರಣವಾಗಿದೆ ಎಂದರೆ ತಪ್ಪಾಗಲಾರದು. ಸಮಾಜವಾದಿ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯ ಹೀಗೆ ದಾರಿ ತಪ್ಪಲು ಮುಖ್ಯ ಕಾರಣ, ಅವರಲ್ಲಿ ಸಾಮಾಜಿಕ ನ್ಯಾಯ ಎಂದರೆ, ಜಾತಿ ಕೆಟ್ಟದು ಎಂಬ ಕಾರಣಕ್ಕಾಗಿ ಅದನ್ನು ನಿವಾರಿಸಿಕೊಳ್ಳಲು ಅಗತ್ಯವಾದ ರಾಜಕೀಯ ಕಾರ್ಯಕ್ರಮ ಎಂಬ ಅರಿವೇ ಇಲ್ಲದೆ, ಅದನ್ನು ಜಾತಿ ಉದ್ಧಾರದ ಕಾರ್ಯಕ್ರಮವನ್ನಾಗಿ ಸಂಭ್ರಮದಿಂದ ಜಾರಿಗೆ ತರುತ್ತಿರುವುದೇ ಆಗಿದೆ. ಲೋಹಿಯೋತ್ತರ ಸಮಾಜವಾದದ ದುರಂತ ಇದು. ಸಿದ್ಧರಾಮಯ್ಯ ತಮ್ಮ ಅಗ್ಗದ ಜಾತಿ ರಾಜಕಾರಣದಿಂದ ಎಚ್ಚೆತ್ತುಕೊಳ್ಳದಿದ್ದರೆ ಅವರು ಈ ದುರಂತಕ್ಕೆ ಇತ್ತೀಚಿನ ಬಲಿಪಶುವಾದಾರು.

ಇಂತಹ ಎಚ್ಚೆತ್ತುಕೊಳ್ಳುವಿಕೆ ಅವರನ್ನು ಇನ್ನೂ ದೊಡ್ಡ ರಾಜಕೀಯ ಸಾಹಸಕ್ಕೆ ಪ್ರೇರೇಪಿಸೀತು. ಡಿ.ಕೆ.ಶಿವಕುಮಾರ್, ಶಾಮನೂರು , ತಂಗಡಗಿ, ಅಂಬರೀಶ್, ರೋಷನ್ ಬೇಗ್, ದಿನೇಶ್ ಗುಂಡೂರಾವ್, ಚಿಂಚನಸೂರ್, ಖಮರುಲ್ ಇಸ್ಲಾಂ ಮುಂತಾದ ಭ್ರಷ್ಟರು ಅಥವಾ ನಿಷ್ಪ್ರಯೋಜಕರನ್ನು ತಮ್ಮ ಸಚಿವ ಸಂಪುಟದಲ್ಲಿರಿಸಿಕೊಂಡಿರುವುದರ ಮತ್ತು ಕೆ.ಪಿ.ಎಸ್.ಸಿ. ಮತ್ತು ಇತರ ಸಾಂಸ್ಥಿಕ ಪದಾಧಿಕಾರಗಳಿಗೆ ತಾವು ಮಾಡಿರುವ ನೇಮಕಾತಿಗಳ ಹಿಂದಿರುವ ರಾಜಕೀಯ ನಂಬಿಕೆ ಎಷ್ಟು ಸವಕಲು ಮತ್ತು ಹಾಗಾಗಿ ಜನವಿರೋಧಿ ಎಂಬುದು ಗೊತ್ತಾದೀತು.

ಮೋದಿ ಮತ್ತವರ ರಾಜಕೀಯ ಪರಿವಾರ ಸವಾಲೇ ಇಲ್ಲದೆ ಬೆಳೆಯುತ್ತಿರುವ ಇಂದಿನ ಸಂದರ್ಭದಲ್ಲಿ ಸದ್ಯಕ್ಕೆ ಕಾಂಗ್ರೆಸ್ಸಿನ ನೆಲೆಯಾಗಿ ಉಳಿದಿರುವ ಕರ್ನಾಟಕದ ರಾಜಕಾರಣವನ್ನು ಎಷ್ಟು ವಿವೇಕಯುತವಾಗಿ ಪ್ರಬುದ್ಧವಾಗಿ ನಡೆಸಿಕೊಂಡು ಹೋಗಬೇಕು ಎಂಬ ಅರಿವು ಸಿದ್ಧರಾಮಯ್ಯನವರಿಗೆ ಆದಷ್ಟು ಬೇಗ ಉಂಟಾಗಬೇಕಿದೆ. ಕನಿಷ್ಟ ಅವರು ದೆಹಲಿಯಲ್ಲಿ ಮೋದಿ ಪರಿವಾರದ ಬೆವರಿಳಿಸುತ್ತಿರುವ ಅರವಿಂದ ಕೇಜ್ರಿವಾಲರಿಂದಾದರೂ ಕೆಲವು ರಾಜಕೀಯ ಪಾಠಗಳನ್ನು ಕಲಿಯಬೇಕಿದೆ.

ಕೇಜ್ರಿವಾಲರ ಆಂ ಆದ್ಮಿ ಪಕ್ಷಕ್ಕೆ ನಮ್ಮ ಶುಭಾಶಯಗಳು!

**-ಸಂಪಾದಕ**

ಹೊಸ ಮನುಷ್ಯ/ ಫೆಬ್ರುವರಿ/೨೦೧೫



## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಇತ್ತೀಚಿನ ಸಂಚಿಕೆಗಳಲ್ಲೆಲ್ಲ ಜನವರಿ ಸಂಚಿಕೆ ಅತ್ಯುತ್ತಮವಾಗಿದ್ದು ನಿಜವಾಗಿಯೂ ಸಂಗ್ರಹಯೋಗ್ಯವಾಗಿದೆ. ನಿಮ್ಮ ಸಂಪಾದಕೀಯ ಮೋದಿಯವರ ವರ್ತಮಾನದ ರಾಜಕಾರಣವನ್ನು ಎಳೆಎಳೆಯಾಗಿ ಬಿಡಿಸಿಟ್ಟಿದೆ. ಈ ಸರ್ಕಾರ ಹುಟ್ಟುಹಾಕಿದ ಪ್ರಗತಿಯ ಆಸೆಗಳೆಲ್ಲ ನಿರಾಶೆ ಹುಟ್ಟಿಸಿ ಅದೆಲ್ಲ ಭ್ರಮೆ ಎನಿಸತೊಡಗಿದೆ. ಇಂದಿರಾ ಕೃಷ್ಣಪ್ಪನವರ ಲೇಖನ ಮಾಲೆಯಲ್ಲಿನ ಕೆ.ಬಿ. ಸಿದ್ಧಯ್ಯನವರ ಸಮಾಜಮುಖಿ ಹೋರಾಟ ಕಣ್ಣಿಗೆ ಕಟ್ಟಿದಂತೆ ಚಿತ್ರಿಸಲ್ಪಟಿದೆ. ಹಾಗೇ 'ಸಮಾಜವಾದಿ ಯುವಜನ ಚಿಂತನ ವೇದಿಕೆ'ಯಲ್ಲಿನ ಚರಿತಾರ ಬರಹ, ಎಷ್ಟೇ ಕಾನೂನುಗಳು ಬಂದರೂ ಹೆಣ್ಣಿನ ಪಾಲಿಗೆ 'ಇಲ್ಲ'ಗಳ ಪಟ್ಟಿ ಬೆಳೆಯುತ್ತಾ ಹೋಗುತ್ತಿರುವ ಪರಿಸ್ಥಿತಿಯನ್ನು ಬಹು ಪರಿಣಾಮಕಾರಿಯಾಗಿ ದಾಖಲಿಸಿದ್ದಾರೆ.

ತೈಲ ರಾಜಕಾರಣ ಕುರಿತ ಲೇಖನದಲ್ಲಿ ಅನುರಾಧಾ ಚಿನೋಯ್ ಅವರು ಅಮೆರಿಕಾದ ಸ್ವಾರ್ಥಮಯ ಮತ್ತು ಕೈಗೊಂಬೆ ರಾಜಕಾರಣದ ದುರಂತಮಯತೆಯನ್ನು ಸಮರ್ಥವಾಗಿ ಮುಂದಿಟ್ಟಿದ್ದಾರೆ. ಹಾಗೇ 'ಅಭಿವೃದ್ಧಿಯ ಅರ್ಥ ಅಪಾರ್ಥಗಳು' ವಿಭಾಗದ ನಾಲ್ಕೂ ಲೇಖನಗಳು ಪ್ರಗತಿಯ ಹೆಸರಿನಲ್ಲಿ ಈಗ ನಡೆದಿರುವ ಹಿಮ್ಮೊಗ ಯಾತ್ರೆ ಹೇಗೆ ನಮ್ಮ ರಾಜಕಾರಣಿಗಳು ಮಾನವೀಯತೆಗೆ ಮಾಡುತ್ತಿರುವ ದ್ರೋಹ ಮತ್ತು ಅಪಚಾರಗಳ ಸರಮಾಲೆಯಾಗಿ ಪರಿಣಮಿಸುತ್ತಿದೆ ಎಂಬುದನ್ನು ಸವಿವರವಾಗಿ ನಿರೂಪಿಸುತ್ತವೆ.

ಪತ್ರಿಕೆಯು ನಿಜವಾಗಿಯೂ ತನ್ನ ಘೋಷಿತ ಆಶೋತ್ತರಗಳತ್ತ ದಾಪುಗಾಲು ಹಾಕುತ್ತಿದೆ. ನಿಮಗೆ ಅಭಿನಂದನೆಗಳು

**–ಎಂ. ಸುದರ್ಶನರಾಜ,** ಧಾರವಾಡ

ಈ ಬಾರಿಯ ನಿಮ್ಮ ಸಂಪಾದಕೀಯ ನಿಜವಾಗಿಯೂ ಸೂಪರ್!

**–ಸಿ.ಎಂ. ಅಂಗಡಿ,** ಹೊಸದೆಹಲಿ

ಜನವರಿ ಸಂಚಿಕೆ ಅನೇಕ ಕಾರಣಗಳಿಂದ ಮುಖ್ಯವಾಗಿದೆ. ತೆರೆಮರೆಯ ಸಮಾಜವಾದಿ ಕೆ. ಕೃಷ್ಣಗೋಪಾಲ್‌ರವರ ಕುರಿತ ಪ್ರೊ. ಶಿವರಾಮು ಕಾಡನಕುಪ್ಪೆಯವರ ಲೇಖನ ಹೆಚ್ಚಿನ ಸಂಗತಿಗಳನ್ನು ಹೇಳದಿದ್ದರೂ ಕೃಷ್ಣಗೋಪಾಲ್ ಎಂಬ ಅಪ್ಪಟ ಸಮಾಜವಾದಿಯ ಸರಳ ಬದುಕನ್ನು ಸರಳವಾಗಿಯೇ ಕಟ್ಟಿಕೊಟ್ಟಿದೆ. ಕೃಷ್ಣಪ್ಪ ನೆನಪಿನ ಮಾಲೆ ಓದಿ ಸಿದ್ದಯ್ಯನವರ ಜೊತೆ ಫೋನ್‌ನಲ್ಲಿ ಮಾತಾಡಿದೆ. ತಮ್ಮ ವಿವಾಹದ ಬಗ್ಗೆ ಮತ್ತು ತಿಪಟೂರಿನಿಂದ ಅವರು 'ಟೂರ್' ಹೊರಟ ಬಗ್ಗೆ ಅನೇಕ ಸ್ವಾರಸ್ಯಕರ ಆದರೆ ವಿಷಾದದ ಸಂಗತಿಗಳನ್ನು ಹಂಚಿಕೊಂಡರು.

'ಭಾಷೆ–ಶಿಕ್ಷಣ–ಸಾಹಿತ್ಯ ಇತ್ಯಾದಿ' ಕುರಿತ ಬರೆಹದಲ್ಲಿ 'ಮಾತೃಭಾಷಾ ಶಿಕ್ಷಣ ಮಾಧ್ಯಮದ ಆಂದೋಲನ'ದ ನೇತೃತ್ವವನ್ನು ವಹಿಸಲು ನೀವು ಮಹಾದೇವರನ್ನು ಆಹ್ವಾನಿಸಿರುವುದು ಒಂದು ಪಂಥಾಹ್ವಾನದಂತೆ ನನಗೇನೂ ಕಾಣುತ್ತಿಲ್ಲ. ಓರ್ವ ಅಪ್ಪಟ ಸಮಾಜವಾದಿಗೆ ಸಮಾಜದ ಕುರಿತು ಇರುವ ನೈಜ ಕಳಕಳಿಯನ್ನು ಸೂಚಿಸುವಂತಿದೆ. ಒಂದೆಡೆ ಪ್ರಸನ್ನ ಖಾದಿಯ ಪರವಾಗಿ ಹೋರಾಡುತ್ತಿರುವಾಗ ಮಹಾದೇವ ಅವರು ಮಾತೃಭಾಷಾ ಶಿಕ್ಷಣ ಮಾಧ್ಯಮದ ಪರ ಮತ್ತು ಕಾಮನ್‌ಸ್ಕೂಲ್‌ಗಳ ಪರ ಧ್ವನಿ ಎತ್ತಿ ನಡೆದರೆ ಕನ್ನಡದ ಮಟ್ಟಿಗೆ ಮತ್ತು ಮುಂದಿನ ತಲೆಮಾರಿನ ಮಟ್ಟಿಗೆ ಅದೊಂದು ಚಾರಿತ್ರಿಕವಾದ ಸಂಗತಿಯೇ ಆಗುತ್ತದೆ. ದೊಡ್ಡ ಹೋರಾಟಗಳ ಕಾಲ ಈಗ ಮುಗಿದಿದೆ. ಇಂಥ ಸಣ್ಣ–ಪುಟ್ಟ ಹೋರಾಟಗಳಿಂದಲೇ ನಮ್ಮ ನಾಳೆಗೆ ನೆಮ್ಮದಿ ತರಬಹುದಾಗಿದೆ. ಪ್ರಿಯ ಸಂಪಾದಕರೇ ನಿಮ್ಮಯ ಮತಕ್ಕೆ ನನ್ನದು ಸಹಮತ.

'ಅಭಿವೃದ್ಧಿ'ಯ ಕುರಿತು ಹೊಸ ಮನುಷ್ಯ ಪ್ರಕಟಿಸಿದ ನಾಲ್ಕೂ ಲೇಖನಗಳು ಮನನೀಯವಾಗಿವೆ. ಚಂಡಮಾರುತ ಬಂದು ಕೆಳಮಧ್ಯಮವರ್ಗದವರ ಮನೆ ನಾಶವಾದರೆ ಟೌನ್‌ಶಿಪ್ ನಿರ್ಮಾಣ ಮಾಡಬಹುದೆನ್ನುವ ಅಮೇರಿಕದ ಉದಾಹರಣೆ ಯಾಕೆ? ಆಧ್ಯಾತ್ಮ, ಯೋಗದ ಹೆಸರಿನಲ್ಲಿ ವ್ಯಾಪಾರ ಮಾಡುವ ಭೂಗಳ್ಳರಾದ ನಮ್ಮ ಆಧುನಿಕ ಸಾಧು–ಸಂತರು, ಎನ್‌ಆರ್‌ಐ ಗುರುಗಳು ತಾವಾಗಿಯೇ ಬಡಪಾಯಿ ಜನರ ಭೂಮಿಯನ್ನೂ ಮತ್ತು ಮಾನ–ಮರ್ಯಾದೆಗೆ ಅಂಜುವ ಹೆಂಗಳೆಯರ(ಮಾತೆಯರ..!) ದೇಹವನ್ನೂ ಆಕ್ರಮಿಸುವುದು ಆಧುನಿಕತೆಯ ಪರಿಣಾಮದಿಂದ ಸೊಕ್ಕಿದ ಹುಸಿ ಆಧ್ಯಾತ್ಮದ ವಿಕಟ ಅಟ್ಟಹಾಸವಲ್ಲವೇ..? ಅಥವಾ ಇದೂ ಕೂಡ ಜಗತ್ತಿಗೆ ಭಾರತ ಕೊಡುತ್ತಿರುವ ಹೊಸ ಯೌಗಿಕ ಸಂದೇಶವೇ..?

**–ನಿತ್ಯಾನಂದ ಬಿ ಶೆಟ್ಟಿ,** ತುಮಕೂರು

ದೇವನೂರ ಮಹಾದೇವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ನಿರಾಕರಿಸಿದ್ದು, ನಂತರ ನಡೆದ ಬೆಳವಣಿಗೆಯ ಬಗೆಗಿನ ನಿಮ್ಮ ಬರಹ ಅದೆಷ್ಟು ಚೆನ್ನಾಗಿದೆ! ನೇರಾನೇರ! ಭಲೇ ಎನ್ನಲೇಬೇಕು!! ಅವರ ಸುತ್ತ ಬರೀ ಚೇಲಾಗಳೇ ತುಂಬಿಕೊಂಡಿದ್ದು, ಅವರನ್ನು ಪ್ರಶ್ನಿಸುವವರೇ ಇಲ್ಲವಾಗಿದ್ದಾರೆ. ಕನ್ನಡ ಶಿಕ್ಷಣದ ಹೆಸರಿನಲ್ಲಿ ಈ ಅಧ್ಯಕ್ಷ ಪದವಿ ನಿರಾಕರಿಸುವುದಾದರೆ ಇತ್ತೀಚೆಗೆ ಮೈಸೂರು ವಿಶ್ವವಿದ್ಯಾಲಯ ನೀಡಿದ ಗೌ. ಡಾಕ್ಟೊರೇಟನ್ನೂ ಅವರು ನಿರಾಕರಿಸಬಹುದಿತ್ತಲ್ಲ? ಜೊತೆಗೆ, ಸರ್ಕಾರ ಮಾಡಬೇಕಾದ ಕೆಲಸ ಪರಿಷತ್ತಿನಿಂದ ಸಾಧ್ಯವೇ?

**–ಬಿ.ಎನ್.ಶಾಂತಾ** ಮೈಸೂರು

ದೇವನೂರು ಮಹಾದೇವ ವಿರೋಧಿಸಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಸಿದ್ಧಲಿಂಗಯ್ಯನವರು ಸದ್ದಿಲ್ಲದೆ ಒಪ್ಪಿಕೊಂಡಿರುವುದನ್ನು ನೋಡಿದರೆ ನಿಮ್ಮಂತೆಯೇ ಯಾರಿಗಾದರೂ ಕನ್ನಡದ ಹೆಸರಿನಲ್ಲಿ ನಡೆಯುತ್ತಿರುವ ಈ ನಾಟಕದ ಬಗ್ಗೆ ತೀವ್ರ ಜಿಗುಪ್ಸೆಯಾಗದಿರದು.

**–ಎಸ್. ರಾಜಶೇಖರ,** ದಾವಣಗೆರೆ

ಗೆಳೆಯ ಶಿವರಾಮ ಕಾಡನಕುಪ್ಪೆ ಕೃಷ್ಣಗೋಪಾಲ್‌ರನ್ನು ತಮ್ಮ ನೆನಪಿನ ಚಿತ್ರದಿಂದ ಕಟ್ಟಿಕೊಡದಿದ್ದರೆ, ಮತ್ತೊಬ್ಬ ನಿಷ್ಠಾವಂತ ಸಮಾಜವಾದಿಯ ಕಾರ್ಯ ದಾಖಲಾಗದೇ ಹೋಗುತ್ತಿತ್ತು. ಅದಕ್ಕಾಗಿ ನಿಮ್ಮಿಬ್ಬರಿಗೂ ಅಭಿನಂದನೆಗಳು. ಅಭಿವೃದ್ಧಿಯ ಹೆಸರಿನಲ್ಲಿ ಸೋನ್‌ಭದ್ರಾ ಪ್ರದೇಶವನ್ನು ನರಕದ ಕೂಪಕ್ಕೆ ತಳ್ಳಿರುವುದನ್ನು ಓದಿ ಹೃದಯವೇ ಬಾಯಿಗೆ ಬಂದಂತಾಯಿತು. ಸಮಾಜ ಎಚ್ಚೆತ್ತುಕೊಳ್ಳದಿದ್ದರೆ ದೇಶವನ್ನೇ ಕೂಪಕ್ಕೆ ತಳ್ಳುತ್ತಾರೆ. ನಾ ಓಮ ಕ್ಲೀನ್ ಅವರ 'The Shock Doctrine' ನ್ನು ವಿಶ್ಲೇಷಿಸಿ ನಮ್ಮ ಸದ್ಯದ ಚರಿತ್ರೆಯ ಸತ್ಯಗಳನ್ನು ಎದುರಿಸಲಾಗದಂತ ಸ್ಥಿತಿಯ ಬಗ್ಗೆ ಓದುಗರನ್ನು ಚಿಂತನೆಗೆ ಹಚ್ಚುವಂತೆ ಮಾಡಿರುವ ಚೆನ್ನಿಯವರಿಗೆ ಋಣಿಯಾಗಿದ್ದೇವೆ. ಒಂದು ಮಾತು. ಚೆನ್ನಿಯವರು ಮಾಡಿಕೊಡುವುದಾದರೆ, ಕನ್ನಡದಲ್ಲಿ ಈ ಕೃತಿಯನ್ನು ಹೊರತರಲು ಲೋಹಿಯಾ ಪ್ರಕಾಶನ ಸಿದ್ಧವಿದೆ.

**–ಸಿ. ಚನ್ನಬಸವಣ್ಣ,** ಬಳ್ಳಾರಿ

ಜನವರಿಯ 'ಹೊಸ ಮನುಷ್ಯ' ಖುಷಿ ಕೊಟ್ಟಿತು. ನಾನು ಬಹಳ ಗೌರವಿಸುವ ಮೂವರು ಅಣ್ಣರ–ನಾಗಣ್ಣ(ಎ.ಎನ್. ನಾಗರಾಜ್), ನಾಗೇಶಣ್ಣ(ನಾಗೇಶ ಹೆಗಡೆ) ಮತ್ತು ಪ್ರಸನ್ನ(ಇವರನ್ನು ಅಣ್ಣ ಹೇಗೆ ಮಾಡುವುದು ತಿಳಿದಿಲ್ಲ!) ಲೇಖನಗಳು ಬಂದಿವೆ. ಮೂರೂ ಲೇಖನಗಳು ಬಹಳ ಚೆನ್ನಾಗಿವೆ. ವಿಶೇಷವೆಂದರೆ, ಈ ಮೂವರೂ ಶುದ್ಧ ಸಾಹಿತಿಗಳಲ್ಲ. ಬದುಕನ್ನು ತುಂಬ ವ್ಯಾಪಕವಾಗಿ ಗ್ರಹಿಸಿ ಬಾಳುತ್ತಿರುವವರು. ನಮಗೆ ಇಂದು ಬೇಕಾಗಿರುವವರು ಇಂಥವರು, ಇಂಥವರ ಬರವಣಿಗೆ.

**–ಸಂಜೀವ ಕುಲಕರ್ಣಿ,** ಧಾರವಾಡ

ನಾಗೇಶ್ ಹೆಗಡೆ, ರಾಜೇಂದ್ರ ಚೆನ್ನಿ ಅವರ ಬರಹಗಳು ನನ್ನನ್ನು ಹೆಚ್ಚು ಕಲಕಿ ಚಿಂತಿಸುವಂತೆ ಮಾಡಿವೆ. ಇ–ಯುಗವು ಅಭಿವೃದ್ಧಿಯ ಅಂಧಯುಗವೇ ಸರಿ. 'ನಮ್ಮ ಸಮಾಜವಾದಿಗಳು' ಅಂಕಣ ಬರಹಗಳು ಸಂಪಾದಕರ ಶ್ರಮದ ಪ್ರತಿಫಲವೇ ಸರಿ. ಎಲ್ಲ ಸಂಚಿಕೆಗಳನ್ನು ತಪ್ಪದೇ ಓದುತ್ತಿರುವೆ. ಹೊಲದ ಕೆಲಸಗಳ ನಡುವೆ ಪತ್ರ ಬರೆಯಲಾಗಿರಲಿಲ್ಲ, ಕ್ಷಮಿಸಿ.

**–ಎಚ್.ಎಸ್. ರಾಮನಗೌಡ,** ಕೊಂಡಿಕೊಪ್ಪ(ನವಲಗುಂದ)

ಕನ್ನಡದ ವಿನೂತನ ಮಾಸಿಕವಾಗಿ ಹೊರಹೊಮ್ಮುತ್ತಿರುವ 'ಹೊಸ ಮನುಷ್ಯ' ಪತ್ರಿಕೆಯನ್ನು ತಪ್ಪದೇ ಓದುತ್ತಿರುವೆ. ಅದರಲ್ಲೂ ಇಂದಿರಕ್ಕ ಬರೆಯುತ್ತಿರುವ ಬಿ. ಕೃಷ್ಣಪ್ಪ ನೆನಪಿನ ಮಾಲೆಯಲ್ಲಿ ಅವರು ಶಿವಮೊಗ್ಗ ಜಿಲ್ಲೆಯ ಅಂದಿನ ಹೋರಾಟಗಳನ್ನು ಆತ್ಮೀಯವಾಗಿ ಕಟ್ಟಿಕೊಡುತ್ತಿದ್ದಾರೆ. ವಿಶೇಷವಾಗಿ ನನ್ನ ಆ ಸೋಶಲಿಸ್ಟ್ ಗೆಳೆಯ ವಿಜಯಪಾಟೀಲನನ್ನು ಪತ್ತೆ ಹಚ್ಚಿಕೊಟ್ಟದ್ದಕ್ಕಾಗಿ ಇಂದಿರಮ್ಮನವರಿಗೆ ಧನ್ಯವಾದಗಳು.

**–ಸನತ್‌ಕುಮಾರ್ ಬೆಳಗಲಿ,** ಬೆಂಗಳೂರು

ಡಿಸೆಂಬರ್ ಸಂಚಿಕೆಯ 'ಸಮಕಾಲೀನ' ಅಂಕಣದ ಸಂಪಾದಕೀಯ ಬರಹ ಚಿಂತನೆಗೆ ಹಚ್ಚುವಂತಿತ್ತು. ಹಾಗೇ ಅಪೂರ್ವ ಡಿ'ಸಿಲ್ವರವರು ತಮ್ಮ ಲೇಖನದಲ್ಲಿ ಜಾಗತೀಕರಣದ ಈ ದಿನಗಳಲ್ಲಿ ಮಾನವನ ಹುಚ್ಚಾಟಗಳಿಂದ ಅವನ ಮತ್ತು ಪ್ರಕೃತಿಯ ಸಂಬಂಧ ದೂರವಾಗುತ್ತಿರುವುದನ್ನು ಬರೆದಿದ್ದಾರೆ. ‹ತ್ರಿಕೆ ಇಂತಹ ಉತ್ತಮವಾದ ಚಿಂತನೆಗಳಿಂದ ಕೂಡಿರಲಿ ಎಂದು ಹಾರೈಸುವೆ.

**–ಸಂಜಯ್ ಕುಮಾರ್, ಬೊಕ್ಕೇಪುರ**(ಚಾಮರಾಜನಗರ)

(ಇನ್ನಷ್ಟು ಪತ್ರಗಳಿಗಾಗಿ ೧೫ನೇ ಪುಟ ನೋಡಿ–ಸಂ.)

## ನಮ್ಮ ಸಮಾಜವಾದಿಗಳು | ಸಲೂನ್‌ನಲ್ಲಿ ಸಮಾಜವಾದ ಬೋಧಿಸಿದ ರಾಚಪ್ಪ ಹಡಪದ



ಅನ್ಯಾಯದ ವಿರುದ್ಧ ಸಿಡಿದೇಳುವ ಸ್ವಭಾವ, ಅಗತ್ಯ ಬಿದ್ದ ಕಡೆ ಕಟು ಮಾತುಗಳನ್ನು ಬೀಸಾಡುವ ಪ್ರವೃತ್ತಿ, ನ್ಯಾಯದ ಪರ ಹೋರಾಟ ಇದ್ದಲ್ಲಿ ತಡ ಮಾಡದೇ ಹೊರಟು ಬಿಡುವ ಜಾಯಮಾನದ ಈ ವ್ಯಕ್ತಿಯೇ ಹಡಪದ ರಾಚಪ್ಪ. ಸಾಂಸ್ಕೃತಿಕ ನಗರ ಧಾರವಾಡದ ಮಣ್ಣಿನಲ್ಲಿ ಮೂಡಿ ಬಂದಿರುವ ಈ ಬಂಡಾಯದ ಗಂಡಿನ ಒಡಲಲ್ಲಿ ಅಗತ್ಯ ಬಿದ್ದಾಗ ಬೆಂಕಿಯ ಉಂಡಿಗಳು ಪುಟಿಯುತ್ತವೆ. ಆದರೆ ಸರಿ ಕಂಡು ಬಂದೆಡೆ ಸರಳ ನೇರ ನುಡಿ. ತಾನೇ ಬಡವ, ಬಡವರ ಕಂಡರೆ ಮನ ಮೀಡಿಯುವ ಕರಳು.

ಕೇವಲ ಎರಡನೇ ತರಗತಿವರೆಗೆ ಓದಿದ್ದರೂ, ಲೋಹಿಯಾ ಸಿದ್ಧಾಂತ ಮತ್ತು ಗಾಂಧಿ ತತ್ವಗಳು ಇವರ ಬಾಳಿನ ಉಸಿರು. ಈ ನಡುವೆ ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿಯ ಹಿಲಾಲು ಹಿಡಿಯುವ ಹಂಬಲ. ಬಾಲ್ಯದಿಂದಲೂ ಸುಸಂಸ್ಕೃತ ಚಿಂತಕರ ಪರಿಸರ, ಸ್ವಾತಂತ್ರ್ಯ ಆಂದೋಲನದ ಪರಿಸರದಲ್ಲಿ ಬೆಳೆದು ಬಂದುದರ ಪರಿಣಾಮವಿದು. ಧಾರವಾಡ ಸೀಮೆಯ ಸಮಾಜವಾದಿ ಧುರೀಣರಾದ ನೀಲಗಂಗಯ್ಯಾ ಪೂಜಾರ, ಗಂಗಾಧರ ಟಿ. ಪದಕಿ, ರಾಚಪ್ಪಣ್ಣಾ ಬೆಟಸೂರ ಅವರ ಮಾರ್ಗದರ್ಶನದಲ್ಲಿ ಅವರ ಆಂದೋಲನದೊಂದಿಗೆ ಬೆಳೆದು ಬಂದವರು ಇವರು.

ವೃತ್ತಿಯಿಂದ ಇವರು ಕ್ಷೌರಿಕರು. ಸಲೂನ್‌ನ ಹೆಸರು "ಸಮತಾ ಹೇರ್ ಕಟಿಂಗ್ ಸಲೂನ್'! ಸಾಹಿತಿ, ಕಲಾವಿದರು, ಬುದ್ಧಿಜೀವಿಗಳ ಊರಾದ ಧಾರವಾಡದಲ್ಲಿಯ ಈ ಸಲೂನ್‌ಗೆ ಭೆಟ್ಟಿ ಕೊಡದ ಮಹನೀಯರಿಲ್ಲ. ಅಂತೆಯೇ ಸಾಮಾನ್ಯರು ಸಹ ಕಟಿಂಗ್‌ಗೆ ಬರುತ್ತಿದ್ದರು. ಈ ಹಡಪದ ರಾಚಪ್ಪ ಅವರು ಕೂದಲು ಕತ್ತರಿಸುತ್ತಿದ್ದರಾದರೂ ಅವರ ತಲೆಗಳೊಳಕ್ಕೆ ಅಸಮಾನತೆಯ ವಿರುದ್ಧದ ವಿಚಾರಗಳ ಬೀಜ ಬಿತ್ತಿ, ಸಮಾನತೆಯ ಕಿಚ್ಚು ತುಂಬಿ ಕಳಿಸುತ್ತಿದ್ದರು. ಈ ಸಲೂನ್‌ನಲ್ಲಿ ಚಿತ್ರತಾರೆಯರ ಫೋಟೋಗಳಿರುತ್ತಿರಲಿಲ್ಲ. ಬದಲಾಗಿ ಲೋಹಿಯಾ, ಜೆಪಿ, ಮಹಾತ್ಮಾ ಗಾಂಧಿ, ಭಗತ್‌ಸಿಂಗ್‌ರ ಭಾವಚಿತ್ರಗಳ ಅನಾವರಣ ಇರುತ್ತಿತ್ತು. ಈ ಸಲೂನ್ ಮೊದಲು ಎಲಿ ಪೇಟೆ (ಈಗಿನ ಸಿಬಿಟಿ)ಯಲ್ಲಿದ್ದದ್ದು ನಂತರ ಮೇವಿನ ಪೇಟೆಗೆ ಸ್ಥಳಾಂತರಿಸಲ್ಪಟ್ಟಿತ್ತು. ಇಂಥ ಜನನಿಬಿಡ ಗಿಜಿ ಗಿಜಿ ಎನ್ನುವ ವಾಣಿಜ್ಯ ಸ್ಥಳಗಳಲ್ಲಿ ಜನಪರ ಆದರ್ಶಗಳನ್ನು ಉಚಿತವಾಗಿ ಮಾರಾಟ ಮಾಡಿದ ಹೆಗ್ಗಳಿಕೆಯ ರಾಚಪ್ಪಗೆ ಈಗ ೭೮ ವರ್ಷ. ಈ ಇಳಿ ವಯಸ್ಸಿನಲ್ಲಿ ಸಲೂನ್‌ಗೆ ಹೋಗುತ್ತಿಲ್ಲವಾದರೂ, ವಿಮೋಚನೆಗಾಗಿ ನಡೆಸುವ ಹೋರಾಟ ಮಾತ್ರ ನಿಲ್ಲಿಸಿಲ್ಲ. ಎಲ್ಲಿ ಜನಪರ ಚಳುವಳಿ, ಮೆರವಣಿಗೆ, ಧರಣಿ ಇರುತ್ತವೆಯೋ ಅಲ್ಲಿ ಇಂದಿಗೂ ಹಾಜರ್. ತಮ್ಮಂದಿರು ಮತ್ತು ಅವರ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ತಮ್ಮ ಜೀವನ ಮುಡಿಪಿಟ್ಟು ಅವಿವಾಹಿತರಾಗಿಯೇ ಉಳಿದಿರುವ ರಾಚಪ್ಪ ಇಂದಿಗೂ ತಾವೇ ಅಡುಗೆ ಮಾಡಿಕೊಂಡು ಊಟ ಮಾಡುವ ಸ್ವಾವಲಂಬಿಗಳು.

ಕಿತ್ತೂರು ನಾಡಿನ ಬೈಲಹೊಂಗಲ ತಾಲೂಕಿನ ಹೊಳೆಹೊಸೂರು ಗ್ರಾಮದಲ್ಲಿ ೧೯೩೭ರ ಜುಲೈ ೧೮ರಂದು ಜನಿಸಿದ ಇವರು ಮೊದಲಿನಿಂದಲೂ ಖಾದಿಧಾರಿಗಳು. ಬದಲಾವಣೆಗೆ ಸ್ಪಂದಿಸುವ ಸಮಾನ ಚಿಂತಕರು ಯಾರೇ ಇರಲಿ, ಯಾವುದೇ ಪಕ್ಷದವರಿರಲಿ, ಎಲ್ಲರ ವಿಚಾರಗಳಿಗೆ ಮಾನ್ಯತೆ ನೀಡುತ್ತಾ ಗೆಳೆತನದ ತೆಕ್ಕೆಗೆ ಬೀಳುವ ಇವರ ಬದುಕಿನ ದಾರಿ ಅತ್ಯಂತ ರೋಚಕವಾದುದು. ಇವರು ೧೫ ವರ್ಷದವರಿರುವಾಗಲೇ ಹೊಳೆಹೊಸೂರು ಬಿಟ್ಟು ನವಲಗುಂದ ತಾಲೂಕಿನ ತಿರ್ಲಾಪುರ ಗ್ರಾಮದ ಸಂಬಂಧಿಗಳ ಆಶ್ರಯ ಪಡೆದರು. ಕಡು ಬಡತನವೇ ಮತ್ತೊಬ್ಬರ ಆಶ್ರಯ ಪಡೆಯಲು ಕಾರಣವಾಗಿತ್ತು. ಅವರೊಟ್ಟಿಗೆ ಕ್ಷೌರಿಕ ವೃತ್ತಿ ಆರಂಭಿಸಿದರು. ಆಗ ಆ ಭಾಗದ ಸಮಾಜವಾದಿ ನಾಯಕರಾಗಿದ್ದ ಮೊರಬದ ರಾಚಪ್ಪಣ್ಣ ಬೆಟಸೂರರ ಸಂಪರ್ಕಕ್ಕೆ ಈ ರಾಚಪ್ಪ ಬಂದದ್ದೇ ಕ್ರಾಂತಿಕಾರಿ ಬದುಕಿನ ಪುಟಗಳು ತೆರೆದವು.

'ಫಟಫಟಿ' (ಮೋಟರ್ ಬೈಸಿಕಲ್) ಮೇಲೆ ಭುರ್ರೆಂದು ಹಳ್ಳಿ ಹಳ್ಳಿ ಸಂಚರಿಸುತ್ತಿದ್ದ ಬೆಟಸೂರ ರಾಚಪ್ಪ ರೈತರ, ಕೃಷಿ ಕಾರ್ಮಿಕರ ಸಮಸ್ಯೆ, ಕುಂದುಕೊರತೆಗಳಿಗೆ ಸ್ಪಂದಿಸುತ್ತಿದ್ದರು. ಸಮಾಜವಾದಿ ತತ್ವಗಳನ್ನು ಬಲವಾಗಿ ನಂಬಿದ್ದ ಅವರು ಲೋಹಿಯಾ ಅವರ ಪಕ್ಕಾ ಅಭಿಮಾನಿ. ಹಡಪದರ ಮಾತುಗಳಲ್ಲೇ ಹೇಳುವುದಾದರೆ ಬೆಟಸೂರ ಲೋಹಿಯಾ ಮೈಮೇಲೆ ಬಂದವರಂತೆ ಆಡುತ್ತಿದ್ದರು! ಇದು ಅವರ ಬದುಕಿನ ಜೀವನಾಡಿಯಾಗಿತ್ತು. ೧೯೫೩ರಲ್ಲಿ ರೋಣ ತಾಲೂಕಿನ ಅಬ್ಬಿಗೇರಿಗೆ ರಾಮಮನೋಹರ ಲೋಹಿಯಾ ಬರುವವರಿದ್ದರು. ಅಲ್ಲಿಯ ಸಮಾಜವಾದಿ ಹೋರಾಟಗಾರ ವಿರೂಪಾಕ್ಷಪ್ಪ ಈ ಭೆಟ್ಟಿ ಹಾಗೂ ಸಭೆ ಏರ್ಪಡಿಸಿದ್ದರು. ಬೆಟಸೂರ ರಾಚಪ್ಪ ಅಲ್ಲಿಗೆ ಹೊರಟು ನಿಂತರು. ತಾವು ಎಲ್ಲಿಗೆ ಹೋದರೂ ಹಡಪದ ರಾಚಪ್ಪನನ್ನು ಕರೆದುಕೊಂಡು ಹೋಗುತ್ತಿದ್ದ ಬೆಟಸೂರ ತಮ್ಮ ಫಟಫಟಿಯ ಮೇಲೆ ಅವರನ್ನು ಅಲ್ಲಿಗೂ ಕರೆದುಕೊಂಡು ಹೋದರು. ಅದು ಲೋಹಿಯಾ ಅವರನ್ನು ಕಣ್ಣಾರೆ ಕಂಡ ಮೊದಲ ದಿನವಾಯಿತು.

ಅಂದಿನ ಸಭೆಯಲ್ಲಿ ನೀಲಗಂಗಯ್ಯಾ ಪೂಜಾರ ಮುಂತಾದವರನ್ನು ನೋಡುವ ಅವಕಾಶ ಹಡಪದಗೆ ಲಭಿಸಿದ್ದೇ ಕಾರಣವಾಗಿ, ನಂತರದಲ್ಲೇ ಧಾರವಾಡದಿಂದ ೧೨ ಕಿ. ಮೀ. ದೂರದಲ್ಲಿರುವ ತಾಲೂಕಿನ ಹೆಬ್ಬಳ್ಳಿಯ ಜಾಗೀರದಾರ ಎಂಬ ಭೂಮಾಲೀಕರ ಒಡೆತನದಲ್ಲಿ ಸುಮಾರು ೧೨ಸಾವಿರ ಎಕರೆ ಭೂಮಿಯನ್ನು ಗೇಣಿದಾರರಿಗೆ ಕೊಡಿಸಲು ನಡೆದ ಭೂಹೋರಾಟದಲ್ಲಿ ಹಡಪದರು ಭಾಗವಹಿಸುವಂತಾಯಿತು. ತಿರ್ಲಾಪುರದ ಒಡ್ಡರ ಜನಾಂಗದ ಹಿರಿಯ ಗೋವಿಂದಪ್ಪ ಮಾಳಗಿಮನಿ, ಧಾರವಾಡದ ಜಿ. ಟಿ. ಪದಕಿ, ಪೂಜಾರ ವಕೀಲ ಮುಂತಾದವರ ಸಾರಥ್ಯದಲ್ಲಿ ಈ ಹೋರಾಟ ನಿರಂತರ ಸುಮಾರು ೨–೩ ವರ್ಷ ನಡೆಯಿತು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ೧೯ ವರ್ಷದ ತರುಣ ಹಡಪದ ೩–೪ ಬಾರಿ ಬಂಧನಕ್ಕೊಳಗಾದರು.

ನೀಲಗಂಗಯ್ಯಾ ಪೂಜಾರರ ನೇತೃತ್ವದಲ್ಲಿ ಈ ಹೋರಾಟಕ್ಕೆ ಜಯ ಲಭಿಸಿ ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸಿತು. ಪದಕಿ ಹಾಗೂ ಪೂಜಾರ ವಕೀಲರ ಸಲಹೆಯಂತೆ ಹಡಪದ ಧಾರವಾಡಕ್ಕೆ ಬಂದು ಸಲೂನ್ ಒಂದರಲ್ಲಿ ಕೆಲಸಕ್ಕೆ ನಿಂತರು. ಶಾಂತವೇರಿ ಗೋಪಾಲಗೌಡರ ಸಂಪರ್ಕ ಬಂದಾಗ ಅವರ ಮೆಚ್ಚುಗೆಗೂ ಪಾತ್ರರಾದ ಹಡಪದ ಸಕ್ರಿಯವಾಗಿ ಹೋರಾಟದಲ್ಲಿ ಪಾಲ್ಗೊಂಡರು. ಬೆಂಗಳೂರು, ಮೈಸೂರು, ಶಿವಮೊಗ್ಗೆಯ ಸಮಾಜವಾದಿ ಧುರೀಣರ ಹಾಗೂ ಕಾರ್ಯಕರ್ತರ ನಿಕಟ ಸಂಪರ್ಕ ಹೊಂದಿದ್ದ ಹಡಪದ ಅವರನ್ನು ಶಾಸಕ ಗೋಪಾಲಗೌಡರು ಅಗತ್ಯ ಬಿದ್ದಾಗ ಟೆಲಿಗ್ರಾಮ್ ಕೊಟ್ಟು ಬೆಂಗಳೂರಿಗೆ ಕರೆಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿಯೇ ಪ್ರೊ. ನಂಜುಂಡಸ್ವಾಮಿ, ಜೆ. ಎಚ್. ಪಟೇಲ, ಬಂಗಾರಪ್ಪ ಮುಂತಾದ ಮಹನೀಯರ ಸಂಪರ್ಕ ಸಾಧ್ಯವಾಯಿತು.

ಇದೆಲ್ಲದರ ಪರಿಣಾಮವಾಗಿ ಹಡಪದ ರಾಚಪ್ಪ ಅವರನ್ನು ಸಮಾಜವಾದಿ ಯುವಜನಸಭಾದ ಉತ್ತರ ಕರ್ನಾಟಕದ ಸಂಚಾಲಕರನ್ನಾಗಿ ನೇಮಿಸಲಾಯಿತು. ಎಸ್.ಎಸ್. ಕುಮಟಾ, ಜೆ. ಎಚ್. ಪಟೇಲ, ಪ್ರಭಾಕರ ಕಾಳೆ ಮುಂತಾದವರು ನಡೆಸುತ್ತಿದ್ದ ಅಧ್ಯಯನ ಶಿಬಿರದಲ್ಲಿ ರಾಚಪ್ಪ ಸಕ್ರಿಯವಾಗಿ ಪಾಲ್ಗೊಂಡು ಆಸಕ್ತಿಯಿಂದ ಆಲಿಸುತ್ತಿದ್ದರು. ಅಲ್ಲಿಯೇ ಪಿ. ಲಂಕೇಶ, ಪೂಚಂತೇ, ರವಿವರ್ಮ ಕುಮಾರ, ಪ್ರೊ. ರಾಮದಾಸ್ ಮುಂತಾದವರ ಸಂಪರ್ಕ ರಾಚಪ್ಪನಿಗೆ ದೊರೆಯಿತು. ಹಡಪದ ಅವರು ತತ್ವ, ಸಿದ್ಧಾಂತಗಳನ್ನು ತಿಳಿದುಕೊಳ್ಳುತ್ತಿದ್ದರಾದರೂ ಅವರದು 'ಆ್ಯಕ್ಷನ್ ಓರಿಯೆಂಟೆಡ್'ನತ್ತ ತುಡಿಯುವ ಮನಸ್ಸಾಗಿತ್ತು. 'ಥಿಯರಿ'ಗಿಂತ 'ಪ್ರಾಕ್ಟಿಕಲ್'ಗೆ ಅವರು ಕೂಡಲೇ ಸ್ಪಂದಿಸುತ್ತಿದ್ದರು.


೧೯೭೫ರ ತುರ್ತು ಪರಿಸ್ಥಿತಿಯ ಕರಾಳ ದಿನಗಳಲ್ಲಿ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ದೇಶದಾದ್ಯಂತ ಇಂದಿರಾ ವಿರುದ್ಧ ನಡೆದ ತೀವ್ರ ಚಳುವಳಿಗೆ ಧಾರವಾಡದ ಬುದ್ಧಿಜೀವಿಗಳು, ಸಾಹಿತಿ, ಕಲಾವಿದರು ಸಹ ಸಹಜವಾಗಿ ಸ್ಪಂದಿಸಿದರು. ನವನಿರ್ಮಾಣ ಕ್ರಾಂತಿ ಆಂದೋಲನದ ಸಂದರ್ಭದಲ್ಲಿ ಜಾರ್ಜ್ ಫರ್ನಾಂಡೀಸ್‌ರು ಕನ್ನಡ, ಹಿಂದಿ, ಇಂಗ್ಲೀಷ್, ತಮಿಳು, ತೆಲಗು, ಉರ್ದು ಸೇರಿದಂತೆ ವಿವಿಧ ಭಾಷೆಗಳಲ್ಲಿ ಕರಪತ್ರ ಮುದ್ರಿಸಿ ಹಡಪದ ರಾಚಪ್ಪನ ಸಲೂನ್‌ಗೆ ಮುಟ್ಟಿಸುತ್ತಿದ್ದರು. ಅವುಗಳನ್ನು ಯುವಜನರು, ವಿದ್ಯಾರ್ಥಿಗಳು ಮಧ್ಯರಾತ್ರಿ ಎರಡನೇ ಸಿನೇಮಾ ಬಿಟ್ಟು ಜನ ಹೊರಬರುತ್ತಿದ್ದಂತೇ ಅವರೊಂದಿಗೆ ಸೇರಿಕೊಂಡು ಆ ಕರಪತ್ರಗಳನ್ನು ಅಂಗಡಿ ಮುಂಗಟ್ಟುಗಳಲ್ಲಿ ಎಸೆದು ಹೋಗುತ್ತಿದ್ದರು.

(೫ನೇ ಪುಟಕ್ಕೆ

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೨೮

–ಇಂದಿರಾ ಬಿ. ಕೃಷ್ಣಪ್ಪ

## ತುಂಗಳ 'ಕಥೆ'ಯೂ, ದಸಂಸದ 'ವ್ಯಥೆ'ಯೂ



ಬಾಬುರೆಡ್ಡಿ ತುಂಗಳ

**ಕೃ**ಷ್ಣಪ್ಪ ಒಮ್ಮೆ ನನಗೆ, ಬಾಬುರೆಡ್ಡಿ ತುಂಗಳ್ ಎಂಬ ಏಕಾಂಗಿ ಹೋರಾಟಗಾರನ ಬಗ್ಗೆ ಹೇಳುತ್ತಾ, "ಅವನ ಜೀವನವೊಂದು ಕಥೆಯಂತಿದೆ. ನೀನು ಆ ಕಥೆಯನ್ನು ಬರೆಯಬಹುದು ನೋಡು," ಎಂದಿದ್ದರು. ಆತನ ಬಗ್ಗೆ ಅವರು ಹಲವಾರು ಘಟನೆಗಳನ್ನು ಹೇಳಿದ್ದರು. ಆತ ಜಮಖಂಡಿಯವನು. ಆತ ಜಾತಿ–ಮತ ವಿರೋಧಿಸಿ, ಜಾತ್ಯಾಂಧರೆದುರು ಬಹಿರಂಗವಾಗಿ ಸೆಡ್ಡು ಹೊಡೆದು ನಿಂತಿದ್ದು ಕೃಷ್ಣಪ್ಪನಿಗೆ ಬಹಳ ಮೆಚ್ಚುಗೆಯಾದ ವಿಷಯವಾಗಿತ್ತು. ಬೇಡ ಸಮುದಾಯಕ್ಕೆ ಸೇರಿದ್ದ ಈತ ದಲಿತ ಹೆಣ್ಣುಮಗಳನ್ನು ಪ್ರೀತಿಸಿದ್ದ. ಆತನ ಸಹೋದರ ಮತ್ತು ಊರವರು ವಿರೋಧಿಸಿದರು. ಆದರೂ ಎಲ್ಲರೆದುರಿಗೆ ಆಕೆಯನ್ನು ಕರೆದುಕೊಂಡು ನಡದೇ ಬಿಟ್ಟ. "ಯಾರಾದರೂ ತರುಬುವವರಿದ್ದರೆ ತರುಬಿ" ಎಂದು ಸಿಂಹಗರ್ಜನೆ ಹಾಕುತ್ತಾ ಆಕೆಯನ್ನು ಕರೆದೊಯ್ದ ಪರಿ ಸಿನಿಮೀಯ ರೀತಿಯಲ್ಲಿ ಕಾಣುತ್ತದೆ.

ವಿಜಾಪುರದಲ್ಲಿ ಮದುವೆಯಾಗಿ ಊರಿಗೆ ಹಿಂತಿರುಗಿದಾಗ ಆತನ ಅಣ್ಣ ಅವರಿಬ್ಬರನ್ನು ಮನೆಗೆ ಸೇರಿಸಲಿಲ್ಲ. ಪೋಲೀಸ್ ಕರೆತಂದು ಮನೆ ಭಾಗ ಮಾಡಿಸಿಕೊಂಡು ವಾಸಿಸಲಾರಂಭಿಸಿದ. ಇವನಿಗೆ ಸಾರ್ವಜನಿಕ ಬಾವಿಯಿಂದ ನೀರು ಸೇದಲು ಅವಕಾಶಕೊಡಲಿಲ್ಲ. ಈ ಬಗ್ಗೆ ವಿಜಾಪುರದಲ್ಲಿ ದೂರು ಸಲ್ಲಿಸಿದ. ಎರಡು ದಿನಗಳ ನಂತರ ಒಂದು ಕೈಲಿ ಕೊಡ್ಲಿ ಹಿಡಿದು ಇನ್ನೊಂದು ಕೈಲಿ ಬಿಂದಿಗೆಗೆ ಹಗ್ಗಾ ಕಟ್ಟಿ ಬಾವಿಗೆ ಬಿಟ್ಟಿದ್ದೇ ತಡ, ಜಾತ್ಯಸ್ಥರು ಕೊಡಲಿ ಹಿಡಿದು ಬಂದು ಅವನನ್ನು ಸುತ್ತುವರಿದರು. ಬಾವಿ ಹಗ್ಗ ಹಿಡಿದೆಳೆದು ಕತ್ತರಿಸಿದರು. ಕೊಡ 'ದಡೀಲ್' ಎಂಬ ಶಬ್ದದೊಂದಿಗೆ ಬಾವಿಗೆ ಬಿತ್ತು. ಕ್ಷಣಾರ್ಧದಲ್ಲೇ ತುಂಗಳ್ ಹಗ್ಗ ಕಡಿದವನ ಕೈಯನ್ನು ಒಂದೇ ಏಟಿಗೆ ತುಂಡರಿಸಿದ. ಅದೇ ವೇಳೆಗೆ ಪೋಲೀಸ್‌ರ ಪ್ರವೇಶವಾಗಿ ಎಲ್ಲರನ್ನು ಬಂಧಿಸಿದರು.

ಕೇಳುತ್ತಿದ್ದರೆ ನಿಜವೋ ಕಟ್ಟುಕತೆಯೋ ಎಂದು ಎನ್ನಿಸುತ್ತದೆ. ಆತನ ಕಾಲೇಜು ದಿನಗಳಲ್ಲಿ, ಅವನ ಕ್ರಿಶ್ಚಿಯನ್ ಸ್ನೇಹಿತನೊಬ್ಬ ದಲಿತರ ಹುಡುಗಿಯನ್ನು ಪ್ರೀತಿಸಿದ್ದು, ಮನೆಯವರ ಒತ್ತಾಯದಿಂದ ಅವಳನ್ನು ತ್ಯಜಿಸಲು ಸಿದ್ಧನಾಗಿದ್ದ. ತುಂಗಳ್, ಅವನಿಗೆ ಪ್ರಾಣಬೆದರಿಕೆಯೊಡ್ಡಿ ಪ್ರೀತಿಸಿದವಳೊಂದಿಗೆ ಮದುವೆ ಮಾಡಿಸಿದ್ದ. ಬಕ್ರೀದ್ ಹಬ್ಬದಲ್ಲಿ ಮಸೀದಿಗೂ, ಕ್ರಿಸ್‌ಮಸ್‌ನಲ್ಲಿ ಚರ್ಚ್‌ಗೂ, ಯುಗಾದಿಯಲ್ಲಿ ದೇವಸ್ಥಾನಕ್ಕೂ ಹೋಗುತ್ತಾ, ಸರ್ವಧರ್ಮ ಸಮಭಾವವನ್ನು ನಡೆನುಡಿಯಲ್ಲಿ ಪ್ರದರ್ಶಿಸಿದ್ದ.

ಈತನ ಮತ್ತೊಂದು ವಿಶಿಷ್ಟವಾದ, ಸಾಮಾಜಿಕ ಹಿತದಕಾರ್ಯ ಎಂದರೆ, ಜಮಖಂಡಿ ತಾಲ್ಲೂಕಿನ ಹಳ್ಳಿಗಳಿಗೆ ಮಹಾರಾಷ್ಟ್ರದಿಂದ ನೀರು ಹರಿಸಿದ್ದು. ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ ಕಾರಣದಿಂದ ಜಮಖಂಡಿಯ ಹಳ್ಳಿಗಳಿಗೆ ನದಿ ನೀರು ಬಿಡುವುದಿಲ್ಲವೆಂದು ಮಹಾರಾಷ್ಟ್ರದ ಗಡಿಭಾಗದ ಅಧಿಕಾರಿಗಳು ತರಲೆ ತೆಗೆದರು. ತುಂಗಳ್, ಈ ವಿಷಯವನ್ನು ಸ್ವಾಭಿಮಾನದ ಪ್ರಶ್ನೆಯಾಗಿ ತೆಗೆದುಕೊಂಡ. ಅಲ್ಲಿನ ಅಧಿಕಾರಿಗಳಿಗೆ, 'ನಾವೆಲ್ಲಾ ಭಾರತೀಯರು, ಇಲ್ಲಿ ನಾವು ನೀರಿಲ್ಲದೆ ಸಾಯುವುದನ್ನು ನೀವು ನೋಡುವಿರೇನು? ನೀವು ನೀರು ಬಿಡಿ. ಇಲ್ಲದಿದ್ದರೆ ಡ್ಯಾಂಗೆ ಬಾಂಬ್ ಹಾಕುತ್ತೇನೆ!' ಎಂದು ರಣಘೋಷವನ್ನೇ ಮಾಡಿಬಿಟ್ಟ. ಅಪಾಯದ ಕರೆಗಂಟೆಗೆ ಕಂಪಿಸಿದ ಅಧಿಕಾರಿಗಳು ನೀರು ಬಿಟ್ಟಿದ್ದನ್ನು ಇಂದಿಗೂ ಜನ ಸ್ಮರಿಸಿಕೊಳ್ಳುವರು.

ತದನಂತರದಲ್ಲಿ ತುಂಗಳ್ ಕಮ್ಯುನಿಸ್ಟ್ ಲೀಡರ್ ಆಗಿ ಬೆಳೆದನೆಂದು ಕೃಷ್ಣಪ್ಪ ಹೇಳಿದ್ದರು.(ಆದರೆ ನನಗೆ ತಿಳಿದಂತೆ ತುಂಗಳ್ ಲೋಹಿಯಾವಾದಿ ಸೋಷಲಿಸ್ಟ್ ಎಂದು ತಮ್ಮನ್ನು ಗುರುತಿಸಿಕೊಂಡು 'ಕುರುಕ್ಷೇತ್ರ' ಎಂಬ ಪತ್ರಿಕೆಯನ್ನೂ ನಡೆಸಿದರು. ಎಂಬತ್ತರ ದಶಕದಲ್ಲೊಮ್ಮೆ ರಾಜ್ಯ ವಿಧಾನ ಸಭೆಗೆ ಜನತಾ ಪಕ್ಷದ ಸದಸ್ಯರಾಗಿ ಆಯ್ಕೆಯೂ ಆಗಿದ್ದರು–ಸಂ.) ಈ ವೃತ್ತಾಂತಗಳನ್ನೇ ಇಟ್ಟುಕೊಂಡು ನಾನೂ ಕಥೆ ಬರೆದೆ. ನನ್ನ ಕಥೆ ಬಗ್ಗೆ ಸಂತೃಪ್ತಿ ಇರಲಿಲ್ಲ. ಆದಾಗ್ಯೂ ಅದನ್ನು ಓದಲು–ತಿದ್ದಲು ಕೃಷ್ಣಪ್ಪನಿಗೆ ಕೊಟ್ಟಿದ್ದೆ. ಅವರು ಕೆಲವು ಮಾರ್ಪಾಡುಗಳನ್ನು ಸೂಚಿಸಿದರು. ಇಂದಿಗೂ ನನಗೆ ಆ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಕಥೆ ಪೂರ್ಣಗೊಳಿಸಲಾಗಲೇ ಇಲ್ಲ. ಈ ತಹಲ್‌ವರೆಗೂ ನನಗೆ ಆತನನ್ನೊಮ್ಮೆ ಭೇಟಿಯಾಗಿ, ಆತನ ಬಾಯಲ್ಲೇ ಕೇಳಿ, ಬರೆಯುವ ಆಸೆ ಕಮರಿಲ್ಲ.



ಇಂದಿರಾ, ಎಂಡಿಎನ್‌ರೊಂದಿಗೆ ಬಿ.ಕೆ, ಎಪ್ಪತ್ತರ ದಶಕದಲ್ಲಿ

ಆ ದಿನಗಳಲ್ಲಿ, ಕರ್ನಾಟಕ ದಸಂಸ ವಿವಿಧ ಆಯಾಮಗಳಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಕೃಷ್ಣಪ್ಪ, ದಸಂಸಗಾಗಿ ಜೀವ–ಜೀವನವನ್ನೇ ಅರ್ಪಿಸಿಕೊಂಡಿದ್ದರು. ದಸಂಸ ರಾಜ್ಯವ್ಯಾಪಿ ವಿಸ್ತಾರವಾಗುತ್ತಿದ್ದಂತೆ, ಸಮಿತಿಯೊಳಗೆ ಮೆಲ್ಲಗೆ, ಗುಂಪುಗಾರಿಕೆ, ಅಪ್ರಾಮಾಣಿಕತೆ, ಸ್ವಾರ್ಥ, ಅಶಿಸ್ತುಗಳು ಹೆಜ್ಜೆಯಿಡುತ್ತಿರುವ ದುರ್ಗಂಧ ಕೃಷ್ಣಪ್ಪನ ಮೂಗಿಗೆ ಬಡಿಯಲಾರಂಭಿಸಿತು. ರಾಜ್ಯ ಕಾರ್ಯನಿರ್ವಾಹಕ ಸಮಿತಿ, ಸಕ್ರಿಯ ಪದಾಧಿಕಾರಿಗಳ ಅಂಗಳದಲ್ಲಿ ಈ ವಿಷಯಗಳು ಚರ್ಚೆಗೆ ಬಂದವು.

ಕೆಲವು ಜಿಲ್ಲಾ ಸಂಚಾಲಕರುಗಳು ರಾಜಕೀಯ ಬಾಲಂಗೋಚಿಗಳಾಗುತ್ತಿರುವುದು, ಸ್ವಲಾಭಕ್ಕಾಗಿ ಸಂಘಟನೆಯನ್ನು ಒತ್ತೆ ಇಡುವ ಕಾರ್ಯಕರ್ತರ ಕೃತ್ಯಗಳು ಕೃಷ್ಣಪ್ಪನಿಗೆ ತೀವ್ರ ದು:ಖ ಆತಂಕಗಳನ್ನು ತಂದೊಡ್ಡಿತ್ತು. ಆಂತರಿಕ ಶಿಸ್ತು ಹಾಗೂ ಪ್ರಾಮಾಣಿಕತೆಯೇ ಜೀವಾಳವಾಗಿರುವ ಸಂಘಟನೆಯೊಳಗೆ, ಉಪಜಾತಿ ಪಂಗಡಗಳ ಪ್ರಸ್ತಾಪಗಳು ಹಾಗೂ ರಾಜಕೀಯ ದುರ್ಲಾಭ ಇವುಗಳಿಂದ ಹತಾಶೆಗೊಂಡ ಕೃಷ್ಣಪ್ಪ, ೧೯೮೧ರಲ್ಲಿ ಈ ವಿಷಯಗಳನ್ನೇ ಪ್ರಸ್ತಾಪಿಸಿ, ರಾಜ್ಯ ಸಂಚಾಲಕತ್ವಕ್ಕೆ ರಾಜೀನಾಮೆ ನೀಡಿ ಪ್ರತಿಗಳನ್ನು ಜಿಲ್ಲಾ ಸಂಚಾಲಕರುಗಳಿಗೆ ಕಳುಹಿಸಿದರು. ಆ ದಿನಗಳಲ್ಲಿ ಕೃಷ್ಣಪ್ಪ ತೀವ್ರವಾಗಿ ನೊಂದಿದ್ದರು. ಅದುವರೆಗೂ ಸಂಘಟನೆಯ ಕೆಲಸಕ್ಕಾಗಿ ರಾಜ್ಯವ್ಯಾಪ್ತಿ ಸುತ್ತುತ್ತಿದ್ದ ಕೃಷ್ಣಪ್ಪ ಆಯಾಸ–ಬಳಲಿಕೆಯಿಂದ, ಯಾವಾಗೆಂದರೆ ಆಗ–ಕುಂತಲ್ಲಿ–ಓದುವಲ್ಲಿ–ಪ್ರಯಾಣದಲ್ಲಿ–ಅರೆಕ್ಷಣದಲ್ಲಿ ನಿದ್ದೆಗೆ ಜಾರುತ್ತಿದ್ದವರು, ರಾಜೀನಾಮೆಯ ಸಂದರ್ಭದಲ್ಲಿ ನಿದ್ರಾವಿಹೀನರಾದರು. ಶತಪಥ ಓಡಾಡುವುದು, ಕೈಕಟ್ಟಿ ಕುಳಿತು ಆಲೋಚನಮಗ್ನರಾಗಿ, ಮೌನಕ್ಕೆ, ಇಳಿದು ಬಿಡುತ್ತಿದ್ದರು.

ರಾಜೀನಾಮೆ ಪತ್ರ ಕಂಡ ಪದಾಧಿಕಾರಿಗಳು, ತೀವ್ರ ಆಘಾತಕ್ಕೊಳಗಾಗಿ, ಬೆಂಗಳೂರಿನಲ್ಲಿ ಸಭೆ ಸೇರಿ, ರಾಜೀನಾಮೆ ಹಿಂತೆಗೆದುಕೊಳ್ಳಲು ಪ್ರೀತಿಯಿಂದ ಒತ್ತಾಯ ಮಾಡಬೇಕೆಂದು, ಅವರೇ ರಾಜ್ಯ ಸಂಚಾಲಕರಾಗಿ ಮುಂದುವರಿಯಬೇಕೆಂದು ತೀರ್ಮಾನಿಸಿದರು. ಜಿಲ್ಲಾವಾರು ಸಭೆ ನಡೆಸಿ, ರಾಜೀನಾಮೆ ಹಿಂತೆಗೆದು ಅವರೇ ರಾಜ್ಯ ಸಂಚಾಲಕರಾಗಬೇಕೆಂದು ಪ್ರೀತಿಯಿಂದ, ನೋವಿನಿಂದ ಒತ್ತಾಯಿಸಿದ್ದರು. ಕೃಷ್ಣಪ್ಪನವರನ್ನು ದು:ಖಕ್ಕೀಡು ಮಾಡಿರುವ ಸಂಗತಿಗಳಿಗೆ ಎಲ್ಲರೂ ಸೇರಿ ನಿವಾರಣೋಪಾಯಗಳಿಗಾಗಿ ಶ್ರಮಿಸುವುದು ಮತ್ತು ಸಂಘಟನೆಯ ಚಿಗುರು ಚಿವುಟಿ ಹೋಗದಂತೆ ಬೆಳಸಬೇಕೆಂದು, ದೇವಯ್ಯ ಹರವೆ, ಚಂದ್ರಪ್ರಸಾದ್ ತ್ಯಾಗಿ, ಎಂ.ಡಿ. ಗಂಗಯ್ಯ, ರುದ್ರಸ್ವಾಮಿ, ಚೆನ್ನಣ್ಣ ವಾಲೀಕಾರ್, ಮಂಗಳೂರು ವಿಜಯ ಮುಂತಾದವರು ವೈಯಕ್ತಿಕ ಪತ್ರವನ್ನು ಬರೆದಿದ್ದರು. ಹಲವರು, ಮನೆಗೆ ಬಂದು ಭೇಟಿಯಾಗಿ ಮಾತುಕತೆ ನಡೆಸಿದರು. ಅದರ ಫಲವಾಗಿ ರಾಜೀನಾಮೆ ಅಂಗೀಕಾರವಾಗದೆ, ಕೃಷ್ಣಪ್ಪನೇ ರಾಜ್ಯ ಸಂಚಾಲಕರಾಗಿ ಮುಂದುವರಿಯುವಂತಾಯಿತು.

ತದ ನಂತರದಲ್ಲಿ ಕೃಷ್ಣಪ್ಪ ಫೀನಿಕ್ಸ್ ಹಕ್ಕಿಯಂತೆ ನವೋತ್ಸಾಹದಿಂದ ರೆಕ್ಕೆಬಿಚ್ಚಿ ಹಾರಿಬಂದಂತೆ ದಸಂಸವನ್ನು ವ್ಯಾಪಕವಾಗಿ, ಸೈದ್ಧಾಂತಿಕವಾಗಿ ಬೆಳಸಿದ್ದನ್ನು ನಾವು ಕಾಣಬಹುದು. ಇದರ ಸಂವಾದಿಯಾಗಿ ನಾಲ್ಕಾರು ನಿದರ್ಶನಗಳನ್ನು ಇಲ್ಲಿ ಹೇಳಬಹುದೆಂದು ಭಾವಿಸಿದ್ದೇನೆ. ರಾಜ್ಯಾದ್ಯಂತ

ಜಿಲ್ಲಾವಾರು ನಡೆದ ಅಂಬೇಡ್ಕರ್ ಸ್ಮರಣದಿನವನ್ನು ಪ್ರತಿಜ್ಞಾ ದಿನವನ್ನಾಗಿ ಆಚರಣೆ ಮಾಡುತ್ತಾ, 'ಕುರಿ ಕೋಳಿ, ಸೀರೆ ತಾಳಿ ಬೇಡ. ಹೋಬಳಿಗೊಂದು ವಸತಿ ಶಾಲೆ ಕೊಡಿ' ಎಂಬ ಸಾರ್ವತ್ರಿಕ ಶಿಕ್ಷಣದ ಬೇಡಿಕೆಯೊಂದಿಗೆ, ದಲಿತ ವಿದ್ಯಾವಂತರು ಅವಿದ್ಯಾಂತರನ್ನು ವಿದ್ಯಾವಂತರನ್ನಾಗಿಸುವ ಪ್ರತಿಜ್ಞೆ ಮಾಡಿದ್ದು, ದಲಿತ ವಿದ್ಯಾರ್ಥಿ ಒಕ್ಕೂಟದ ಪ್ರಥಮ ರಾಜ್ಯ ಸಮ್ಮೇಳನವನ್ನು ಕೋಲಾರದಲ್ಲಿ ನಡೆಸಿದ್ದು, ರಾಜ್ಯದ ಚಳುವಳಿಯನ್ನು ಅಂತರ ರಾಜ್ಯವ್ಯಾಪಕತೆಗೊಳಿಸಲು ಮತ್ತು ಜ್ಞಾನ ಶಿಸ್ತುಗಳನ್ನು ಕಾರ್ಯಕರ್ತರಲ್ಲಿ ಬೆಳೆಸಲು, ನೆರೆಯ ರಾಜ್ಯಗಳ ಚಳುವಳಿಗಳ ನಾಯಕರಾದ ಬೊಜ್ಜ ತಾರಕಂ, ಕತ್ತಿ ಪದ್ಮರಾವ್, ಕೇಶವರಾವ್ ಜಾಧವ್ (ಆಂಧ್ರ) ಟಿ.ಎಂ. ಕಾಂಬಳೆ, ರಾಮದಾಸ್ ಅಠಾವಳೆ, ಡಾ. ಮಾಲಿ ಪಾಟೀಲ್ ಪ್ರೊ. ಅರುಣ್‌ಕಾಂಬ್ಳೆ (ಮಹಾರಾಷ್ಟ್ರ) ಯವರನ್ನು ಸಮಾವೇಶಗಳಿಗೆ ಕರೆಯಿಸಿದ್ದು. ಶ್ರೀಮತಿ ಸವಿತಾ ಅಂಬೇಡ್ಕರ್ ಮತ್ತು ಪ್ರಕಾಶ್ ಅಂಬೇಡ್ಕರ್‌ರವರನ್ನು ಸಮಾರಂಭಗಳಿಗೆ ಕರೆಯಿಸಿ, ಕಾರ್ಯಕರ್ತರಲ್ಲಿ ಆಪ್ತತೆ ಹಾಗೂ ಅಂತಃಕರಣ ಸಂಬಂಧವನ್ನು ಬೆಸೆದದ್ದು, ಜಿಲ್ಲಾವಾರು ಕಲಾಮೇಳಗಳನ್ನು ಆಯೋಜಿಸಿ 'ಕಲೆಗಾಗಿ ಕಲೆಯಲ್ಲ, ಜನಸಮುದಾಯಕ್ಕಾಗಿ ಕಲೆ' ಎಂಬ ಸಮುದಾಯದ ಆಶಯ ಪ್ರತಿಪಾದಿಸಿದ್ದನ್ನು ಗಮನಿಸಬಹುದಾಗಿದೆ.

ಸಾಂಸ್ಥಿಕವಾಗಿ, ದಸಂಸವನ್ನು ಮುನ್ನೆಡೆಸಲು ಸಂವಿಧಾನ ರಚಿಸಲು, ಬಾಗೇಪಲ್ಲಿಯ ಕೆ. ನಾರಾಯಣಸ್ವಾಮಿ ಅಧ್ಯಕ್ಷರಾಗಿಯೂ, ದೇವನೂರು ಮಹಾದೇವ, ಕೆ.ಬಿ.ಸಿದ್ಧಯ್ಯ, ಕೆ. ರಾಮಯ್ಯ, ಸಿದ್ಧಲಿಂಗಯ್ಯ, ಎಚ್. ಗೋವಿಂದಯ್ಯ, ರಾಮದೇವ ರಾಕೆ ಇವರುಗಳು ಸದಸ್ಯರಾಗಿರುವ ಪ್ರೊ. ಬಿ.ಕೆ.ಯವರ ಮೇಲ್ವಿಚಾರಕತ್ವದ ಉಪಸಮಿತಿ ರಚಿಸಲಾಯಿತು. ದಸಂಸದ ಧ್ವನಿಯಾದ 'ಪಂಚಮ' ಪತ್ರಿಕೆ ಕಾಲಾನುಕ್ರಮದಲ್ಲಿ ಪ್ರೊ. ಬಿ.ಕೆ, ದೇವನೂರು ಮಹಾದೇವ, ಕೆ. ರಾಮಯ್ಯ, ಗೋವಿಂದಯ್ಯ, ರಂಗಸ್ವಾಮಿ ಬೆಲ್ಲದಮಡು, ಕೆ.ಬಿ.ಸಿದ್ಧಯ್ಯ, ಮುಳ್ಳೂರು ನಾಗರಾಜ್, ರಾಮದೇವ ರಾಕೆ ಹಾಗೂ ಇಂದೂಧರ ಹೊನ್ನಾಪುರ ಇನ್ನು ಮುಂತಾದವರ ಸಂಪಾದಕತ್ವದಲ್ಲಿ, ಮುದ್ರಿತಗೊಂಡು ಮನೆಮನಗಳನ್ನು ತಲುಪುವಂತಾಗಿತ್ತು. ಇದರೊಂದಿಗೆ ದಸಂಸದ ವಾರ್ತಾಪತ್ರವೂ ಖಾಸಗಿ ಉದ್ದೇಶಕ್ಕಾಗಿ ಪ್ರಕಟಗೊಂಡು ಜಿಲ್ಲಾ–ತಾಲ್ಲೂಕುವಾರು ನಡೆಯುವ ಸಭೆ–ಸಮಾರಂಭ–ಸಮ್ಮೇಳನಗಳ ನಿರ್ಣಯಗಳನ್ನು ಕಾರ್ಯಕರ್ತರಿಗೆ ತಲುಪಿಸುತ್ತಿತ್ತು. ಪ್ರಥಮ ವಾರ್ತಾಪತ್ರದ ವ್ಯವಸ್ಥಾಪಕ ಸಂಪಾದಕರಾಗಿ ಪ್ರೊ. ಬಿ.ಕೃಷ್ಣಪ್ಪ ಹಾಗೂ ಸಂಪಾದಕರಾಗಿ ಕೆ.ಬಿ. ಸಿದ್ಧಯ್ಯ ಮತ್ತು ಮಂಗಳೂರು ವಿಜಯ ಕಾರ್ಯ ನಿರ್ವಹಿಸತೊಡಗಿದರು.

ಇದೆಲ್ಲದರ ಮುಂದುವರಿಕೆಯಾಗಿ ದಸಂಸದ ಪ್ರಣಾಳಿಕೆ ಸಿದ್ಧಪಡಿಸಲು ಕೆ.ನಾರಾಯಣಸ್ವಾಮಿ, ದೇವನೂರು ಮಹಾದೇವ ಸಿದ್ಧಲಿಂಗಯ್ಯ, ವಿಜಯ ಪಾಟೀಲ, ಓ. ಶ್ರೀಧರನ್, ಓ. ರಾಜಣ್ಣ, ಇಂದೂಧರ ಹೊನ್ನಾಪುರ, ಎಚ್. ಗೋವಿಂದಯ್ಯ, ರಾಮದೇವರಾಖೆ, ಶಿವಾಜಿಗಣೇಶನ್, ಕೆ.ಬಿ. ಸಿದ್ಧಯ್ಯ, ಶ್ರೀಧರಕಲಿವೀರ, ರುದ್ರಪ್ಪ ಹನಗವಾಡಿ, ಗುರುರಾಜ್ ಬೀಡೀಕರ್, ಬಿ.ಕೃಷ್ಣಪ್ಪನವರನ್ನೊಳಗೊಂಡ ಪ್ರಣಾಳಿಕಾ ಸಮಿತಿಯೊಂದನ್ನು ರಚಿಸಲಾಯಿತು.

**(ಮುಂದುವರೆಯುವುದು)**

---

**(೩ನೇ ಪುಟದಿಂದ)**

ಈ ಕರಪತ್ರಗಳು ಹಡಪದ ಸಲೂನ್‌ದಿಂದಲೇ ವಿತರಣೆಯಾಗುತ್ತವೆ ಎಂಬುದನ್ನು ಪತ್ತೆ ಮಾಡಿದ ಪೊಲೀಸ್‌ರು ಅವರಿಗೆ ಕಿರುಕುಳ ಕೊಡಲಾರಂಭಿಸಿದರು. ಆಗ ಮುರಕಟ್ಟಿಗುಡ್ಡದಲ್ಲಿ ಭೂಗತರಾಗಿದ್ದುಕೊಂಡೇ ಹಡಪದರು ಸಲೂನ್‌ದಿಂದ ಕರಪತ್ರ ಹಂಚಿಕೆಯ ಮೇಲ್ವಿಚಾರಣೆ ನಡೆಸಿದ್ದರು. ಆಗ ಧಾರವಾಡ ಜಿಲ್ಲಾಧಿಕಾರಿಯಾಗಿದ್ದ ಕೆ, ವಿ. ಇರ್ನಿರಾಯ ಎನ್ನುವವರು ಈ ಎಲ್ಲ ಚಟುವಟಿಕೆಗಳ ಮೇಲೆ ನಿಗಾ ಇಡುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ಅಲಮೇಲಕರ ಎಂಬ ಪೊಲೀಸ್ ಅಧಿಕಾರಿ ಮಧ್ಯವರ್ತಿಗಳ ಮೂಲಕ ಹಡಪದರರನ್ನು ಠಾಣೆಗೆ ಕರೆಸಿಕೊಂಡು ರಾತ್ರೋ ರಾತ್ರಿ ಮ್ಯಾಜಿಸ್ಟ್ರೇಟ್‌ರ ಎದುರು ಹಾಜರುಪಡಿಸಿ ಧಾರವಾಡ ಜೇಲ್‌ಗೆ ಕಳಿಸಿದರು. ೧೫ ದಿನಗಳ ನಂತರ ಅವರನ್ನು ಬೆಳಗಾವಿ ಹಿಂಡಲಗಾ ಜೇಲ್‌ಗೆ ವರ್ಗಾಯಿಸಲಾಯಿತು. ಧಾರವಾಡದಲ್ಲಿ ೧೫ ದಿನ, ಬೆಳಗಾವಿ ಹಿಂಡಲಗಾದಲ್ಲಿ ಎರಡೂವರೆ ತಿಂಗಳು ಹೀಗೆ ಒಟ್ಟು ಮೂರು ತಿಂಗಳು ಸೆರೆಮನೆ ವಾಸ ಅನುಭವಿಸಿ ಹಡಪದ ಬಿಡುಗಡೆಗೊಂಡರು.

ತುರ್ತು ಪರಿಸ್ಥಿತಿ ನಂತರ ೧೯೭೭ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನೂತನ ಜನತಾ ಪಕ್ಷದಲ್ಲಿ ಸಮಾಜವಾದಿ ಪಕ್ಷ ಕರಗಿ ಹೋಗಿ ಆ ಜನತಾ ಪಕ್ಷದ ಸರ್ಕಾರವೂ ಬಿದ್ದು ಹೋಗಿ ಸಮಾಜವಾದಿಗಳು ಅತಂತ್ರರಾದಾಗ ಕೆಲ ಸಮಾಜವಾದಿ ಕಾರ್ಯಕರ್ತರು ಕಿಶನ್ ಪಾಟ್ನಾಯಕ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ೧೯೮೦ರಲ್ಲಿ ಎರಡು ದಿನಗಳ ಸಭೆ ನಡೆಸಿದರು. 'ಸಮತಾ ಪಕ್ಷ' ಎಂಬ ನೂತನ ರಾಜಕೀಯ ಪಕ್ಷ ಸ್ಥಾಪಿಸಬೇಕೆಂಬ ಪ್ರಸ್ತಾವನೆ ಮೂಡಿ ಬಂತು. ಕೆಲವರು ವಿರೋಧವನ್ನೂ ವ್ಯಕ್ತಪಡಿಸಿದರು. ಅವರಲ್ಲಿ ಹಡಪದರು ಪ್ರಮುಖರು. ಶಹರ ಪ್ರದೇಶ ಹೊರತುಪಡಿಸಿ ಗ್ರಾಮೀಣ ಪ್ರದೇಶದ ರೈತ ಹಾಗೂ ಕೃಷಿ ಕಾರ್ಮಿಕರ ಪರ ಹೋರಾಡುವ ಸಂಘಟನೆ ಆರಂಭಿಸಬೇಕೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ತೇಜಸ್ವಿ, ರಾಮದಾಸ, ಲಂಕೇಶ ಅವರ ಅಭಿಪ್ರಾಯವೂ ಅದೇ ಆಗಿತ್ತು. ಸಭೆ ಯಾವುದೇ ಗಟ್ಟಿ ನಿರ್ಧಾರಗಳನ್ನು ಕೈಕೊಳ್ಳದೇ ಸಮಾರೋಪಗೊಂಡಿತು.

ಮುಂದೆ ಬೆಳಗಾವಿಯಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ರೈತರ ಸಾಲ ವಸೂಲಿಗಾಗಿ ಜಪ್ತಿ ಮಾಡಿದ್ದರ ವಿರುದ್ಧ ಧರಣಿ ಆರಂಭವಾಯಿತು. ಕುಂದರನಾಡ ಪಾಟೀಲ, ಹಡಪದ, ಸುರೇಶಬಾಬು ಗಜಪತಿ ಮುಂತಾವರ ನೇತೃತ್ವದಲ್ಲಿ ನಡೆದ ಈ ಹೋರಾಟದ ಕಾಲಕ್ಕೆ ಹಲಿಗೆ ಬಾರಿಸುತ್ತಾ ಹೋಗಿ ರೈತರಿಂದ ಜಪ್ತಿ ಮಾಡಿದ ವಸ್ತುಗಳನ್ನು ಸಹಕಾರ ಇಲಾಖೆಯಿಂದ ವಾಪಸ್ ಕೊಡಿಸಲಾರಂಭಿಸಿದರು. ಈ ಸಂದರ್ಭದಲ್ಲಿ ಬಾಬಾಗೌಡ ಪಾಟೀಲ, ರುದ್ರಪ್ಪ ಮೊಖಾಸಿ ಮುಂತಾದವರು ಬೆಂಬಲದ ನೆಪದಲ್ಲಿ ಬಂದು ಇವರು ಜಪ್ತಿ ಮಾಡಿದ್ದನ್ನು ಏನು ಮಾಡುತ್ತಾರೆ ಎಂಬುದನ್ನು ಪರೀಕ್ಷೆ ಮಾಡುತ್ತಿದ್ದರು ಎನ್ನುವದು ಹಡಪದರ ಅನುಮಾನ!

ಮುಂದೆ ಅವೈಜ್ಞಾನಿಕವಾಗಿ ಕರ ವಸೂಲು ಮಾಡುವದರ ವಿರುದ್ಧ ನವಲಗುಂದ, ನರಗುಂದ ರೈತರಿಂದ ಆರಂಭವಾದ ಹೋರಾಟ ಗೋಳಿಬಾರ್ ನಂತರ ಬೇರೆ ನಾಯಕರು ಚಳುವಳಿಯನ್ನೇ ಹೈಜಾಕ್ ಮಾಡಿದರು. ಸ್ಥಳಕ್ಕೆ ಭೆಟ್ಟಿ ನೀಡಲು ಬಂದ ರಾಜ್ಯದ ವಿವಿಧ ಭಾಗದ ರೈತ ಧುರೀಣರು ಹುಬ್ಬಳ್ಳಿಯ ವುಡ್‌ಲ್ಯಾಂಡ್ಸ್ ಹೊಟೆಲ್‌ದಲ್ಲಿ ಸಭೆ ಸೇರಿದರು. ಆಗ ರಾಜ್ಯ ರೈತ ಸಂಘ ಅಸ್ತಿತ್ವಕ್ಕೆ ಬಂತು. ಮುಂದೆ ಪ್ರೊ. ನಂಜುಂಡಸ್ವಾಮಿ ಅವರ ನೇತೃತ್ವದಲ್ಲಿ ಆಶಾದಾಯಕವಾಗಿ ಆರಂಭವಾದರೂ ಅದು ಹೋಳು ಹೋಳಾಗಿಹೋಯಿತು. ಗೋವೆ ವಿಮೋಚನೆ ಆಂದೋಲನದಲ್ಲಿ ಕೂಡಾ ರಾಚಪ್ಪ ಮುಖ್ಯ ಪಾತ್ರ ವಹಿಸಿದ್ದರು. ಹೀಗೆ ಕರ್ನಾಟಕದ ಸಮಾಜವಾದಿ ಆಂದೋಲನದಲ್ಲಿ ಅಷ್ಟೊಂದು ಶಿಕ್ಷಣ ಪಡೆಯದ, ಅದೂ ವೃತ್ತಿಯಿಂದ ಕ್ಷೌರಿಕನಾದ ದಲಿತ ಹಡಪದ ರಾಚಪ್ಪ ಮಿಂಚಿದ್ದಾರೆ.

ರಾಚಪ್ಪ ಹಡಪದರ ಬದುಕು ವಿವಿಧ ಕಾಲಘಟ್ಟಗಳಲ್ಲಿ ಅವರ ಕಾಮ್ರೇಡರುಗಳಲ್ಲಿ ಎಷ್ಟು ಕುತೂಹಲ, ಮೆಚ್ಚುಗೆ, ಅಭಿಮಾನಗಳನ್ನು ಹುಟ್ಟಿಸಿತ್ತೆಂದರೆ, ಇವರನ್ನು ನೋಡಲೆಂದೇ ಪೂರ್ಣಚಂದ್ರ ತೇಜಸ್ವಿ ತಮ್ಮ ಗೆಳೆಯ ರಾಮದಾಸ್‌ರೊಂದಿಗೆ ಮೂಡಿಗೆರೆಯಿಂದ ಸ್ಕೂಟರ್‌ನಲ್ಲಿ ಬಂದು ಮಾತಾಡಿಸಿ ಹೋದರಂತೆ. ಇನ್ನೊಮ್ಮೆ ಕಿಶನ್ ಪಟ್ನಾಯಕ್ ಅವರ ಪತ್ನಿ ಕಿತ್ತೂರು ಕೋಟೆ ನೋಡಲು ಪ್ರೊ. ನಂಜುಂಡಸ್ವಾಮಿ ಹಾಗೂ ಅವರ ಪತ್ನಿಯೊಂದಿಗೆ ಬಂದಾಗ ಹಡಪದರ ಊರು ಹೊಳೆಹೊಸೂರಿಗೆ ಬಂದು ಅವರ ತಾಯಿಯಯನ್ನು ಕಂಡು ಹೋಗಿದ್ದರು. ಇನ್ನೂ ವಿಶೇಷ ಎಂದರೆ ಕೇಂದ್ರ ಸರಕಾರದ ಔದ್ಯೋಗಿಕ ಮಂತ್ರಿಯಾಗಿದ್ದಾಗ ಜಾರ್ಜ್ ಫರ್ನಾಂಡಿಸ್ ಬೆಳಗಾವಿಯಿಂದ ಹುಬ್ಬಳ್ಳಿಗೆ ಹೋಗುತ್ತಿದ್ದಾಗ ಹೊಳೆಹೊಸೂರಿಗೆ ಹೋಗಿ ರಾಚಪ್ಪನ ತಾಯಿ ಕೊಟ್ಟ ಒಂದು ಕಪ್ಪು ಹಾಲು ಕುಡಿದು ಹೋಗಿದ್ದರು.

ಜೀವನದುದ್ದಕ್ಕೂ ಹಿರಿಯ ಸಾಹಿತಿ ಶಂ. ಭಾ. ಜೋಶಿಯವರಿಂದ ಹಿಡಿದು, ರಮ್‌ಜಾನ್ ದರ್ಗಾರವರೆಗೆ ಹಿರಿ–ಕಿರಿಯ ಸಾಹಿತಿಗಳ ಸಂಪರ್ಕದಲ್ಲಿ ವೈಚಾರಿಕತೆ ಕಂಡುಕೊಂಡ ರಾಚಪ್ಪ ತೀವ್ರ ತೊಂದರೆಗೆ ಒಳಗಾದಾಗ ಅವರ ಎಲ್ಲ ಆತ್ಮೀಯರನ್ನು ಒಂದುಗೂಡಿಸಿ ಸಹಾಯ ಕಲ್ಪಿಸಿ ವಾಸಕ್ಕೊಂದು ನೆರಳು ಕಲ್ಪಿಸಿದವರು ಭಾರತ ಏಕತಾ ಆಂದೋಲನದ ಮಹಾದೇವ ಹೊರಟ್ಟಿ. ಇದಕ್ಕೆ ರಾಜ್ಯದ ಮೂಲೆ ಮೂಲೆಯಿಂದ ರಾಚಪ್ಪನಿಗೆ ಸಹಾಯ ಒದಗಿ ಬಂತು.

ಕನ್ನಡದ ನೆಲದಲ್ಲಿ ಸಮಾಜವಾದಿ ಬೇರುಗಳು ಇನ್ನೂ ಇವೆ. ಇವು ಪಳೆಯುಳಿಕೆಗಳಲ್ಲ. ಇಂದಿಗೂ ಈ ಸಿದ್ಧಾಂತಗಳು, ಆದರ್ಶಗಳು ಪ್ರಸ್ತುತ ಎಂದು ಮತ್ತೆ ಮತ್ತೆ ಜ್ಞಾಪಿಸುತ್ತಿವೆ. ಹಡಪದ ರಾಚಪ್ಪನಂಥ ವ್ಯಕ್ತಿತ್ವಗಳ ಬದುಕನ್ನು ಮೆಲಕು ಹಾಕುವದೇ ಇದಕ್ಕೆ ಸಾಕ್ಷಿ. ಜನಸಮುದಾಯದ ಸಮಾನತೆಗೆ ಅಗತ್ಯವಾದ ಸಮಾಜವಾದ ಮತ್ತೆ ಚಾಲ್ತಿಗೆ ಬರುತ್ತದೆ, ಬರಲೇಬೇಕು ಎಂಬ ವಿಚಾರಧಾರೆಗೆ ಇಂಥ ವ್ಯಕ್ತಿತ್ವಗಳ ಹೋರಾಟದ ಅನುಭವವೇ ಸಾಕು.

**–ಗಣೇಶ ಜೋಶಿ**

**೭೦–೮೦ರ ದಶಕಗಳ ಸಾಮಾಜಿಕ ಹೋರಾಟಗಾರ ವಿಜಯ ಪಾಟೀಲರ ಅಕಾಲಿಕ ನಿಧನಕ್ಕೆ ಪತ್ರಿಕೆ ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ–ಸಂ.**

ಹೊಸ ಮನುಷ್ಯ/ ಫೆಬ್ರುವರಿ/೨೦೧೫ ೬

# ಸಾಹಸ ಮತ್ತು ಹುತಾತ್ಮನ ಪಟ್ಟ ಕೈ ಮಾಡಿ ಕರೆದಾಗ...

–ತಲ್ಮೀಜ್ ಅಹ್ಮದ್




**ಜಾ**ಗತಿಕವಾಗಿ ಇಸ್ಲಾಂನ ರಕ್ಷಣೆ, ಇಸ್ಲಾಮೀ ಜೀವನ ಪದ್ಧತಿಯ ಪುನರ್ಸ್ಥಾಪನೆ, ಮುಸ್ಲಿಂ 'ಉಮ್ಮಾ'ದ ಪುನರುತ್ಥಾನ ಇತ್ಯಾದಿಗಳ ಹೆಸರಿನಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಈಗ ಜಗತ್ತಿನ ಸಹನೆಯ ಎಲ್ಲೆಗಳನ್ನು ದಾಟುತ್ತಿದೆ. ಬೆಂಗಳೂರಿನಲ್ಲಿ ಬಂಧಿತನಾಗಿರುವ *ಐಎಸ್* (ಇಸ್ಲಾಮಿಕ್ ಸ್ಟೇಟ್) ಅಭಿಮಾನಿಯೆಂದು ಹೇಳಲಾದ ಮಹದಿ ಎಂಬ ಉನ್ನತ ಶಿಕ್ಷಣ ಪಡೆದ ಯುವಕ ಬಿಬಿಸಿ ರೇಡಿಯೋಗೆ ನೀಡಿದ ಒಂದು ಸಂದರ್ಶನದಲ್ಲಿ ಮನಷ್ಯನನ್ನು ಕೊಲ್ಲುವ ಹಲವು ವಿಧಾನಗಳಿಗೆ *ಕುರಾನ್*ನಲ್ಲಿ ಸಮರ್ಥನೆ ಇದೆಯೆಂದು ಹೇಳುತ್ತಾ ಶಿರಚ್ಛೇದನವನ್ನು ಸಮರ್ಥಿಸಿಕೊಳ್ಳುತ್ತಿದ್ದುದನ್ನು ಕೇಳಿ ಜಗತ್ತು ಬೆಚ್ಚಿಬಿದ್ದಿದೆ. ಮೊನ್ನೆ ಪೆಷಾವರ್‌ನಲ್ಲಿ ನಡೆದ ಸಾಮೂಹಿಕ ಶಿಶುಹತ್ಯೆ, ಪ್ಯಾರಿಸ್‌ನಲ್ಲಿನ *ಹೆಬ್ಡೋ* ಕಛೇರಿಯ ಮೇಲೆ ಪ್ರವಾದಿಯ ವ್ಯಂಗ್ಯ ಚಿತ್ರ ಪ್ರಕಟಿಸಿದ್ದಾರೆಂದು ದಾಳಿ ನಡೆಸಿ ಮಾಡಿದ ನರಹತ್ಯೆ, ಆಸ್ಟ್ರೇಲಿಯಾದ ಸಿಡ್ನಿ ಕೆಫೆಯಲ್ಲಿ ಹಲವು ಅಮಾಯಕರ ಸಾವಿನಲ್ಲಿ ಕೊನೆಗೊಂಡ ಒತ್ತೆಯಾಳುಗಳ ದುರಂತ, ಫಿಲಿಪೈನ್ಸ್‌ನ ಬಸ್‌ವೊಂದರಲ್ಲಿ ನಡೆಸಿದ ಬಾಂಬ್ ಸ್ಫೋಟ, ನೈಜೀರಿಯಾದ ಬಾಗ್ ಪಟ್ಟಣದಲ್ಲಿ ಬಕೊ ಹರಾಮ್ ಎಂಬ ಸಂಘಟನೆ ನಡೆಸಿದ ಸುಮಾರು ಎರಡು ಸಾವಿರ ಜನರ ಕೊಲೆ ಮತ್ತು ಯೆಮೆನ್ ಹಾಗೂ ಇರಾಕ್‌ಗಳಲ್ಲಿ ಆತ್ಮಹತ್ಯಾ ದಳಗಳಿಂದ ನಡೆದಿರುವ ಸರಣಿ ಹತ್ಯೆಗಳು ಜಗತ್ತನ್ನು ತಲ್ಲಣಗೊಳಿಸಿವೆ. ಇವು ಮುಸ್ಲಿಮೇತರರ ಜಗತ್ತಿನ ಚಿಂತಕರನ್ನು ಈ ಇಸ್ಲಾಮಿ ಉಗ್ರಗಾಮಿತ್ವದ ಹಿಂದಿನ ಸಾಮಾಜಿಕ–ಆರ್ಥಿಕ–ರಾಜಕೀಯ ಆಯಾಮಗಳ ವಿಶ್ಲೇಷಣೆಗೆ ಪ್ರೇರೇಪಿಸಿದ್ದರೆ, ಈಗ ತಡವಾಗಿಯಾದರೂ ಕೆಲ ಮುಸ್ಲಿಂ ಚಿಂತಕರನ್ನು ಇಸ್ಲಾಂನ ತಾತ್ವಿಕತೆಯ ಬಗ್ಗೆ–ಕುರಾನ್ ಮತ್ತು ಹದೀಸ್ ಇತ್ಯಾದಿ ಧರ್ಮಗ್ರಂಥಗಳ ಪಠ್ಯಗಳ ಸ್ವರೂಪದ ಬಗ್ಗೆ–ಚಿಂತಿಸಲು ಪ್ರೇರೇಪಿಸತೊಡಗಿವೆ.

'ಭಾರತದ ಮುಸ್ಲಿಮರ ವಸಂತ' ಎಂಬ ಪುಸ್ತಕ ಬರೆದ ಹಸನ್ ಸುರೂರ್(ಇವರೊಡನೆಯ ಒಂದು ಸಂದರ್ಶನಕ್ಕಾಗಿ 'ಹೊಸ ಮನುಷ್ಯ'ದ ೨೦೧೪ರ ಜೂನ್_ಸಂಚಿಕೆಯನ್ನು ನೋಡಿ). ಇತ್ತೀಚಿನ *ಔಟ್‌ಲುಕ್* ಪತ್ರಿಕೆಯಲ್ಲಿ(ಜನವರಿ,೨೬) 'ಇಸ್ಲಾಂಗೊಂದು ಪುನರುಜ್ಜೀವನದ ಅಗತ್ಯವಿದೆ' ಎಂಬ ಒಳಶೋಧನೆಯ ಲೇಖನವೊಂದನ್ನು ಬರೆದಿದ್ದಾರೆ. ಹೀಗೇ, ಬಹುಧರ್ಮೀಯ ಮತ್ತು ಬಹು ಸಂಸ್ಕೃತಿಯ ಭಾರತ ಬಾಳಿ ಬದುಕಬೇಕಾದರೆ, ಭಾರತದ ಮುಸ್ಲಿಂ ಸಮಾಜದ ರಾಜಕೀಯ ಮತ್ತು ಬೌದ್ಧಿಕ ನಾಯಕತ್ವ ಕೇವಲ ಹಿಂದೂ ಬಲಪಂಥೀಯತೆ ಮತ್ತು ಕೋಮುವಾದವನ್ನು ಟೀಕಿಸುವುದಷ್ಟಕ್ಕೇ ಸೀಮಿತವಾಗದೆ, ತಮ್ಮದೇ ಧರ್ಮದ ಒಳ ವಿಮರ್ಶೆಯಲ್ಲೂ ತೊಡಗಿಕೊಂಡು, ಇಸ್ಲಾಂನಲ್ಲಿ–ಕನಿಷ್ಠ ಆಧುನಿಕ ಜಗತ್ತಿನ ಇಸ್ಲಾಂನಲ್ಲಿ–ಉಗ್ರವಾದಕ್ಕೆ ಅವಕಾಶವಿಲ್ಲ ಮತ್ತು ಮಾನವ ಹತ್ಯೆ ಧರ್ಮ ವಿರೋಧಿಯಾದದ್ದು ಎಂದು ಸ್ಪಷ್ಟ ಶಬ್ದಗಳಲ್ಲಿ ಮತ್ತು ಎಲ್ಲರಿಗೂ ಕೇಳುವಂತೆ ಹೇಳಬೇಕಿದೆ. ಈ ಎಲ್ಲ ಹಿನ್ನೆಲೆಯಲ್ಲಿ ಈ ಲೇಖನ–ಸಂಪಾದಕ

**'ಜಿ**ಹಾದ್'ನ ಕಪಿಮುಷ್ಠಿ ಆಫ್ಘಾನಿಸ್ತಾನ್–ಪಾಕಿಸ್ತಾನ್ ಗಡಿಯ ಪರ್ವತಗಳಲ್ಲಿನ ತನ್ನ ನೆಲೆಯಿಂದ ವಿಸ್ತರಿಸುತ್ತಲೇ ಇದೆ. *ಅಲ್ಖೈದಾ*, ಅರೇಬಿಯಾ ದ್ವೀಪಕಲ್ಪ ಮತ್ತು ಆಫ್ರಿಕಾದ ಸರ್ವ ದಿಕ್ಕುಗಳ ರಾಷ್ಟ್ರಗಳಿಗೂ ಹಬ್ಬತೊಡಗಿದೆ. *ಇಸ್ಲಾಮಿಕ್ ಸ್ಟೇಟ್* ಅರೇಬಿಯದ ಹೃದಯ ಭಾಗವಾದ ಇರಾಕ್ ಮತ್ತು ಸಿರಿಯಾದ ಉದ್ದಗಲಕ್ಕೂ ಬಲವಾಗಿ ಬೇರು ಬಿಟ್ಟಿದೆ. ಸಿರಿಯಾದಲ್ಲಿ ನಡೆದಿರುವ ಸಂಘರ್ಷದಲ್ಲಿ ಅದು ತನ್ನ ಹಿಡಿತದ ನೆಲ ಮತ್ತು ಸಮರ್ಥಕರನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ *ಅಲ್ಖೈದಾ*ಕ್ಕೆ ಸೇರಿದ *ಜಬ್ಬತ್ ನುಸ್ರಾ* ಜೊತೆಗೆ ಪೈಪೋಟಿಗಿಳಿದಿದೆ.

ಈ ಯಾವುದೇ ಸಂಘಟನೆಗೆ, ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ವೈರಿ ಸೈನ್ಯ, ಪಶ್ಚಿಮದ ಒತ್ತೆಯಾಳುಗಳು ಮತ್ತು ಸಾಮಾನ್ಯ ನಾಗರೀಕರ ಮೇಲೆ ಘೋರ ಹಿಂಸಾಚಾರಕ್ಕಿಳಿಯಬಲ್ಲ ಕಾರ್ಯಕರ್ತರನ್ನು ಅಣಿಗೊಳಿಸುವುದು ಕಷ್ಟವಾಗುತ್ತಿರುವಂತೆ ತೋರುತ್ತಿಲ್ಲ. ಒಂದು ಎಚ್ಚರಿಕೆ ಎಂದೋ ಇಲ್ಲವೆ ಒಂದು ಉನ್ನತ ಧ್ಯೇಯದ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಲೆಂದೋ ಇಂಥ ಕೃತ್ಯಗಳನ್ನು ಸಾಮಾಜಿಕ ಮತ್ತು ಇತರೆ ಮಾಧ್ಯಮಗಳಲ್ಲಿ ಬಿತ್ತರಿಸಲಾಗುತ್ತಿದೆ.

ಈ ಹಿಂಸಾಚಾರದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಸಾವಿರಾರು ವಿದೇಶಿ 'ಜಿಹಾದಿ'ಗಳು ಈ ಸಂಘಟನೆಗಳನ್ನು ಸೇರಿದ್ದಾರೆ. ಈ ಕಾರ್ಯಕರ್ತರ ಪಡೆಗಳು ಮೂರು ಬಗೆಯ ಸದಸ್ಯರನ್ನೊಳಗೊಂಡಿದೆ: ಅರಬ್ ಜಗತ್ತು ಮತ್ತು ಕೆಲವು ಏಷ್ಯನ್ ದೇಶಗಳ ಮುಸ್ಲಿಂ ಯುವಕರು; ಪಾಶ್ಚಿಮಾತ್ಯ ದೇಶಗಳಿಂದ ಆಗಮಿಸಿದ ಎರಡನೆಯ ತಲೆಮಾರಿನ ಅರಬ್ ವಲಸಿಗರು ಮತ್ತು ಮುಸ್ಲಿಮೇತರರು ಇಲ್ಲವೆ ಇತ್ತೀಚೆಗೆ ಮತಾಂತರಗೊಂಡ ಯೂರೋಪ್, ಅಮೆರಿಕ, ಆಸ್ಟ್ರೇಲಿಯಾ ಅಷ್ಟೇ ಅಲ್ಲ ನ್ಯೂಜೀಲ್ಯಾಂಡ್‌ನ ಯುವಕರು.

ಕಳೆದ ಕೆಲವು ದಶಕಗಳುದ್ದಕ್ಕೂ 'ಜಿಹಾದ್'ನ ಆಕರ್ಷಣೆಯ ವಿವರಣೆಯನ್ನು ಅಧ್ಯಯನಕಾರರು ಈಗ ಪುನರ್‌ಪರಿಶೀಲಿಸುವುದು ಅತ್ಯವಶ್ಯಕವಾಗಿದೆ. ೯೦ರ ದಶಕದ ಆರಂಭದಲ್ಲಿ ಉಗ್ರವಾದಿ ಸಂಘಟನೆಗಳು ಹುಟ್ಟು ಹಾಕಿದ ಹಿಂಸಾಚಾರಕ್ಕೆ ಅಲ್ಜೀರಿಯಾ ಮತ್ತು ಇಜಿಪ್ಟ್ ಸಿಕ್ಕಿ ತೊಳಲಾಡುತ್ತಿದ್ದಾಗ ಅವರ ವಿವರಣೆ ಹೀಗಿತ್ತು: ಈ ಸಂಘಟನೆಗಳ ಸದಸ್ಯರು ಆರ್ಥಿಕವಾಗಿ ತೀರ ಕೆಳವರ್ಗದ ಯುವಕರಾಗಿದ್ದರು; ಅವರು ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಿಂದ ವಲಸೆ ಬಂದಿದ್ದರು; ಅಲ್ಲಿ ಅವರು ಕೊಳೆಗೇರಿಗಳಲ್ಲಿ ವಾಸವಾಗಿದ್ದರು ಮತ್ತು ಘೋರ ಶೋಷಣೆಗೆ ಬಲಿಯಾಗಿದ್ದರು. ಮಸೀದಿ ಅವರಿಗೆ ಪರಿಹಾರ ಮತ್ತು ಆಶ್ರಯ ಒದಗಿಸಿತು. ಮುಂದೆ ತಕ್ಕ ಸಮಯದಲ್ಲಿ ಯಾರೋ ಒಬ್ಬ ಪ್ರಭಾವಶಾಲಿ ಧರ್ಮಗುರು ಇಲ್ಲವೆ ಅನುಕಂಪೆಯ ಇಸ್ಲಾಮೀ ಸಂಘಟನೆ ಅವರಿಗೆ ಇಸ್ಲಾಮಿನ ಹೆಸರಿನಲ್ಲಿ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳಲು ಪ್ರೇರೇಪಿಸಿರಬಹುದು ಮತ್ತು ಮನವೊಲಿಸಿರಬಹುದು.

ಅಮೆರಿಕದಲ್ಲಿ ನಡೆದ ೯/೧೧ರ ದುಷ್ಕೃತ್ಯದ ನಂತರ ಈ ವಿಶ್ಲೇಷಣೆಯನ್ನು ಪುನರ್‌ಪರಿಶೀಲಿಸಲೇಬೇಕಾಯಿತು. ಕಾರಣ, ಸೌದಿಯ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಯುವಕರು ಆ ದುಷ್ಕೃತ್ಯದಲ್ಲಿ ಪಾಲ್ಗೊಂಡಿದ್ದರು. ವಿಶೇಷವೆಂದರೆ ಅವರ ಹಿನ್ನೆಲೆಯಲ್ಲಿ ಉಗ್ರ ಧಾರ್ಮಿಕ ಉತ್ಸಾಹದ ಸುಳಿವೇ ಇದ್ದಿರಲಿಲ್ಲ. ಆಗ ಸೌದಿ ಅರೇಬಿಯಾದಲ್ಲಿ ಜನಜನಿತವಾಗಿದ್ದ ವಿವರಣೆ ಹೀಗಿತ್ತು: ಅಮೆರಿಕದ ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ಈ ಯುವಕರ ತಲೆಗಳಲ್ಲಿ ಇಂಥ ವಿಚಾರಗಳನ್ನು ಬಿತ್ತಲಾಯಿತು. ಅಲ್ಲಿ ಮುಸ್ಲಿಂ ದುಮ್ಮಾನಗಳು ಮತ್ತು ಬಲಿಪಶುತನದ ಭಾವನೆಗಳನ್ನು ಕೆರಳಿಸಿ ಬಿತ್ತಲಾಯಿತು. ಮತ್ತೆ ಅಲ್ಲಿ ಕಟು ಬದ್ಧತೆಯ ಧರ್ಮಗುರುಗಳ ಇಲ್ಲವೆ ಆಂದೋಲನದ ಕುಮ್ಮಕ್ಕು ಇತ್ತು. ಆದರೆ ಈ ವಿವರಣೆಯಲ್ಲಿ ಇವರಿಗೆಲ್ಲ ಅವರ ಸ್ವದೇಶಗಳಲ್ಲಿಯೇ ಈ ಎಲ್ಲ ಪ್ರೇರೇಪಣೆಗಳ ಮೂಲಗಳಿರಬಹುದಾದ ಸಾಧ್ಯತೆಗಳ ಪ್ರಸ್ತಾಪವೇ ಇರಲಿಲ್ಲ.

ಜುಲೈ ೨೦೦೫ರಲ್ಲಿ, ದಕ್ಷಿಣ ಏಷ್ಯಾ ಮತ್ತು ಆಫ್ರಿಕಾ ಮೂಲದ ಮಧ್ಯಮ ವರ್ಗದ ಹಿನ್ನೆಲೆಯ ಮತ್ತು ತಮ್ಮ ಪರಿಸರದಲ್ಲಿ ಸುಲಭವಾಗಿ ಇತರರೊಂದಿಗೆ–ಫುಟ್‌ಬಾಲ್ ಆಟದಲ್ಲಿ ಆಸಕ್ತಿ, ಪಬ್‌ಗಳಲ್ಲಿ ಮದ್ಯ ಸೇವನೆ ಮತ್ತು ಯುವತಿಯರೊಂದಿಗೆ ಒಡನಾಟಗಳ ಮೂಲಕ–ಬೆರೆಯಬಲ್ಲವರಾಗಿದ್ದ; ಅದರೆ ಧಾರ್ಮಿಕ ಮತ್ತು ರಾಜಕೀಯ ವಿಷಯಗಳಲ್ಲಿ ಎಳ್ಳಷ್ಟೂ ಆಸಕ್ತಿಯಿಲ್ಲದ ಅನೇಕ ಯುವಕರು ಲಂಡನ್‌ನಲ್ಲಿ ಸರಣಿ ಭಯೋತ್ಪಾದಕ ಕೃತ್ಯಗಳಲ್ಲಿ ಪಾಲ್ಗೊಂಡಿದ್ದರೆಂಬ ಅಂಶ ವಿದೇಶಿಯರಿಗೆ ನೆಲೆ ಒದಗಿಸುವ ಬಹುಸಂಸ್ಕೃತಿವಾದದ ನೀತಿಯ ಸಾಧುತ್ವದ ಬಗ್ಗೆಯೇ ಪ್ರಶ್ನೆಗಳನ್ನೆತ್ತಲಾಯಿತು.

ಕೆಲವು ಮುಸ್ಲಿಂ ರಾಷ್ಟ್ರಗಳಲ್ಲಿ, ಉದಾಹರಣೆಗೆ ಪಾಕಿಸ್ತಾನ, ಗಲ್ಫ್ ಮತ್ತು ಪಶ್ಚಿಮ ಏಷ್ಯಾದ ದಬ್ಬಾಳಿಕೆಗಳಿಗೆ ತುತ್ತಾದ ದೇಶಗಳಲ್ಲಿ, ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ಆಂದೋಲನಗಳು ಮುಸ್ಲಿಂ ಬಲಿಪಶುತ್ವದ ಭಾವನೆಗೇ ಒತ್ತು ಕೊಡುತ್ತಿವೆ. ಅಲ್ಲಿನ ಅತಿರೇಕದ–ಸಾಮಾನ್ಯವಾಗಿ ಇಸ್ರೇಲಿ ಇಲ್ಲವೆ ಅಮೆರಿಕನ್ ವೃತ್ತಿಪರ ಸೇನೆಗಳ – ದಾಳಿ ಮತ್ತು ದುಷ್ಕೃತ್ಯಗಳು ನಿರಂತರ ಅಸಮಾಧಾನ ಮತ್ತು ಆಕ್ರೋಶಗಳನ್ನು ಪೋಷಿಸುತ್ತವೆ. ಬಹಳ ಸಾರಿ ಅಲ್ಲಿನ ಪ್ರಭುತ್ವಗಳೇ ತನ್ನ ವೈಫಲ್ಯಗಳು ಇಲ್ಲವೆ ತನ್ನ ಸರ್ವಾಧಿಕಾರಿ ಆಡಳಿತದ ಪರಿಣಾಮಗಳಿಂದ ಜನರ ಲಕ್ಷ್ಯವನ್ನು ಬೇರೆಡೆ ಸೆಳೆಯುವುದರ ಭಾಗವಾಗಿ ಅವರು 'ಜಿಹಾದ್' ಸೇರಲು ಕುಮ್ಮಕ್ಕು ನೀಡುತ್ತದೆ. ಅದರ ಪರಿಣಾಮವಾಗಿ ಅವರ ಆಕ್ರೋಶ ಮತ್ತು ಧ್ಯೇಯಸಾಧನೆಯ ತುಡಿತ ಪರಕೀಯ ನೆಲದಲ್ಲಿ ಹೊರ ದಾರಿ ಕಂಡುಕೊಳ್ಳುತ್ತದೆ.

ಪಾಶ್ಚಾತ್ಯ ದೇಶಗಳ ಎರಡನೆಯ ತಲೆಮಾರಿನ ಮುಸ್ಲಿಮರು ಆರಂಭದಲ್ಲಿ ತಮ್ಮ ಪಾಶ್ಚಿಮಾತ್ಯ ಪರಿಸರವನ್ನೇ ಅಂಗೀಕರಿಸುವರಾದರೂ, ಮುಂದೆ ಇದ್ದಕ್ಕಿದ್ದಂತೇ ಜನಾಂಗೀಯ ಮತ್ತು ಸಾಂಸ್ಕೃತಿಕ ಪ್ರತ್ಯೇಕೀಕರಣದ ಭಾವನೆಗಳಿಗೆ ಸಿಕ್ಕಿ'ಮರುಇಸ್ಲಾಮೀಕರಿಸಲ್ಪಡುತ್ತಾರೆ'.ಇಂಥವರಿಗೆ 'ಜಿಹಾದ್' ನಿಜಕ್ಕೂ ಪುನರುದ್ಧಾರದ ಅನುಭವವಾಗುತ್ತದೆ. ಇಲ್ಲವಾದರೆ ನಿರರ್ಥಕವಾಗಿ ಉಳಿದು ಬಿಡುತ್ತಿದ್ದ ತಮ್ಮ ಬದುಕಿಗೆ ಅದು ಹೆಚ್ಚಿನ ಅರ್ಥ ಮತ್ತು ಉದ್ದೇಶ ತುಂಬುತ್ತದೆ ಎಂದು ಅವರು ಭಾವಿಸುತ್ತಾರೆ. ಅವರು ಇನ್ನೂ ಒಂದು ಘನ ಉದ್ದೇಶದ ಸಮರ್ಥನೆಗೆ ಸೇನಾ ಕಾರ್ಯಾಚರಣೆಯಲ್ಲಿ ತೊಡಗುತ್ತಾರೆ. ವಿಧವೆಯರು, ಅನಾಥರು, ದಮನಿತರು, ಉಪೇಕ್ಷಿತರು ಮತ್ತು ಅನ್ಯಾಯವಾಗಿ ಬಂಧನಕ್ಕೊಳಗಾದವರನ್ನು ರಕ್ಷಿಸುವುದಕ್ಕಾಗಿ 'ನಿರಂತರ ಯುದ್ಧ' ಸಾರುವವರು ಎಂದು ಅವರನ್ನು ಒಂದು 'ಜಿಹಾದಿ' ಪಠ್ಯ ಬಣ್ಣಿಸುತ್ತದೆ. ಭಯೋತ್ಪಾದನೆ ವಿಷಯದ ಒಬ್ಬ ಪರಿಣತ ಸಂಶೋಧಕಿ ಜೆಸ್ಸಿಕಾ ಸ್ಟರ್ನ್ ಅವರ ಪ್ರಕಾರ ತಾವು ಒಂದು ಆಧ್ಯಾತ್ಮಿಕ ಕರೆಗೆ ಓಗೊಡುತ್ತಿರುವುದಾಗಿ ಭಯೋತ್ಪಾದಕರು ನಂಬಿರುತ್ತಾರೆ: ಹಿಂಸೆಯಲ್ಲಿ ಅವರ ಭಾಗವಹಿಸುವಿಕೆ ಅವರಲ್ಲಿ 'ವರ್ಣನಾತೀತ ಆನಂದ' ಉಂಟು ಮಾಡುತ್ತದೆ. ಆಗ ಅವರ ಆಕ್ರೋಶ ಬಲವಾದ ನಂಬಿಕೆಯಾಗಿ ಮಾರ್ಪಡುತ್ತದೆ. ಅದರಿಂದಾಗಿ 'ದುರ್ಬಲರು ಬಲಶಾಲಿಯಾಗುತ್ತಾರೆ ಮತ್ತು ಸ್ವಾರ್ಥಿಗಳು ಪರೋಪಕಾರಿಗಳಾಗುತ್ತಾರೆ'. ಅವರ ಸಂರಕ್ಷಕನ ಪಾತ್ರದ ಕಲ್ಪನೆ ಇಸ್ಲಾಮಿನ 'ಅಂತಿಮ ವಿಜಯ'ದ ದರ್ಶನದಲ್ಲಿ ತನ್ನ ಪರಮೋಚ್ಚ ಅರ್ಥವನ್ನು ಪಡೆದುಕೊಳ್ಳುತ್ತದೆ.

ಚಿಂತಕ ಫೈಸಲ್ ಅಲ್ ಯಫಾಯಿ ಅವರ ಪ್ರಕಾರ, ಮುಸ್ಲಿಂ ದೇಶಗಳಲ್ಲಿನ 'ಜಿಹಾದಿ'ಗಳ ಸಮರೋತ್ಸಾಹವನ್ನು ಚರಿತ್ರೆಯನ್ನು ಕುರಿತ ಅವರ ಮೂಲಭೂತವಾಗಿ ಭಿನ್ನವಾದ ಪರಿಕಲ್ಪನೆ ಮೂಲಕ ಅರ್ಥೈಸಿಕೊಳ್ಳಬಹುದು. ಇಸ್ಲಾಮಿನ ಅವರ ಕಲ್ಪನೆಯಲ್ಲಿ ಇಸ್ಲಾಂ ಈಗ ಇತಿಹಾಸದ ಒಂದು ನಿರ್ಣಾಯಕ ಘಟ್ಟದಲ್ಲಿದ್ದು, ಅದರ ಅಂತಿಮ ಭವಿಷ್ಯ ನಿರ್ಧಾರವಾಗುವ ಕ್ಷಣವೀಗ ಬಂದಿದೆ. ಹಾಗಾಗಿ ಈ ಭವಿಷ್ಯವನ್ನು ರೂಪಿಸುವಲ್ಲಿ ತಾವು ಪಾತ್ರ ನಿರ್ವಹಿಸುತ್ತಿದ್ದೇವೆಂದು ಅವರು ಭಾವಿಸಿಕೊಳ್ಳುತ್ತಾರೆ. ಇದು ಅವರನ್ನು 'ಜಿಹಾದ್' ಮತ್ತು ಹುತಾತ್ಮನ ಪಟ್ಟಕ್ಕೆ ಅಣಿಗೊಳಿಸುತ್ತದೆ. ಇನ್ನು ಆತ್ಮಹತ್ಯಾ ದಾಳಿಗಳು 'ಜಿಹಾದಿ' ಬತ್ತಳಿಕೆಯೊಳಗಿನ ಅತ್ಯಂತ ಪರಿಣಾಮಕಾರಿ ಅಸ್ತ್ರವಾಗಿ ಪರಿಣಮಿಸಿದೆ. ಕಾರಣ, ಅದಕ್ಕೆ ಅತ್ಯಂತ ಹೆಚ್ಚಿನ ಪ್ರಚಾರದ ಸಾಧ್ಯತೆ ಇರುತ್ತದೆ; ಗುರಿಯಾಗಿರಿಸಿಕೊಂಡ ಜನವಸತಿಯ ಬಹು ದೊಡ್ಡ ಭಾಗದಲ್ಲಿ ಭಯ ಹುಟ್ಟಿಸಬಲ್ಲದು. ಆ ಕೆಲಸಕ್ಕೆ ನೇಮಕವಾಗುವವರಿಗೇನೂ ಕೊರತೆ ಇಲ್ಲ. ಭಯೋತ್ಪಾದನಾ ವಿಷಯದ ತಜ್ಞ ಲೂಯಿ ರಿಚರ್ಡ್ಸನ್ ಅಭಿಪ್ರಾಯಪಟ್ಟಿರುವಂತೆ, ಆತ್ಮಹತ್ಯಾ ದಾಳಿಕೋರರು ಧಾರ್ಮಿಕ ಧ್ಯೇಯಕ್ಕಿಂತ ಹಚ್ಚಾಗಿ ಸಾವಿನ ಸಮ್ಮುಖದಲ್ಲಿನ ಹುಚ್ಚು ಉನ್ಮಾದಭರಿತ ಹೋರಾಟದ ಮನೋಭಾವದಿಂದ ಪ್ರೇರಿತರಾಗಿರುತ್ತಾರೆ.

ವಾಸ್ತವದಲ್ಲಿ, ಹೋರಾಟದ ಮನೋಭಾವವೇ ಸಾಮಾನ್ಯ ಜನರು, ಅದರಲ್ಲೂ ವಿಶೇಷವಾಗಿ ಇತ್ತೀಚೆಗೆ ಮತಾಂತರಗೊಂಡ ಪಾಶ್ಚಾತ್ಯ ದೇಶಗಳ ಜನರನ್ನು 'ಜಿಹಾದ್'ನತ್ತ ಸೆಳೆಯುವ ಬಲವಾದ ಕಾರಣವಾಗಿದೆ. ಪಾಶ್ಚಾತ್ಯ ಯುವಕರನ್ನು ಗುರಿಯಾಗಿಸಿಕೊಂಡ ಸಾಮಾಜಿಕ ಮಾಧ್ಯಮಗಳು 'ಜಿಹಾದ್'ಗಿಂತ ಉನ್ಮಾದಮಯ ಸಾಹಸಕ್ಕೆ ಕರೆ ಕೊಡುತ್ತವೆ. ಈ ವಿಡಿಯೊಗಳು ವಿಡಿಯೊ ಗೇಮ್‌ಗಳ ಭಾಷೆ, ಗ್ರಾಫಿಕ್‌ಗಳು ಮತ್ತು ಪ್ರಭಾವಗಳನ್ನು ಬಳಸಿಕೊಳ್ಳುತ್ತವೆ. ಅವು ಕಾರ್ಯತತ್ಪರರಾಗಿರುವ ಪಾಶ್ಚಾತ್ಯ 'ಜಿಹಾದಿ'ಗಳನ್ನು ದೈನಂದಿನ ಸನ್ನಿವೇಶಗಳಲ್ಲಿ –ಅಂದರೆ ಜಾಗಿಂಗ್, ಸಾಕುಪ್ರಾಣಿಗಳನ್ನು ಮುದ್ದಿಸುವುದು ಇಲ್ಲವೆ ಫುಟ್ ಬಾಲ್ ಬಗೆಗಿನ ಚರ್ಚೆ ಮತ್ತು ಬಲಿಯಾದವರ ಕತ್ತರಿಸಿದ ತಲೆಗಳನ್ನು ತೋರಿಸುತ್ತ ಇಲ್ಲವೆ ಸಿರಿಯನ್ ವಾಯು ಪಡೆಯ ಕೈದಿಗಳನ್ನು ಕೊಲ್ಲಲು ಸನ್ನದ್ಧವಾಗಿರುವ ಬಹುರಾಷ್ಟ್ರೀಯ ಕಾರ್ಯಾಚರಣೆ ಪಡೆಯ ಚಿತ್ರಗಳನ್ನು ಪ್ರದರ್ಶಿಸುತ್ತವೆ. ಒಬ್ಬ ವಿಶ್ಲೇಷಕರ ಅಭಿಪ್ರಾಯದ ಮೇರೆಗೆ, ಈ ವಿಡಿಯೊಗಳು 'ರಣರಂಗದಲ್ಲಿನ ಮೈನವಿರೇಳಿಸುವ ಸಾಹಸದ ಚಿತ್ರಗಳ ಜೊತೆಗೇ ಉದಾತ್ತತೆ ಮತ್ತು ಹೋರಾಟವನ್ನು ಸೇರುವ ತುರ್ತ'ನ್ನು ಹಿಡಿಯಬಲ್ಲವು. ಅದರಿಂದಾಗಿ ಐ.ಎಸ್., ಆಟಗಳ ಫ್ಯಾಂಟಸಿಯನ್ನು ನಿಜಗೊಳಿಸುತ್ತದೆ. ಸಾಮಾಜಿಕ ಮಾಧ್ಯಮಗಳು 'ಜಿಹಾದಿ'ಗಳ 'ಜಾಲಗಳ ನಿಯಂತ್ರಣ ಮತ್ತು ನಿರ್ದೇಶನಗಳಾಗಿವೆ' ಎಂದು ಒಬ್ಬ ಪಾಶ್ಚಾತ್ಯ ಗೂಢಚಾರ ಅಧಿಕಾರಿ ಹೇಳುತ್ತಾರೆ.

ಕಳೆದ ವರ್ಷ ೨೦೦ ಯುವತಿಯರೂ ಸೇರಿದಂತೆ ಪಾಶ್ಚಾತ್ಯ ದೇಶಗಳ ಸುಮಾರು ೩೦೦೦ ಜನ ಐ.ಎಸ್. ಸೇರಿದ್ದಾರೆ ಎಂದು ಅಂದಾಜು ಮಾಡಲಾಗಿದೆ. ಸಾಮಾಜಿಕ ಮಾಧ್ಯಮಗಳ ಮೂಲಕ ಅವರಿಗೆ ಕಳಿಸಲಾದ ಪರಿಣಾಮಕಾರಿ ಸಂದೇಶಗಳಿಂದ ಅವರನ್ನು ಸೆಳೆಯಲಾಗಿದೆ. ಆ ಮಾಧ್ಯಮಗಳಲ್ಲಿ ಐ.ಎಸ್.ನ ಅಭೂತಪೂರ್ವ ವಿಜಯ ಚಿತ್ರಿಸಲಾಗಿದೆ. ಮತ್ತು ಅಬೂಬಕರ್ ಅಲ್–ಬಗ್ದಾದಿಯ ವ್ಯಕ್ತಿತ್ವವನ್ನು ತಮ್ಮ ಖಲೀಫಾ ಎಂದು ಬಿಂಬಿಸಲಾಗಿದೆ. ಭಯೋತ್ಪಾದನಾ ವಿಷಯದ ಪರಿಣತನೊಬ್ಬ ಅಭಿಪ್ರಾಯಪಟ್ಟಿರುವಂತೆ, ಕೆಲ ಯುವಕರಿಗೆ ತುಂಬ ಇಷ್ಟವಾಗುವಂಥ 'ಕ್ರಾಂತಿ, ಬಲಿದಾನ ಮತ್ತು ಹಿಂಸೆ ಮೂಲಕ ವಿಮೋಚನೆಯನ್ನು ಕಂಡಿರಿಸಿದ ಪ್ರವಾದಿಯ ಭವಿಷ್ಯಕ್ಕೆ' ಅಲ್–ಬಗ್ದಾದಿ ಸಂಕೇತವಾಗುತ್ತಾನೆ.

ಉಗ್ರವಾದದ ತಜ್ಞ ಅಹಮದ್ ರಶೀದ್ ಗಮನಿಸಿರುವಂತೆ, ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನ ಎರಡೂ ದೇಶಗಳಲ್ಲಿ 'ಜಿಹಾದಿ'ಗಳ ಒಂದು ಹೊಸ ತಲೆಮಾರು ಹೊರಹೊಮ್ಮುತ್ತಲಿದ್ದು, ಅದು ಹೆಚ್ಚು ಮೂಲಭೂತವಾದಿ, ಹೆಚ್ಚು ಸುಶಿಕ್ಷಿತ ಹಾಗೂ 'ಜಿಹಾದ್'ಗೆ ಆಳವಾದ ಬದ್ಧತೆ ಹೊಂದಿದೆ. ಅದು ತನ್ನ ನಾಯಕರು ತಮ್ಮ ಸರ್ಕಾರ ಮತ್ತು ವೃತ್ತಿಪರ ಸೇನೆಯೊಂದಿಗಿನ ರಾಜೀ ಮನೋಭಾವದಿಂದಾಗಿ ಭ್ರಮನಿರಸನಗೊಂಡಿದೆ. ಈ ಉಗ್ರವಾದಿಗಳು ಐ.ಎಸ್. ತನ್ನ ಕಾರ್ಯಕ್ರಮದೊಂದಿಗೆ ಎಂದೂ ಯಾವುದೇ ತರಹ ರಾಜಿ ಮಾಡಿಕೊಳ್ಳಲಾರದು ಎಂದು ನಂಬಿದ್ದಾರೆ. ಅವರು ಅದರ ಸೇನಾ ವಿಜಯಗಳಿಂದ ಪುಲಕಿತರಾಗುತ್ತಾರೆ. ಖಿಲಾಫತ್‌ನ ಘೋಷಣೆಯಿಂದ ಅವರು ಪ್ರೇರಿತರಾಗಿದ್ದಾರೆ. ಸ್ವದೇಶ ಮತ್ತು ಪಶ್ಚಿಮ ಏಷ್ಯಾದಲ್ಲಿ 'ಜಿಹಾದ್'ನಲ್ಲಿ ಭಾಗವಹಿಸುವುದಕ್ಕಾಗಿ ೩೫ ವರ್ಷಗಳಿಂದ 'ಜಿಹಾದ್'ಅನ್ನು ಕೈಬಿಟ್ಟಿರುವ ಭಾರತೀಯ ಮುಸ್ಲಿಮರನ್ನು ಸಾಮಾಜಿಕ ಮಾಧ್ಯಮಗಳಲ್ಲಿ *ಅಲ್–ಕೈದಾ* ಮತ್ತು ಐ.ಎಸ್. ಎರಡೂ ಗುರಿಯಾಗಿಸಿಕೊಂಡಿವೆ. ಈಗ ಜಾಗತಿಕ 'ಜಿಹಾದ್' ಪಶ್ಚಿಮ ಏಷ್ಯಾದಲ್ಲಿ ಪೆಡಂಭೂತವಾಗಿ ತಲೆಯೆತ್ತುತ್ತಲಿದೆ.

**(ಲೇಖಕ ತಲ್ಮೀಜ಼್ ಅಹಮದ್ ಮಾಜಿ ರಾಜತಾಂತ್ರಿಕರು)**

(ಕನ್ನಡಕ್ಕೆ: **ಹಸನ್ ನಯೀಂ ಸುರಕೋಡ**

ಕೃಪೆ: ***ದ ಹಿಂದೂ***, ಜನವರಿ, ೭, ೨೦೧೫)

---

**ಯುವ ಸಮಾಜವಾದಿ ಚಿಂತನ ವೇದಿಕೆ**

# ಅಭಿವೃದ್ಧಿ ಎಂಬ ಬಂಜೆ ಪದ

**–ರವಿಚಂದ್ರ ಚಿಕ್ಕೆಂಪಿಹುಂಡಿ**

**ಘಟನೆ** ೧: ಅದು ಕೆ.ಆರ್.ನಗರ ತಾಲ್ಲೂಕಿನ ನೀರಾವರಿ ಪ್ರದೇಶದ ಗ್ರಾಮ. ಕಾಲುವೆಯ ನೀರು ಏರದ ಕಡೆ ೫ ಎಕರೆ ಬೆಜ್ಜಲು ಜಮೀನಿನಲ್ಲಿ ತನ್ನ ಪಾಡಿಗೆ ಅಗತ್ಯಕ್ಕೆ ತಕ್ಕ ಫಸಲು ಬೆಳೆಯುತ್ತಿದ್ದ ಸಿದ್ದೇಗೌಡ ಬಿಎ ತನಕ ಓದಿ ವ್ಯವಸಾಯಕ್ಕೆ ತಿಲಾಂಜಲಿ ಇಟ್ಟಿದ್ದ ಮಗ ಮಾದೇಶನ ಬಲವಂತಕ್ಕೂ, ಬ್ರೋಕರ್ ವೆಂಕಟೇಶಪ್ಪನ ಆಸೆ ಹುಟ್ಟಿಸುವ ಮಾತುಗಳಿಗೂ ತಲೆದೂಗಿ ಬ್ಯಾಂಕ್ ಸಾಲ ಪಡೆಯಲು ಒಪ್ಪಿಕೊಂಡನು.

ಮಾರನೆಯ ದಿನ ರಾಷ್ಟ್ರೀಕೃತ ಬ್ಯಾಂಕೊಂದರ ಜೀಪು ಸಿದ್ದೇಗೌಡನ ಜಮೀನಿಗೆ ಬಂದು ನಿಂತುಕೊಂಡಿತು. ಬ್ರೋಕರ್ ವೆಂಕಟೇಶಪ್ಪ ಮ್ಯಾನೇಜರ್ ಕೈಗೆ ಕವರೊಂದನ್ನು ತುರುಕಿದನು. ಕವರ್ ಪಡೆದ ಕೈ ಸಿದ್ದೇಗೌಡನ ಬೆಜ್ಜಲು ಜಮೀನಿನಲ್ಲಿ ಬಾಳೆ, ಶುಂಠಿ, ತಂಬಾಕು ಬೆಳೆದಿದ್ದಾರೆ ಎಂದು ನಮೂದಿಸಿತು. ಬ್ಯಾಂಕ್ ಜೀಪಿನ ಚಕ್ರ ಸಿದ್ದೇಗೌಡನ ಹೊಲದ ಕೆಂಪು ಮಣ್ಣಿನ ಮೇಲೆ ಸೀಲು ಒತ್ತಿ ಹೋಯಿತು.

ಸಿದ್ದೇಗೌಡರಿಗೆ ಬ್ಯಾಂಕ್‌ನಿಂದ ೫ ಲಕ್ಷ ರೂ. ಸಾಲದ ಹಣ ಡ್ರಾ ಮಾಡಿಸಿಕೊಟ್ಟ ಬ್ರೋಕರ್ ವೆಂಕಟೇಶಪ್ಪ ೧೦ ಪರ್ಸೆಂಟ್ ಕಮಿಷನ್ ಅಂತ ೫೦ ಸಾವಿರ ರೂ. ಮುರಿದುಕೊಂಡನು. ಸಾಲ ಪಡೆದ ಒಂದು ತಿಂಗಳಲ್ಲಿಯೇ ಬ್ಯಾಂಕಿನಿಂದ ಮೊದಲ ಕರೆ ಬಂತು. ನಯವಾಗಿ ಮಾತನಾಡಿದ ಹೆಣ್ಣು ಧ್ವನಿಯೊಂದು 'ಸಿದ್ದೇಗೌಡರೆ, ನೀವು ತೆಗೆದುಕೊಂಡಿದ್ದ ಸಾಲಕ್ಕೆ ಈ ತಿಂಗಳಿಗೆ ೫೧೦೦ ರೂ. ಬಡ್ಡಿ ಪಾವತಿಸಬೇಕು. ಶೀಘ್ರ ಬ್ಯಾಂಕ್‌ನಲ್ಲಿ ಹಣ ಪಾವತಿಸಿ' ಎಂದು ಹೇಳಿತು. ೩೬೫ ದಿನವೂ ನಾನಾ ತರದಲ್ಲಿ ಕರೆಯ ಕಿರುಕುಳ ಮುಂದುವರಿಯಿತು.

ಇತ್ತೀಚಿಗೆ ಬ್ಯಾಂಕ್‌ನಿಂದ ಸಾಲ ವಸೂಲಾತಿಯ ಫೋನ್ ಕರೆ ಬಂತೆಂದರೆ ಸಿದ್ದೇಗೌಡ ಬೆಚ್ಚುತ್ತಿದ್ದನು. ಊರೊಳಗೆ ವಾಹನ ಸದ್ದಾಯಿತೆಂದರೆ ಬ್ಯಾಂಕ್‌ನವರೆ ಬಂದರೆಂದು ಗಾಬರಿಗೊಳ್ಳುತ್ತಿದ್ದನು. ಬ್ಯಾಂಕ್‌ನಿಂದ ಹರಾಜು ನೋಟಿಸ್ ಕೂಡ

ಹೊಸ ಮನುಷ್ಯ/ ಫೆಬ್ರುವರಿ/೨೦೧೫ ೮



ಬಂತು. ತಂಬಾಕು ಬೆಳೆಯಲ್ಲಾದರೂ ಸಾಲ ತೀರಿಸಿಬಿಡಬೇಕೆಂದುಕೊಂಡಿದ್ದ ಸಿದ್ದೇಗೌಡನ ನಂಬಿಕೆಯ ಚಿಗುರು ತಂಬಾಕು ಬೆಲೆ ಕುಸಿತದಿಂದ ಮುರುಟಿ ಹೋಯಿತು.

ಯಾವುದೋ ಕಂಪನಿಯ ವಿಶೇಷ ತಳಿಯ ಅವರೆ ಬೀಜ ಹೆಚ್ಚು ಇಳುವರಿ ನೀಡುತ್ತದೆ ಎಂದು ಕೊಂಡು ತಂದಿದ್ದು ತಪ್ಪಾಗಿ ಹೋಯಿತು. ಅದಕ್ಕೆ ಬಳಸುತ್ತಿದ್ದ ಕ್ರಿಮಿನಾಶಕದ ಖರ್ಚು ಬೆಳೆಯ ಸಮಪಾಲು ಪಡೆದುಕೊಂಡಿತು. ಎಲ್ಲ ಸಮಸ್ಯೆಗಳು ಒಟ್ಟಿಗೆ ಅಮರಿಕೊಂಡಾಗ ಖಿನ್ನತೆಗೊಳಗಾಗಿದ್ದ ಸಿದ್ದೇಗೌಡ ಅವರೆ ಬೆಳೆಗೆ ಔಷಧ ಹೊಡೆಯುತ್ತೇನೆಂದು ಜಮೀನಿಗೆ ಹೋದವ ಅವರೆ ಬೆಳೆಗೆ ಬಳಸುವ ಲ್ಯಾನೆಟ್ ಕ್ರಿಮಿನಾಶಕವನ್ನು ತನ್ನ ಹೊಟ್ಟೆಗೆ ಹಾಕಿಕೊಂಡ.

ಸಾಂತ್ವನ ಹೇಳಲು ಬಂದ ಮಾಜಿ ಮುಖ್ಯಮಂತ್ರಿಯೊಬ್ಬರು ಶವದ ಮುಂದೆ ನಿಂತು ಇದು ಆಡಳಿತ ಸರ್ಕಾರದ ವೈಫಲ್ಯ, ರೈತರ ಅಭಿವೃದ್ಧಿಗಾಗಿ ಕೃಷಿ ಬೆಲೆ ಆಯೋಗ ರಚನೆ ಮಾಡುತ್ತೇವೆಂದು ರೈತರಿಗೆ ವಂಚನೆ ಮಾಡಿದೆ, ಬೆಂಬಲ ಬೆಲೆ ನೀಡಲು ವಿಫಲವಾಗಿವೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಬ್ಬಗೆಯ ನೀತಿಯ ವಿರುದ್ಧ ಹೋರಾಟ ರೂಪಿಸುತ್ತೇನೆ ಎಂದು ಬೊಬ್ಬೆ ಹೊಡೆದರು.

**ಘಟನೆ ೨**: ಚಾಮರಾಜನಗರ ತಾಲ್ಲೂಕಿನ ಬದನಗುಪ್ಪೆ, ಕೆಲ್ಲಂಬಳ್ಳಿ ಗ್ರಾಮದ ರೈತರಿಗೆ ಎಲ್ಲಿಲ್ಲದ ಸಂಭ್ರಮ. ಈ ಸಂಭ್ರಮಕ್ಕೆ ಕಾರಣ ಸರ್ಕಾರ ಈ ಪ್ರದೇಶವನ್ನು ಭಾರೀ ಕೈಗಾರಿಕಾ ಅಭಿವೃದ್ಧಿಗೆ ಆಯ್ಕೆ ಮಾಡಿರುವುದು. ಕೈಗಾರಿಕೋದ್ಯಮಿಗಳಿಗೆ ಭೂಮಿ ನೀಡಲು ಅಗತ್ಯವಿರುವ ೧೩೦೦ ಎಕರೆ ಭೂ ಸ್ವಾಧೀನ ಪ್ರಕ್ರಿಯೆ ಆರಂಭವಾಗಿದೆ. ಇದಕ್ಕಾಗಿ ಸರ್ಕಾರ ಎಕರೆಗೆ ೨೦ ಲಕ್ಷ ರೂ. ನಿಗದಿ ಮಾಡಿದೆ.

ಬದನಗುಪ್ಪೆ ಗ್ರಾಮದ ನಿವಾಸಿ ರೈತ ಮಹಿಳೆ ಶಿವಮ್ಮ ಎಂಬವರಿಂದ ೨.೧೦ ಎಕರೆ ಜಮೀನಿಗೆ ೪೫ ಲಕ್ಷ ರೂ. ಚೆಕ್ ನೀಡಿದ ಸರ್ಕಾರ ಜಮೀನನ್ನು ವಶ ಪಡಿಸಿಕೊಂಡಿತು. ಮಕ್ಕಳು ಮೊಮ್ಮಕ್ಕಳೊಂದಿಗೆ ಬ್ಯಾಂಕ್‌ಗೆ ತೆರಳಿದ ಶಿವಮ್ಮ ಒಮ್ಮೆಲೆ ೪೫ ಲಕ್ಷ ರೂ. ದೊಡ್ಡ ಮೊತ್ತದ ಹಣ ನೋಡಿ ಬ್ಯಾಂಕ್‌ನಲ್ಲಿಯೇ ದಸಕ್ಕೆಂದು ಕುಸಿದು ಬಿದ್ದು ಪ್ರಾಣ ಬಿಟ್ಟಳು.

ಈಕೆಯ ಶವ ಸಂಸ್ಕಾರ ಸಂತೋಷದಿಂದಲೇ ಜರುಗಿತು. ೧೧ನೇ ದಿನದ ತಿಥಿ ಕಾರ್ಯ ಸಂಭ್ರಮಾಚರಣೆಯಾಯಿತು. ಒಂದೆರಡು ಕುರಿಗಳ ತಲೆಗಳೂ ಉರುಳಿದವು. ಈಗ ಅವರ ಮಕ್ಕಳು, ಮೊಮ್ಮಕ್ಕಳಾದಿಯಾಗಿ ಎಲ್ಲರು ನಂಜನಗೂಡು ಪಟ್ಟಣದಲ್ಲಿ ಬಂದು ನೆಲೆಸಿದ್ದಾರೆ.

ಅಲ್ಲಿಯ ರೈತರಿಗೆ ಇಲ್ಲಿಯ ತನಕ ವಾಸ ಯೋಗ್ಯವಾಗಿದ್ದ ಮನೆಗಳು ಅಂದ ಕಳೆದು ಕೊಂಡಿವೆ ಅನಿಸಿದೆಯಂತೆ, ಪಟ್ಟಣದ ಮಾದರಿಯ ಆರ್‌ಸಿಸಿ ಮನೆಗಳು ಪೈಪೋಟಿಯ ಮೇಲೆ ತಲೆ ಎತ್ತಲಾರಂಭಿಸಿವೆ. ಕೃಷಿ ಪರಿಕರಗಳು ಮನೆಯ ಹೊರಗೆ ತುಕ್ಕು ಹಿಡಿಯಲಾರಂಭಿಸಿವೆ. ಹೊಸದಾಗಿ ಕೊಂಡ ಕಾರುಗಳಿಗೆ ನೆರಳು ಕಾಣಿಸಲು ಶೆಡ್‌ಗಳು ನಿರ್ಮಾಣವಾಗಿವೆ. ಮನೆಯೊಳಗೆ ಹೊಸದಾಗಿ ಕೊಂಡ ದೊಡ್ಡ ಪರದೆಯ ಎಲ್‌ಇಡಿ ಟಿವಿಗಳಲ್ಲಿ ಧಾರಾವಾಹಿಗಳು ಬೆಳಿಗ್ಗೆಯಿಂದ ಸಂಜೆಯ ತನಕ ರಾರಾಜಿಸುತ್ತಿವೆ.

ಊರೊಳಗೆ ೨ ಬಾರ್ ಮತ್ತು ರೆಸ್ಟೋರೆಂಟ್‌ಗಳು ಹೊಸದಾಗಿ ತಲೆ ಎತ್ತಿವೆ. ಇಲ್ಲಿಯ ಬಹುತೇಕರಿಗೆ ಈಗ ಮನೆಯ ಊಟ ರುಚಿಸುವುದಿಲ್ಲವಂತೆ. ಅದಕ್ಕಾಗಿ ಆಗಾಗ್ಗೆ ಮೈಸೂರಿಗೆ ಬಂದು ಹೋಗುತ್ತಾರೆ. ಗ್ರಾಮದ ಬಹುತೇಕರು ವೈಭೋಗದ ಜೀವನಕ್ಕೆ ತಮ್ಮನ್ನು ಒಗ್ಗಿಸಿಕೊಳ್ಳುತ್ತಿದ್ದಾರೆ.

ನಾನು ಮೇಲೆ ಹೇಳಿದ ಎರಡೂ ಸಂದರ್ಭಗಳು ಕಥೆಯಲ್ಲ ನಿಜದ ಘಟನೆಗಳು. ಈ ಎರಡು ಘಟನೆಗಳು ನಡೆದದ್ದು ೨೦೧೪–೧೫ ರಲ್ಲಿ. ಮೇಲಿನ ಎರಡೂ ಘಟನೆಗಳಲ್ಲಿ ಲಾಭ ಪಡೆಯುತ್ತಿರುವವರು ಬಂಡವಾಳ ಹೂಡಿಕೆದಾರರು ಮತ್ತು ಮಧ್ಯವರ್ತಿಗಳೆ.

ವಿದೇಶಿ ವ್ಯಾಪಾರಿಗಳನ್ನು ಸೆಳೆಯಲು ನೂರಾರು ಕೋಟಿ ವೆಚ್ಚದಲ್ಲಿ ಹೈಟೆಕ್ ಮಾರುಕಟ್ಟೆ ನಿರ್ಮಿಸಿಕೊಟ್ಟಿರುವ ಸರ್ಕಾರ ಅದೇ ರೈತರಿಗೆ ೧೦೦ ರೂ. ಬೆಂಬಲ ಬೆಲೆ ನೀಡಲು ಸೋತಿದೆ. ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೆ ಸಾಂತ್ವನ ಹೇಳಲು ಬಂದಿದ್ದ ಮಾಜಿ ಮುಖ್ಯಮಂತ್ರಿ ಆಡಳಿತ ಸರ್ಕಾರದ ವೈಫಲ್ಯ ಹೇಳಿದರೇ ಹೊರತು ತಮ್ಮ ಆಡಳಿತ ಅವಧಿಯು ಇದಕ್ಕೆ ಭಿನ್ನವಾಗಿಲ್ಲ ಎಂಬುದನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ.

ಮೂರು ತಿಂಗಳು ಮೈಮುರಿದು ಬೆಳೆದ ಸೌತೆಕಾಯಿಯನ್ನು ಪಟ್ಟಣಕ್ಕೆ ತಂದು ಮೂಟೆಗೆ ೨೫ ರೂ. ನಂತೆ ಮಾರುವ ರೈತ ಮತ್ತೆ ಬಸ್ ಹತ್ತಿ ಊರಿಗೆ ಹೋಗುವಾಗ ದಾಹ ತೀರಿಸಿಕೊಳ್ಳಲು ಅದೇ ಸೌತೆಕಾಯಿಯ ಒಂದು ಸೀಳಿಗೆ ೫ ರೂ. ಕೊಟ್ಟು ತಿನ್ನುತ್ತಾನೆ. ಬೆಳೆಗಾರನಿಂದ ಕ್ವಿಂಟಾಲ್ ಭತ್ತಕ್ಕೆ ೧೧೦೦ ರೂ. ಕೊಟ್ಟು ಖರೀದಿಸುವ ಮಧ್ಯವರ್ತಿ ಅದರಿಂದ ಸಿಗುವ ೭೫ ಕೆಜಿ ಅಕ್ಕಿಗೆ ೧೧೦೦ ಬಂಡವಾಳದೊಂದಿಗೆ ಕೇವಲ ಕೈ ಬದಲಾವಣೆಯಲ್ಲಿ ೩೭೫೦ ರೂ. ಪಡೆಯುತ್ತಾನೆ. ಇಲ್ಲಿ ಬೆಳೆಗಾರ, ಗ್ರಾಹಕ ಇಬ್ಬರಿಗೂ ಪರಿತಾಪ. ಬೆಳೆಗಾರ ಮಾರುವವನಾಗಲು ಅಭಿವೃದ್ಧಿ ಎಂಬ ಹೂಡಿಕೆದಾರ ಬಿಡುವುದಿಲ್ಲ.

ಭೂಮಿ ನೀಡಿ ಹಣ ಪಡೆದ ರೈತರು ಕಾರು ಕೊಳ್ಳುವ ಮೂಲಕ, ನೂತನ ವಿನ್ಯಾಸದ ಮನೆ ಕಟ್ಟುವ ಮೂಲಕ, ಸಿರಿವಂತಿಕೆಯ ಗೃಹೋಪಯೋಗಿ ವಸ್ತುಗಳ ಮೂಲಕ, ಮದ್ಯದಂಗಡಿಯ ಮೂಲಕ ಕೈಗಾರಿಕೋದ್ಯಮಿಗಳಿಗೆ, ಹೂಡಿಕೆದಾರರಿಗೆ ಪಡೆದ ಹಣವನ್ನು ವಾಪಸ್ ನೀಡುತ್ತಿದ್ದಾರೆ.

ನನ್ನ ಮಿತ್ರ ರೈತ ನಾಯಕ, ಕಿಷನ್ ಪಟ್ನಾಯಕ್ ಶಿಷ್ಯ ಕಣ್ಣಯ್ಯನ್ ಅವರು ಇತ್ತೀಚೆಗೆ ರೋಮ್ ನಗರದಲ್ಲಿ ವಿಶ್ವ ಸಂಸ್ಥೆ ಆಯೋಜಿಸಿದ್ದ ಆಹಾರ ಭದ್ರತೆ ಸಭೆಯಲ್ಲಿ ಭಾಗವಹಿಸಿದ್ದರಂತೆ, ಅಲ್ಲಿ ನೆರೆದಿದ್ದ ಹಲವು ದೇಶದ ರೈತ ಪ್ರತಿನಿಧಿಗಳಿಗೆ ಗಣ್ಯಾತಿಗಣ್ಯರಿಗೆ ನೀಡುವ ಉಪಚಾರವಂತೆ. ಆಹಾರ ಭದ್ರತಾ ಸಭೆಗೆ ಭಾರೀ ಬಂಡವಾಳ ಹೂಡಿಕೆದಾರರಿಗೂ ಆಹ್ವಾನವಂತೆ. ಸಭೆಯಲ್ಲಿ ಉಗಾಂಡದ ರೈತ ನಾಯಕನೊಬ್ಬ ಆಹಾರ ಭದ್ರತೆ, ಕೃಷಿ ಅಭಿವೃದ್ಧಿಗೆ ಬಂಡವಾಳ ಹೂಡಿಕೆಯಾಗಲಿ ಎಂದು ಹೇಳಿ ಭಾರೀ ಚಪ್ಪಾಳೆ ಗಿಟ್ಟಿಸಿಕೊಂಡರಂತೆ.

ಕಣ್ಣಯ್ಯನ್ ಆಹಾರ ಭದ್ರತೆ ಎಂದರೆ ಬಂಡವಾಳ ಹೂಡಿಕೆಯಲ್ಲ ಬೀಜಗಳ ಸಂರಕ್ಷಣೆ, ಸುಸ್ಥಿರ ಬೇಸಾಯ ಕ್ರಮದ ಬಗ್ಗೆ ಮಾತನಾಡುತ್ತ, ಆಹಾರ ಭದ್ರತೆಯ ನಿಯಮಗಳು ಅಪೌಷ್ಟಿಕತೆಯನ್ನು ದೂರ ಮಾಡಲು ಸಾಧ್ಯವಿಲ್ಲ, ಆಹಾರ ಬೆಳೆಯುವ ರೈತ ಬೀಜಕ್ಕಾಗಿ ಹೂಡಿಕೆದಾರರ ಮುಂದೆ ಕೈ ಕಟ್ಟಿ ನಿಲ್ಲಬೇಕಾಗುತ್ತದೆ. ನಮ್ಮ ಇರುವಿಕೆ ನಾಶವಾಗುತ್ತದೆ ಎಂದರೆ ಅದಕ್ಕೂ ಚಪ್ಪಾಳೆಯಂತೆ.

ನಿಜ ವಿಶ್ವಸಂಸ್ಥೆಯಂತಹ ಮಹತ್ವದ ಸಭೆಗಳಲ್ಲೂ ರೈತ ಪ್ರತಿನಿಧಿಗಳ ಭಾಷಣ ಬರಿ ಚಪ್ಪಾಳೆ ಗಿಟ್ಟಿಸಿಕೊಳ್ಳುವುದಕ್ಕೆ ಸೀಮಿತವಾಗಿರುತ್ತವೆ. ಆಹಾರ ಭದ್ರತೆ, ಬೀಜ ಸಂರಕ್ಷಣೆ, ಬೆಲೆ ನಿಗದಿ ಎಲ್ಲವು ಹೂಡಿಕೆದಾರರ ಹಿಡಿತದಲ್ಲಿದೆ. ಮತ್ತೆ ನಾವು ಆ ಬಂಜೆ ಬೀಜಗಳನ್ನೇ ಖರೀದಿಸಬೇಕು. ಕೂಡಿಡುವಂತಿಲ್ಲ, ಸ್ವತಂತ್ರವಾಗಿ ಮಾರುವಂತಿಲ್ಲ.



ಜೆ.ಸಿ.ಕುಮಾರಪ್ಪ ವ್ಯಾಖ್ಯಾನಿಸಿದ "ಅಭಿವೃದ್ಧಿ ಎಂಬುದೇ ಬಂಜೆ ಪದ" ದೇಶದ ಮೊದಲ ಪ್ರಧಾನಿಯಿಂದ ತಿರಸ್ಕೃತಗೊಂಡಿದ್ದು ಇನ್ನೂ ಸ್ವೀಕೃತಗೊಂಡಿಲ್ಲ. ಗಾಂಧೀಜಿ ಹೇಳಿದ ಪಟ್ಟಣದ ಹಣ ಹಳ್ಳಿಗೆ ಹರಿದು ಬರಬೇಕು ಎಂಬ ಮಾತು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ. ಗುಡಿ ಕೈಗಾರಿಕೆಗಳ ಉತ್ತೇಜನ ಎಂಬುದು ಭಾರೀ ಕೈಗಾರಿಗಳ ಅಭಿವೃದ್ಧಿ ಎಂದಾಗಿದೆ. ಈಗ ಉಳಿದಿರುವುದು ಐಡೆಂಟಿಟಿಯ ಪ್ರಶ್ನೆ.

**(ಚಾಮರಾಜನಗರದ ಸಮಾಜವಾದಿ ಅಧ್ಯಯನ ಕೇಂದ್ರದ ಸ್ಥಾಪಕ ಸದಸ್ಯರಲ್ಲೊಬ್ಬರಾದ ರವಿಚಂದ್ರ, ಅದೇ ಜಿಲ್ಲೆಯ ಚಿಕ್ಕಂಪಿಹುಂಡಿಯ ರೈತ ಕುಟುಂಬದಿಂದ ಬಂದವರು. ಈಗ ಮೈಸೂರಿನ 'ಆಂದೋಲನ' ಪತ್ರಿಕೆಯಲ್ಲಿ ಉಪ ಸಂಪಾದಕರಾಗಿದ್ದಾರೆ)**

**ನಮ್ಮ ಮುಂದಿನ (ಮಾರ್ಚ್) ಸಂಚಿಕೆ**

**ಮಹಿಳಾ ವಿಶೇಷ ಸಂಚಿಕೆ**

**ಇದರಲ್ಲಿ ಕನ್ನಡದ ಹಿರಿ–ಕಿರಿಯ ಲೇಖಕಿಯರ**
**ಚಿಂತನ, ವ್ಯಕ್ತಿಚಿತ್ರಗಳು, ಮಹಿಳಾ ಸಾಹಿತ್ಯ ಸಮೀಕ್ಷೆ**
**ಕಥೆ, ಕವನ, ವಿನೋದ, ಪುಸ್ತಕ ವಿಮರ್ಶೆ ಇತ್ಯಾದಿ**

## ಸಮಕಾಲೀನ

# ನಮ್ಮ ಸಂವಿಧಾನದತ್ತ ಒಂದು ಮರುನೋಟ




ಒಂದು ಸಮಾಜ ಆಧುನಿಕ ಅರ್ಥದಲ್ಲಿ ಒಂದು ರಾಷ್ಟ್ರ ಎನಿಸಿಕೊಳ್ಳುವುದು ಮುಖ್ಯವಾಗಿ ಅದು ಒಂದು ಸಂವಿಧಾನವನ್ನು ಪಡೆದುಕೊಂಡಾಗ. ಸಂವಿಧಾನ ಎಂದರೆ ಒಂದು ಭೂಭಾಗದಲ್ಲಿ ವಾಸಿಸುವ ಜನಸಮುದಾಯವೊಂದು ತಾನು ಜಗತ್ತಿನ ಒಂದು ಭಾಗವಾಗಿ ಬದುಕಿ ಬಾಳಲು ತಾನೇ ರೂಪಿಸಿಕೊಂಡ ಒಂದು ನಾಗರಿಕ ಕಾನೂನು ಸಂಹಿತೆ ಎನ್ನಬಹುದು. ಈ ಅರ್ಥದಲ್ಲಿ ಭಾರತ ಅಧಿಕೃತವಾಗಿ ಒಂದು ರಾಷ್ಟ್ರ ಎನಿಸಿಕೊಂಡದ್ದು ೧೯೫೦ರ ಜನವರಿ ೨೬ರಂದು. ಅಂದು ಅದು ತನ್ನನ್ನು ಒಂದು ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಕರೆದುಕೊಂಡಿತು.

ಹಾಗೆ ನೋಡಿದರೆ ಭಾರತ ಇತಿಹಾಸದಲ್ಲಿ ಹಿಂದೆಂದೂ ರಾಜಕೀಯ ಅರ್ಥದಲ್ಲಿ ಒಂದು ರಾಷ್ಟ್ರವಾಗಿರಲಿಲ್ಲ. ಅದು ಹಲವು ವಿಭಿನ್ನ ರಾಜ್ಯಾಡಳಿತಗಳಿಗೆ ಒಳಪಟ್ಟ ಒಂದು ಭೂಭಾಗವಾಗಿತ್ತು. ಅಂದರೆ, ಭಾರತ ಎಂಬುದು ಸಾರತಃ ಒಂದು ಮಾನಸಿಕತೆ ಮಾತ್ರವಾಗಿತ್ತು. ಈ ಮಾನಸಿಕತೆಯಲ್ಲಿ ಇತಿಹಾಸದುದ್ದಕ್ಕೂ ಇಲ್ಲಿ ಬೆರೆತು ಕೂಡಿ ಬಾಳಿದ ಹಲವು ಜನಾಂಗ, ಧರ್ಮ, ಭಾಷೆ, ಸಂಪ್ರದಾಯಗಳು ಕಾಲಕ್ರಮದಲ್ಲಿ ಸೇರಿ ರೂಪಿಸಿಕೊಂಡ ಒಂದು ನೀತಿ ಸಂಹಿತೆ ಅಂತರ್ಗತವಾಗಿತ್ತು. ಅದೇ ಭಾರತವಾಗಿತ್ತು. ಆದರೆ ಈ ಭೂಭಾಗವನ್ನೆಲ್ಲ ಬ್ರಿಟಿಷ್ ವಸಾಹತುಶಾಹಿ ತನ್ನ ಹಿಡಿತಕ್ಕೆ ತೆಗೆದುಕೊಂಡು ಆಳತೊಡಗಿದಾಗ ಭಾರತವೆಂಬುದು ಒಂದು ರಾಜಕೀಯ ಕಲ್ಪನೆಯಾಗಿಯೂ ಹರಳುಗಟ್ಟಿಕೊಳ್ಳತೊಡಗಿತು. ವಸಾಹತುಶಾಹಿ ವಿರುದ್ಧದ ಸ್ವಾತಂತ್ರ್ಯ ಹೋರಾಟ ಪಶ್ಚಿಮದಲ್ಲಿ ರೂಪುಗೊಳ್ಳುತ್ತಿದ್ದ ರಾಷ್ಟ್ರೀಯತೆಯ ಕಲ್ಪನೆಯಿಂದ ಪ್ರಭಾವಿತವಾಗಿ ತನ್ನನ್ನು ತಾನು ರಾಷ್ಟ್ರೀಯ ಹೋರಾಟ ಎಂದು ಕರೆದುಕೊಳ್ಳತೊಡಗಿದಾಗ ರಾಷ್ಟ್ರೀಯತೆ ಎನ್ನುವುದು ಒಂದು ರಾಜಕೀಯ ಭಾವನೆಯಾಗಿಯೂ ಗರಿಗಟ್ಟಿಕೊಳ್ಳತೊಡಗಿತು. ಅದೇ ಸ್ಫೂರ್ತಿಯಲ್ಲಿ ಸಿದ್ಧವಾದ ನಮ್ಮ ಸಂವಿಧಾನ ಭಾರತವನ್ನು ಇಂದಿನ ರೂಪದಲ್ಲಿ ಒಂದು ರಾಷ್ಟ್ರವಾಗಿ ರೂಪಿಸಿ ನಿಲ್ಲಿಸಿದೆ.

ಆದರೆ ಭಾರತದ ಈ ರಾಷ್ಟ್ರ ಕಲ್ಪನೆ ಕಳೆದ ೬೫ ವರ್ಷಗಳ ನಮ್ಮ ಸಂವಿಧಾನದ ಕ್ರಿಯಾಶೀಲತೆಯ ಅನುಭವಗಳ ಹಿನ್ನೆಲೆಯಲ್ಲಿ ಇಲ್ಲಿನ ವಿವಿಧ ಜನಸಮುದಾಯಗಳ ಸ್ಮೃತಿ, ಇತಿಹಾಸ, ಭಾಷೆ, ಸಂಸ್ಕೃತಿಗಳ ಸಂರಕ್ಷಣೆಯ ಜೊತೆಗೆ ಜನತೆಯ ಸಾಮಾನ್ಯ ಜನಜೀವನದಲ್ಲಿ ಉದ್ಭವವಾಗುವ ವಿವಿಧ ನೆಲೆಗಳ ನ್ಯಾಯದ ಪ್ರಶ್ನೆಗಳನ್ನು ನಿರ್ವಹಿಸಿರುವ ರೀತಿ ನೀತಿಗಳನ್ನು ಗಮನಿಸಿದಾಗ ಸಂವಿಧಾನದ ಸ್ವರೂಪದ ಬಗ್ಗೆಯೇ ಹಲವು ಪ್ರಶ್ನೆಗಳು ಏಳುತ್ತವೆ. ಇಂತಹ ಹಲವು ಪ್ರಶ್ನೆಗಳೇ ಸಂವಿಧಾನಕ್ಕೆ ಅದು ಅಂಗೀಕರಿಸಲ್ಪಟ್ಟ ವರ್ಷದಿಂದ ಆರಂಭವಾದಂತೆ ಇತ್ತೀಚಿನ ವರ್ಷದವರೆಗೆ ಹಲವು ತಿದ್ದುಪಡಿಗಳಿಗೆ ಕಾರಣವಾಗಿವೆ. ಅವು ಯಾವುವೂ ನಮ್ಮ ಸಂವಿಧಾನ ಮೂಲಸ್ವರೂಪಕ್ಕೆ ಧಕ್ಕೆ ತರಬಾರದೆಂಬ ನಮ್ಮ ಸಂವಿಧಾನದ ವ್ಯಾಖ್ಯಾನದ ಪರಮೋಚ್ಚ ಅಧಿಕಾರ ಹೊಂದಿರುವ ನಮ್ಮ ಸರ್ವೋನ್ನತ ನ್ಯಾಯಾಲಯದ ಲಕ್ಷ್ಮಣರೇಖೆಯನ್ನು ದಾಟಿಲ್ಲ, ನಿಜ. ಆದರೆ ಸರ್ವೋನ್ನತ ನ್ಯಾಯಾಲಯವು ಸಂವಿಧಾನದ ಮೂಲಸ್ವರೂಪ ಎಂದರೇನು ಎಂಬುದನ್ನು ಸ್ಪಷ್ಟಪಡಿಸಿಲ್ಲವಾದ್ದರಿಂದ ಈ ೬೫ ವರ್ಷಗಳ ಅನುಭವವು ಸಂವಿಧಾನದ ಮೂಲಸ್ವರೂಪದತ್ತ ತಾತ್ವಿಕವಾಗಿಯಾದರೂ ಒಂದು ಮರುನೋಟ ಬೀರುವುದು ಅನುಚಿತವೇನೂ ಆಗಲಾರದು. ಕನಿಷ್ಟ ಜನಪರತೆಯ ನೈತಿಕ ನೆಲೆಯಲ್ಲಾದರೂ.

ಈ ಮರುನೋಟದ ಮುಖ್ಯ ನೆಲೆಗಳಾಗಬಹುದಾದ ಎರಡು ಸಂಗತಿಗಳೆಂದರೆ, (೧) ನಮ್ಮ ರಾಷ್ಟ್ರೀಯತೆ ಎಂಬುದು ನಮ್ಮ ಸ್ವಾತಂತ್ರ್ಯ ಹೋರಾಟದ ನಿರ್ಣಾಯಕ ಘಟ್ಟದ ಒತ್ತಡಗಳಿಗೆ ಸಿಕ್ಕಿ ರಾಜಕೀಯ ಏಕತೆಯನ್ನು ಸಂಘಟಿಸುವ ಭರದಲ್ಲಿ ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬಹುತ್ವದ ಆಯಾಮಗಳನ್ನು ಕಳೆದುಕೊಂಡ ಪರಿಣಾಮವು ನಮ್ಮ ಸಂವಿಧಾನ ರಚನೆಯಲ್ಲೂ ಕೆಲಸ ಮಾಡಿ ಇದನ್ನೊಂದು ನಿಜವಾದ ಒಕ್ಕೂಟ ರಾಷ್ಟ್ರವನ್ನಾಗಿ ಮಾಡಲು ನಿರಾಕರಿಸಿದೆಯೇ? (೨) ಪಾಶ್ಚಾತ್ಯ ನ್ಯಾಯ ಪದ್ಧತಿಯ ಆಕರ್ಷಣೆಗೆ ಸಿಕ್ಕಿ ಈ ಭಾರತವೆಂಬ ಬೃಹತ್ ವಿದ್ಯಮಾನವನ್ನು ಆಳಲು ಒಂದು ಬೃಹತ್ ಮತ್ತು ಹಾಗಾಗಿ ಒಂದು ಜಟಿಲವಾದ ಕಾನೂನುವ್ಯವಸ್ಥೆಯನ್ನು ನಿರ್ಮಿಸಿ ಜನತೆಗೆ ನ್ಯಾಯ ಎಂಬುದು ಕಾಲ ಮತ್ತು ವೆಚ್ಚ ಈ ಎರಡೂ ವಿಷಯಗಳಲ್ಲಿ ದೂರದ ಕನಸಾಗುವಂತೆ ಮಾಡಲಾಗಿದೆಯೇ?


ಈ ಎರಡೂ ಸಂಗತಿಗಳ ವಿಷದೀಕರಣಕ್ಕೆ ಒಂದೇ ಉದಾಹರಣೆ ನೀಡಬಹುದಾಗಿದೆ ಎಂಬುದೇ ಈ ಎರಡೂ ಸಂಗತಿಗಳ ಮೂಲಬೇರು ಒಂದೇ ಮೂಲದಲ್ಲಿದೆ ಎಂಬುದನ್ನು ಶ್ರುತಪಡಿಸುವಂತಿದೆ. ಈ ಉದಾಹರಣೆ ಎಂದರೆ, ಕರ್ನಾಟಕದಲ್ಲಿ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಮಾತೃಭಾಷೆಯಲ್ಲೇ ನೀಡಬೇಕೆಂಬ ಜಾಗತಿಕ ಶಿಕ್ಷಣ ನೀತಿ ಸಂಹಿತೆಯನುಸಾರವೇ ಕರ್ನಾಟಕದ ಜನತೆಯಿಂದ ಆಯ್ಕೆಯಾದ ಸರ್ಕಾರವೊಂದು ಹೊರಡಿಸಿದ ಆಜ್ಞೆಯನ್ನು ಸರ್ವೋನ್ನತ ನ್ಯಾಯಾಲಯ ಸಂವಿಧಾನಾತ್ಮಕವಲ್ಲವೆಂದು ಅನೂರ್ಜಿತಗೊಳಿಸಿರುವುದು ಮತ್ತು ಈ ತೀರ್ಮಾನಕ್ಕಾಗಿ ಜನತೆ ಸುಮಾರು ೨೫ ವರ್ಷಗಳ ಕಾಲ ಕಾಯಬೇಕಾಗಿ ಬಂದದ್ದು! ಅಂದರೆ ನಮ್ಮ ಸಂವಿಧಾನವನ್ನು ಕಾಪಾಡುವ ಕೆಲಸಕ್ಕೂ ಭಾರತದ ಸಾಂಸ್ಕೃತಿಕ ಬೇರುಗಳನ್ನು ಕಾಪಾಡುವುದಕ್ಕೂ ಸಂಬಂಧವೇ ಇಲ್ಲ! ಅಥವಾ ನಮ್ಮ ಸಂವಿಧಾನದಲ್ಲಿ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಹೇಗೆ ಸಂಯೋಜಿಸಲಾಗಿದೆ ಎಂದರೆ, ಅವುಗಳಲ್ಲಿ ಅವುಗಳನ್ನು ಕಾಲಕ್ರಮದಲ್ಲಿ ಬಲಪಡಿಸಬಲ್ಲ ಶಿಕ್ಷಣದ ಅರ್ಥಸಾರವಿರಲಿ, ಅವರ ಸಾಂಸ್ಕೃತಿಕ ಅಸ್ಮಿತೆಯ ಸಂರಕ್ಷಣೆಯ ಮುನ್ನೆಚ್ಚರಿಕೆಯ ಸುಳಿವು ಕೂಡ ಇಲ್ಲ!! ಇದು ನಮ್ಮ ಸಂವಿಧಾನ ರಚನೆಯಲ್ಲಿ ಎಲ್ಲೋ, ಯಾವುದೋ ಒಂದು ಭಾರತಕ್ಕೆ ಅನ್ಯವಾದ ಪ್ರತಿಷ್ಠಿತ ಶಕ್ತಿ ಕೆಲಸ ಮಾಡಿರುವ ಸುಳಿವನ್ನೂ ನೀಡುತ್ತದೆ. ಅದನ್ನು ವಸಾಹತುಶಾಹಿ ಆಧುನಿಕ ಪ್ರಜ್ಞೆ ಎಂದೂ ಗುರುತಿಸಬಹುದೇನೋ! ಈ ವಿಷಯದಲ್ಲಿ ಸಾಕಷ್ಟು ಜಾಗೃತವಾಗಿದ್ದ ಸಮಾಜವಾದಿಗಳ ಗುಂಪು ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸದಿದ್ದರೆ ಇದನ್ನು ತಡೆಯಬಹುದಿತ್ತು ಎಂಬ ಮಾತೂ ಇದೆ. ಅದೇನೇ ಇರಲಿ, ನ್ಯಾಯದಾನದ ಅತಿ ವಿಳಂಬದ ಹಿಂದಿರುವ ಅತಿ ಜಟಿಲ ಕಾನೂನು ವಿಧಿ ವಿಧಾನಗಳಿಗೂ ಇದೇ ಕಾರಣೀಭೂತವಾಗಿರುವುದು ಎಂದು ಹೇಳಬಹುದು. ರಾಜ್ಯಗಳಿಲ್ಲದೇ ಭಾರತ ಎಂಬುದಕ್ಕೇನು ಅರ್ಥ? ಆದರೆ ಇಲ್ಲಿ ಎಲ್ಲ ಉಲ್ಟಾ ಆಗಿದೆ! ಹಾಗಾಗಿಯೇ ನ್ಯಾಯಾಲಯಗಳಲ್ಲಿನ ವ್ಯಾಜ್ಯಗಳನ್ನು ಚರ್ಚಿಸುವಾಗ 'ಅದು ಕಾನೂತ್ಮಕವಾಗಿ ಸರಿಯಾಗಿರಬಹುದು. ಆದರೆ ನೈತಿಕವಾಗಿ ಸರಿಯಿಲ್ಲ' ಎಂಬ ಮಾತುಗಳು ಸಾಮಾನ್ಯವಾಗಿ ಕೇಳಿಬರುವುದು. ಇದಕ್ಕಿಂತ ದುರಂತ ಇನ್ನೊಂದಿದೆಯೇ?

ಆಧುನಿಕ ನ್ಯಾಯಪದ್ಧತಿಯ ನ್ಯಾಯ ಮತ್ತು ನೀತಿಗಳನ್ನು ಅಂತಿಮವಾಗಿ ತರ್ಕದ ಉತ್ಪನ್ನವನ್ನಾಗಿ ಮಾಡಿ ಕೂರಿಸಿಬಿಟ್ಟಿದ್ದೇವೆ. ಇದರ ಪರಿಣಾಮವೆಂಬಂತೆ ಆತ್ಮಸಾಕ್ಷಿಯ ಪರಿಕಲ್ಪನೆಯನ್ನು ಹಾಸ್ಯಾಸ್ಪದಗೊಳಿಸಿಬಿಟ್ಟಿದ್ದೇವೆ. ಇದಕ್ಕೆ ಮುಖ್ಯ ಕಾರಣ, ನಾವು ಭಾರತವನ್ನು ಒಂದು ಏಕಾತ್ಮಕ ರಾಷ್ಟ್ರವಾಗಿ ರಚಿಸಿಕೊಂಡಿರುವ ರೀತಿ. ಇಲ್ಲಿ ರಾಷ್ಟ್ರಕ್ಕೆ ಏಕ ಆತ್ಮ ಕಲ್ಪಿಸಲು ಹೋಗಿ ಜನರ ಆತ್ಮಗಳನ್ನೇ ವಿಸರ್ಜಿಸಲಾಗಿದೆ! ಈ ಏಕಾತ್ಮಕ ರಾಷ್ಟ್ರ ಕಲ್ಪನೆಯನ್ನು ಜತನದಿಂದ ಕಾಪಾಡಲು ಜಟಿಲ ಕಾನೂನು ವ್ಯವಸ್ಥೆಯೇ ಬೇಕು ಮತ್ತು ಈ ಜಟಿಲತೆಯನ್ನು ಸುಸಂಗತಗೊಳಿಸಲು ತರ್ಕದ ಆಶ್ರಯ ಬೇಕು. ಹಾಗಾಗಿ ಇದೊಂದು ವಿಷವ್ಯೂಹವಿದ್ದಂತೆಯೇ ಸರಿ! ಈ ಹಿನ್ನೆಲೆಯಲ್ಲೇ ಗಾಂಧಿ ಹೇಳಿದ್ದು: 'ಇಬ್ಬರು ಸಾರ್ವಜನಿಕವಾಗಿ ವ್ಯಾಜ್ಯ ಮಾಡುವುದೇ ಅಸಭ್ಯತೆ. ಆದರೆ ಅದನ್ನು ಇತ್ಯರ್ಥಪಡಿಸಲು ಅದಕ್ಕೆ ಸಂಬಂದಪಡದೇ ಇರುವ ಮೂರನೇಯವರನ್ನು(ವಕೀಲ ಮತ್ತು ನ್ಯಾಯಾಧೀಶ) ಆಶ್ರಯಿಸುವ ವ್ಯವಸ್ಥೆ ಇನ್ನೂ ಅಸಭ್ಯವಾದದ್ದು' ಎಂದು. ಆದರೆ 'ವೈಜ್ಞಾನಿಕ ತರ್ಕ' ದೇವತೆಯ ದಾಸಾನುದಾಸರಾಗಿರುವ ನಾವು ಆಧುನಿಕ ನ್ಯಾಯಾಂಗ ಪದ್ಧತಿಗೆ ಪರ್ಯಾಯವೇ ಇಲ್ಲ ಎಂಬ ಕತ್ತಲನ್ನು ಕಣ್ಣಿಗೆ ತುಂಬಿಕೊಂಡುಬಿಟ್ಟಿದ್ದೇವೆ. ಹಾಗಾಗಿ ನಮಗೆ ಗಾಂಧಿಯವರ ಈ ಮಾತಿನ ಮೂಲಭೂತ ಸತ್ಯ ಅರ್ಥವೇ ಆಗಲಾರದು! ಹಾಗೇ, ಇಂತಹ ನ್ಯಾಯಪದ್ಧತಿಯ ಮೇಲೆ ಮಾತ್ರ ನಿಲ್ಲಬಲ್ಲ ಕೇಂದ್ರೀಕೃತ ಜಟಿಲ ರಾಷ್ಟ್ರದ ಕಲ್ಪನೆಯನ್ನು ನಿರಾಕರಿಸುವ ಅವರ 'ಗ್ರಾಮ ಸ್ವರಾಜ್ಯ'ದ ಭಾವನೆಯೂ ಅರ್ಥವಾಗದು!

ಆದರೆ ಭಾರತ ಎಂಬ ಸಂಕೇತದಡಿ ರಾಜಕೀಯವಾಗಿ ಒಗ್ಗೂಡಿರುವ ವಿವಿಧ ನೆಲೆಗಳ ಜನಸಮುದಾಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಶೋತ್ತರಗಳಿಗೆ ಭಂಗ ಉಂಟಾದಾಗಲೆಲ್ಲ ಭಾರತದ ಸದ್ಯದ ಕಲ್ಪನೆ ಮತ್ತು ಅದನ್ನು ಸಂಯೋಜಿಸಿರುವ ಸಂವಿಧಾನದ ಸ್ವರೂಪದ ಬಗ್ಗೆ ಪ್ರಶ್ನೆಗಳು ಏಳುವುದು ಸಹಜ. ಈಗಾಗಲೇ ಇಂತಹ ಚರ್ಚೆಗಳು ಹಲವು ಬಾರಿ ನಡೆದೂ ಇವೆ. ಮುಖ್ಯವಾಗಿ ನಮ್ಮದು ಒಕ್ಕೂಟವೋ ಏಕಾತ್ಮಕ ರಾಷ್ಟ್ರವೋ? ಈ ಪ್ರಶ್ನೆಗೂ ನಮ್ಮ ನ್ಯಾಯಾಂಗದ ಒಂದು ಅವಿಭಾಜ್ಯ ಭಾಗವೇ ಆಗಿ ಹೋಗಿರುವ ವಿಳಂಬ ನ್ಯಾಯಕ್ಕೂ ಸಂಬಂಧವಿದೆಯೆ? ಹಾಗಿದ್ದಲ್ಲಿ ಇದಕ್ಕೆ ಪರಿಹಾರವೇನು? ಈ ಪ್ರಶ್ನೆಗಳನ್ನಿಟ್ಟುಕೊಂಡು ಇಲ್ಲಿ ಮೂವರು ಸಂವಿಧಾನ ಮತ್ತು ಕಾನೂನು ತಜ್ಞರು ಮೂರು ವಿಭಿನ್ನ ನೋಟಗಳ ವಿಶ್ಲೇಷಣೆ ನೀಡಿದ್ದಾರೆ. ಓದಿ ನಿಮ್ಮ ಅಭಿಪ್ರಾಯ ತಿಳಿಸಿ–ಸಂ

# “ಒಕ್ಕೂಟವೋ? ಏಕಾತ್ಮಕ ರಾಷ್ಟ್ರವೋ?” ಸಮನ್ವಯ ತತ್ವದ ಸಂಕಟಗಳು

–ಪ್ರೊ. ರವಿವರ್ಮ ಕುಮಾರ್



೬೫ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ ಕೇಂದ್ರ ಯೋಜನಾ ಆಯೋಗವನ್ನು ವಿಸರ್ಜಿಸಿ ನೀತಿ ಆಯೋಗ ಎಂಬ **‘ಚಿಂತಕರ ಚಾವಡಿ’** ಯನ್ನು ರೂಪಿಸಿರುವ ಪ್ರಧಾನ ಮಂತ್ರಿಯವರು ಇದರ ಮೂಲಕ ರಾಷ್ಟ್ರದ ಒಕ್ಕೂಟ ಸ್ವರೂಪವನ್ನು ಸಹಕಾರಿ ಮತ್ತು ಸ್ಪರ್ಧಾತ್ಮಕ ಒಕ್ಕೂಟವಾದದ ಮೂಲಕ ಬಲಪಡಿಸುವ ಮಾತುಗಳನ್ನಾಡಿದ್ದಾರೆ. ಇದರ ಭಾಗವಾಗಿ ಅವರು ರಾಜ್ಯಗಳಿಗೆ ಹೆಚ್ಚಿನ ಆಯೋಜನೆಯ ಮತ್ತು ಹಣಕಾಸಿನ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗಳ ಮಾತುಗಳನ್ನಾಡಿದ್ದಾರೆ. ಈ ಹಿನ್ನಲೆಯಲ್ಲಿ ಭಾರತದ ಸಂವಿಧಾನದ ಅಡಿಯಲ್ಲಿ ಈಗಿರುವುದೆಂದು ಹೇಳಲಾಗುವ ಒಕ್ಕೂಟ ವ್ಯವಸ್ಥೆಯ ಸ್ವರೂಪವನ್ನು ಅರಿಯಲು ನಮ್ಮ ಸಂವಿಧಾನ ರಚನೆಯ ಸಂದರ್ಭದಲ್ಲಿ ಪರಿಗಣನೆಗೆ ಬಂದ ಎರಡು ಸಂವಿಧಾನ ಮಾದರಿಗಳನ್ನು ಗಮನಿಸಬೇಕಾಗುತ್ತದೆ.

ಇಂಗ್ಲೆಂಡಿನ ಸಂವಿಧಾನ ಬಹುತೇಕ ಸಂಪ್ರದಾಯ ಮತ್ತು ರೂಢಿಗಳನ್ನು ಅವಲಂಬಿಸಿರುವ ಒಂದು ಅಲಿಖಿತ ವರ್ಗಕ್ಕೆ ಸೇರಿದ್ದಾಗಿದ್ದು ಏಕಾತ್ಮಕ(Unitary) ರಾಷ್ಟ್ರ ವ್ಯವಸ್ಥೆಗೆ ಅನುವು ಮಾಡಿಕೊಟ್ಟಿದೆ. ಅಲ್ಲಿ ಸಂಸತ್ತೊಂದರಲ್ಲೆ ಎಲ್ಲ ಅಧಿಕಾರವೂ ಕೇಂದ್ರೀಕೃತವಾಗಿದೆ. ಬಹುಮತ ಪಡೆದ ಪಕ್ಷದ್ದೇ ದರ್ಬಾರು. ಆದಾಗ್ಯೂ ಸಹ ಯಾವುದೇ ವಿಷಯದಲ್ಲಿ ಶಾಸನ ರಚನೆ ಕೆಲಸವನ್ನು ಸಂಸತ್ತಿನಲ್ಲೂ, ಶಾಸನ ಜಾರಿ ಮಾಡುವ ಕೆಲಸವನ್ನು ಕಾರ್ಯಾಂಗದಲ್ಲೂ ಮತ್ತು ಶಾಸನದ ವ್ಯಾಖ್ಯಾನ ಮಾಡುವ ಅಧಿಕಾರವನ್ನು ನ್ಯಾಯಾಂಗದಲ್ಲೂ ವಿಂಗಡಣೆ ಮಾಡುವ ಅಧಿಕಾರಗಳ ಪ್ರತ್ಯೇಕೀಕರಣದ ತತ್ವವನ್ನು( doctrine of separation of powers) ಒಟ್ಟಾರೆ ಒಪ್ಪಿಕೊಳ್ಳಲಾಗಿದೆ.

ಅಮೇರಿಕ ಸಂವಿಧಾನ ಇದಕ್ಕೆ ಭಿನ್ನವಾಗಿ ಒಕ್ಕೂಟ ವ್ಯವಸ್ಥೆಗೆ(Fedaralist) ಮಹತ್ವ ಕೊಟ್ಟಂತಹದು. ಏಕೆಂದರೆ ಅಮೇರಿಕಾದ ಸಂವಿಧಾನ ಬೆರಳಣಿಕೆಯಷ್ಟು ಅಧಿಕಾರಗಳನ್ನು ಮಾತ್ರ ಕೇಂದ್ರ ಸರ್ಕಾರಕ್ಕೆ ಕೊಟ್ಟು ಉಳಿದೆಲ್ಲವನ್ನೂ ಸಹ ರಾಜ್ಯಗಳಲ್ಲೇ ಬಿಟ್ಟಿದೆ. ಒಂದು ರೀತಿಯಲ್ಲಿ ರಾಜ್ಯಗಳಿಗೆ ಅಧಿಕಾರ ಕೊಟ್ಟಿದೆ ಎಂದು ಹೇಳುವುದಕ್ಕೆ ಬದಲಾಗಿ, ರಾಜ್ಯಗಳೇ ಕೇಂದ್ರಕ್ಕೆ ಅಧಿಕಾರ ಕೊಟ್ಟಿವೆ ಎಂದರೆ ತಪ್ಪಾಗಲಾರದು. ಸಂವಿಧಾನದ ಅಡಿಯಲ್ಲಿ ಬಲಿಷ್ಠ ರಾಜ್ಯಗಳ ಒಂದು ಒಕ್ಕೂಟ ವ್ಯವಸ್ಥೆ ಸೃಷ್ಟಿಸಿ, ಹೆಚ್ಚೇನೂ ಅಧಿಕಾರಗಳಿಲ್ಲದ ಒಂದು ಕೇಂದ್ರ ಸರ್ಕಾರವನ್ನು ರಚಿಸಿದಾಗ್ಯೂ ಸಹ ರಾಜ್ಯಗಳು ಬಲಿಷ್ಠವಾದರೆ ರಾಷ್ಟ್ರವೂ ಬಲಿಷ್ಠವಾಗುತ್ತದೆ ಎಂಬುದನ್ನು ಸಾಕ್ಷಾತ್ಕಾರ ಮಾಡಿ ತೋರಿಸಿದ ದೇಶ ಅಮೇರಿಕ. ಅದರ ಸಂವಿಧಾನದ ೪ನೇ ಪರಿಚ್ಛೇದದಲ್ಲಿ ರಾಜ್ಯಗಳ ನಡುವೆ ಇರತಕ್ಕಂತಹ ಸಂಬಂಧ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೂ ಇರುವ ಸಂಬಂಧಗಳನ್ನು ನಿಯಂತ್ರಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಶಾಸನ ರಚನೆಯ ಅಧಿಕಾರವನ್ನು ವಿಂಗಡಿಸಲಾಗಿದೆ. ಮುಖ್ಯವಾಗಿ, ರಾಜ್ಯಗಳ ಮತ್ತು ಕೇಂದ್ರದ ನಡುವೆ ಇರತಕ್ಕಂತ ಸೂಕ್ಷ್ಮ ಸಮತೋಲನವನ್ನು ಕಾಪಾಡಲು ಸುಪ್ರೀಂ ಕೋರ್ಟ್‌ನ್ನು ಒಂದು *ಅಧಿಕೃತ ಅಂಪೈರ್* ಆಗಿ ಮಾತ್ರ ಮಾಡಿ ಕೂರಿಸಲಾಗಿದೆ. ಅಮೇರಿಕಾದ ಒಕ್ಕೂಟ ವ್ಯವಸ್ಥೆಯ ಭದ್ರ ಬುನಾದಿ ಇರುವುದು ಮೂಲತಃ ಸ್ವಾಯತ್ತ ರಾಜ್ಯಗಳ ನಡುವೆ ನಡೆದ ಒಪ್ಪಂದವೇ ಆಗಿದೆ.

ಈ ಹಿನ್ನಲೆಯಲ್ಲಿ ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯ ಬಗ್ಗೆ ಸಂವಿಧಾನ ಸಭೆಯಲ್ಲಿ ವಿಶೇಷವಾಗಿ ಚರ್ಚೆ ನಡೆಯಿತು. ಬಹು ಮುಖ್ಯವಾಗಿ ನಾವು ಗಮನಿಸಬೇಕಾದ ಅಂಶವೆಂದರೆ ಅಲ್ಲಿ ನಡೆದದ್ದು ಸಂವಿಧಾನದ ಚರ್ಚೆಯೇ ಹೊರತು ಆಗ ಅಸ್ತಿತ್ವದಲ್ಲಿದ್ದ ರಾಜ್ಯಗಳ ನಡುವೆ ನಡೆದ ಒಪ್ಪಂದ ಅಲ್ಲವೇ ಅಲ್ಲ. ಹಾಗಾಗಿ ಒಕ್ಕೂಟ ರಚನೆಗೆ ಪೆಟ್ಟು ಬಿದ್ದದ್ದೇ ಸಂವಿಧಾನ ರಚನೆಯ ಪ್ರಕ್ರಿಯೆಯ ಕೇಂದ್ರೀಕರಣದಲ್ಲಿ. ಪ್ರಾರಂಭದಲ್ಲೇ India shall be union of States ಎನ್ನುವುದರ ಮೂಲಕ ಭಾರತದ ಸಂವಿಧಾನದಲ್ಲಿ ಒಕ್ಕೂಟ ರಚನೆ ಕಲ್ಪನೆಗೆ ಬದಲಾಗಿ ಏಕಾತ್ಮಕ ರಾಷ್ಟ್ರ ವ್ಯವಸ್ಥೆಗೆ ತಳಹದಿ ಬಿದ್ದಿತು. ಸಂವಿಧಾನ ಸಭೆಯ ಸಲಹೆಗಾರರಾಗಿದ್ದ ಬೆನಗಲ್ ನರಸಿಂಗರಾಯರಂತೂ ಪ್ರಾರಂಭದಲ್ಲೇ ಭಾರತವನ್ನು union states of India ಎಂದು ಘೋಷಿಸಿಬಿಟ್ಟರು. ಆದಾಗ್ಯೂ ಸಹ ಸಂವಿಧಾನ ಸಭೆಯ ಚರ್ಚೆಯಲ್ಲಿ ಒಕ್ಕೂಟ ವ್ಯವಸ್ಥೆಯ ಬಗ್ಗೆಯೂ ವಿಶೇಷ ಬೆಂಬಲ ವ್ಯಕ್ತವಾದದ್ದನ್ನು ನಾವು ಗಮನಿಸಬೇಕಾಗಿದೆ. ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಗೆ ಈ ನಾಲ್ಕು ಪ್ರಮುಖ ಅಂಶಗಳು ಆಧಾರವಾಗಿರುತ್ತವೆ:



೧.ಕೇಂದ್ರದಲ್ಲಿ ಒಂದು ಸರ್ಕಾರ ಮತ್ತು ರಾಜ್ಯದಲ್ಲಿ ವಿಭಿನ್ನವಾದ ಸರ್ಕಾರವನ್ನು ಗುರುತಿಸುವುದು.

೨. ರಾಜ್ಯ ಮತ್ತು ಕೇಂದ್ರಗಳ ನಡುವೆ ಅಧಿಕಾರದ ಸ್ಪಷ್ಟ ವಿಂಗಡಣೆ.

೩. ಲಿಖಿತ ಸಂವಿಧಾನದ ಮೂಲಕ ರಾಜ್ಯ ಮತ್ತು ಕೇಂದ್ರ ಎರಡನ್ನೂ ಭಧ್ರವಾಗಿ ಹಿಡಿದಿಟ್ಟುಕೊಳ್ಳುವುದು.

೪. ಒಂದು ಸ್ವತಂತ್ರ ನ್ಯಾಯಂಗದ ಮೂಲಕ ರಾಜ್ಯಗಳ ಮತ್ತು ಕೇಂದ್ರದ ನಡುವೆ ಉದ್ಭವಿಸುವ ವ್ಯಾಜ್ಯಗಳ ಪರಿಹಾರ.

ಈ ನಾಲ್ಕು ವೈಶಿಷ್ಟ್ಯತೆಗಳನ್ನು ಸ್ಪಷ್ಟವಾಗಿ ಹೊಂದಿರುವಂತಹ ಸಂವಿಧಾನ ಭಾರತಕ್ಕೆ ಒಕ್ಕೂಟ ವ್ಯವಸ್ಥೆಯನ್ನು ನೀಡಿದೆಯೇ? ಪರಿಶೀಲಿಸೋಣ.

ಪರಿಚ್ಛೇದ ವ್ಯವಸ್ಥೆಯಲ್ಲಿ ಸಂಸತ್ತಿಗೆ ರಾಜ್ಯಗಳ ಪುನರ್‌ವಿಂಗಡನೆ ಮಾಡುವ ಅವಕಾಶ ಮತ್ತು ಒಂದು ರಾಜ್ಯವನ್ನು ಸರಳ ಬಹುಮತದ ಮೂಲಕ ಸಂಪೂರ್ಣವಾಗಿ ನಾಮಾವಶೇಷ ಮಾಡುವ ಅಧಿಕಾರ ಇದೆ. (ಪರಿಚ್ಛೇದ ೪(೨)) ಉದಾ: ಮದ್ರಾಸ್ ಪ್ರಾಂತ್ಯವನ್ನು ಒಡೆದು, ಆಂಧ್ರ ಪ್ರದೇಶ ರಚಿಸಲಾಯಿತು, ಆಂಧ್ರಪ್ರದೇಶವನ್ನು ಒಡೆದು ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳನ್ನು ರಚಿಸಲಾಯಿತು. ಇದೇ ರೀತಿ ಹೊಸದಾಗಿ ಕರ್ನಾಟಕ, ಹಿಮಾಚಲ ಪ್ರದೇಶ, ನಾಗಾಲ್ಯಾಂಡ್ ಇತ್ಯಾದಿ ರಾಜ್ಯಗಳು ಅಸ್ತಿತ್ವಕ್ಕೆ ಬಂದದ್ದು. ಅಮೇರಿಕಾ ಸಂವಿಧಾನಕ್ಕೆ ಹೋಲಿಸಿದರೆ ಅಲ್ಲಿಯ ಸಂಸತ್ತಿಗೆ ರಾಜ್ಯಗಳ ಸಮ್ಮತಿ ಇಲ್ಲದೇ ಒಂದಿಂಚೂ ಗಡಿಯನ್ನು ಬದಲಾಯಿಸುವ ಅಧಿಕಾರ ಇಲ್ಲ.

## ರಾಜ್ಯಗಳ ನಡುವೆ ಅಸಮಾನತೆ

ಅಮೇರಿಕಾ ಸಂವಿಧಾನದ ಅಡಿಯಲ್ಲಿ ೫೦ ರಾಜ್ಯಗಳು ಸಮಾನ ಅಧಿಕಾರವುಳ್ಳವುಗಳಾಗಿವೆ. ಆದರೆ ಭಾರತದಲ್ಲಿ ಭಾರತದ ೩೦ ರಾಜ್ಯಗಳ ಯಾವುದರಲ್ಲೂ ಸಂಬಂಧವಾಗಲಿ ಸಹಕಾರವಾಗಲಿ ಇರುವುದಿಲ್ಲ. ಅಮೇರಿಕಾದಲ್ಲಿ ಪ್ರತಿಯೊಂದೂ ರಾಜ್ಯಕ್ಕೂ ಮೇಲ್ಮನೆಯಲ್ಲಿ ಸಮಾನ ಪ್ರಾತಿನಿಧ್ಯ ಸಿಕ್ಕಿದ್ದರೆ, ಭಾರತದ ರಾಜ್ಯ ಸಭೆಯಲ್ಲಿ ಯಾವುದೇ ಎರಡು ರಾಜ್ಯಗಳ ನಡುವಿನ ಸಮಾನ ಪ್ರಾತಿನಿಧ್ಯದ ಪ್ರಶ್ನೆಯೇ ಇಲ್ಲ. ಭಾರತ ಸಂವಿಧಾನದ ೪ನೇ ಅನುಬಂದದಲ್ಲಿ ರಾಜ್ಯಗಳಿಗೆ ಕೊಟ್ಟಿರುವ ಪ್ರಾತಿನಿಧ್ಯ ೧ ರಿಂದ ೩೪ರವರೆಗೆ ಬದಲಾಗುತ್ತದೆ. ಹೀಗಾಗಿ ಬಲಾಢ್ಯ ರಾಜ್ಯಗಳು, ಬಲಾಢ್ಯವಲ್ಲದ ರಾಜ್ಯಗಳ ಮೇಲೆ ಸುಲಭವಾಗಿ ಸವಾರಿ ಮಾಡಬಹುದಾಗಿದೆ. ನದಿಜಲದ ವಿವಾದಗಳು, ಗಡಿನೆಲದ ವಿವಾದಗಳು, ಈ ಒಂದು ಅಸಮಾನತೆಗೆ ಜ್ವಲಂತ ಸಾಕ್ಷಿ ಎನ್ನಬಹುದು.

ಅಮೇರಿಕಾ ರಾಜ್ಯದಲ್ಲಿ ಪ್ರತಿಯೊಂದು ರಾಜ್ಯಕ್ಕೂ ತನ್ನದೇ ಆದಂತಹ ಸಂವಿಧಾನ ಇದೆ. ಅಲ್ಲದೇ ಪ್ರತಿಯೊಂದು ರಾಜ್ಯಕ್ಕೂ ಪ್ರಮುಖ ವಿಚಾರಗಳಲ್ಲಿ ಪೂರ್ಣ ಸ್ವಾತಂತ್ರ್ಯವಿದೆ. ಬದಲಾಗಿ ಭಾರತೀಯ ವ್ಯವಸ್ಥೆಯಲ್ಲಿ ಜಮ್ಮು ಕಾಶ್ಮೀರವನ್ನು ಬಿಟ್ಟು ಯಾವುದೇ ರಾಜ್ಯಕ್ಕೆ ಭಾರತದ ಸಂವಿಧಾನದ ಯಾವುದೇ ತಿದ್ದುಪಡಿ ಮಾಡಲು ಅವಕಾಶವಿಲ್ಲ.

ನ್ಯಾಯಾಂಗದಲ್ಲಿಲ್ಲದ ಒಕ್ಕೂಟ: ಭಾರತದ ನ್ಯಾಯಂಗ ವ್ಯವಸ್ಥೆಯಲ್ಲೂ ಕೂಡ ಒಕ್ಕೂಟ ವ್ಯವಸ್ಥೆಗೆ ಗಂಭೀರ ಹಿನ್ನಡೆಯಾಗಿದೆ. ರಾಜ್ಯಾಂಗದಲ್ಲಿ ಪ್ರತ್ಯೇಕ ನ್ಯಾಯಾಂಗ ವ್ಯವಸ್ಥೆ–ಪ್ರತಿಯೊಂದು ರಾಜ್ಯಕ್ಕೂ ಅದರದೇ ಆದ ಉಚ್ಚ ನ್ಯಾಯಾಲಯ–ಇದ್ದರೂ, ಅದರ ಜೊತೆಗೇ, ಸಂಯುಕ್ತ ವ್ಯವಸ್ಥೆಯ ಅಡಿಯಲ್ಲಿ ಇನ್ನೊಂದು ನ್ಯಾಯಾಂಗ ವ್ಯವಸ್ಥೆ ಇದ್ದು ಅದು ಸಂಪೂರ್ಣವಾಗಿ ಏಕಾತ್ಮಕ ಸ್ವರೂಪದ ನ್ಯಾಯಾಂಗ ವ್ಯವಸ್ಥೆಯಾಗಿದೆ. ಉಚ್ಚ ನ್ಯಾಯಾಲಯಗಳು ಸರ್ವೋನ್ನತ ನ್ಯಾಯಾಲಯದ ಅಡಿಯಾಳಾಗದಿದ್ದರೂ ಸಹ ಉಚ್ಚ ನ್ಯಾಯಾಲಯದ ಯಾವುದೇ ಆದೇಶದವನ್ನಾದರೂ ಸಹ ಸರ್ವೋನ್ನತ ನ್ಯಾಯಾಲಯ ಮೇಲ್ಮನವಿ ವಿಚಾರಣೆ ಮೂಲಕ ರದ್ದು ಮಾಡುವ ಅಧಿಕಾರ ಇರುವುದರಿಂದ ಮತ್ತು ಉಚ್ಚ ನ್ಯಾಯಾಲಯದ ಎಲ್ಲ ನೇಮಕಾತಿಗಳೂ ಸಹ ಸರ್ವೋನ್ನತ ನ್ಯಾಯಾಲಯದ ಇಚ್ಛೆಯಂತೆಯೇ ನಡೆಯುವುದರಿಂದ ರಾಜ್ಯ ಉಚ್ಚ ನ್ಯಾಯಾಲಯಗಳಿಗೆ ಯಾವುದೇ ರೀತಿಯ ಸ್ವಾಯತ್ತತೆ ಇಲ್ಲದೇ ಹೋಗಿದೆ. ಎಲ್ಲಕ್ಕಿಂತ ಮಿಗಿಲಾಗಿ collegium ವ್ಯವಸ್ಥೆಯ ಮೂಲಕ ಅಳಿದುಳಿದ ಒಕ್ಕೂಟ ವ್ಯವಸ್ಥೆ ಸಂಪೂರ್ಣ ನಿರ್ನಾಮವಾಗಿದೆ.

**ಶಾಸನ ರಚನೆಯಲ್ಲೂ ಕೇಂದ್ರದ ಪ್ರಾಬಲ್ಯ**

ಶಾಸನ ರಚನೆಯ ಅಧಿಕಾರದಲ್ಲಿ ಮಾತ್ರ ಕೇಂದ್ರಕ್ಕೆ ಪ್ರತ್ಯೇಕ ಪಟ್ಟಿ, ರಾಜ್ಯಕ್ಕೆ ಪ್ರತ್ಯೇಕ ಪಟ್ಟಿ ಮತ್ತು ಕೇಂದ್ರ ಮತ್ತು ರಾಜ್ಯದ ಎರಡೂ ಅಧಿಕಾರ ರಚನೆಯನ್ನು ಮಾಡತಕ್ಕಂತಹ ಸಹವರ್ತಿ ಪಟ್ಟಿ ಒಕ್ಕೂಟ ವ್ಯವಸ್ಥೆಯ ಕುರುಹಾಗಿದ್ದರೂ ಕಾರ್ಯತಃ(functionally) ಕೇಂದ್ರ ಸರ್ಕಾರಕ್ಕೆ residuary ಅಧಿಕಾರ ಇರುವುದರಿಂದ ಶಾಸನ ರಚನೆಯ ಅಧಿಕಾರ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಕಡೆ ವಾಲಿದೆ. ಒಕ್ಕೂಟ ವ್ಯವಸ್ಥೆಗೆ ಹೊಡೆತ ಬಿದ್ದಿರುವುದಕ್ಕಿಂತ ಮುಖ್ಯವಾಗಿ ತುರ್ತು ಪರಿಸ್ಥಿಯ ಕಾಲದಲ್ಲಿ ೩೬೫ನೇ ಪರಿಚ್ಛೇದದ ಮೂಲಕ ಸರ್ವಾಧಿಕಾರವನ್ನು ಹೊಂದುವ ಅವಕಾಶ ಕೇಂದ್ರ ಸರ್ಕಾರಕ್ಕೆ ಗಣನೀಯವಾಗಿರುವುದು. ಇಂತಹ ಕಾಲದಲ್ಲಿ ರಾಜ್ಯ ವಿಧಾನ ಮಂಡಲ ಅಧಿಕಾರವನ್ನು ಸಹ ಸಂಸತ್ತು ಕಸಿದುಕೊಳ್ಳಬಹುದಾಗಿದೆ.

ಅದರಲ್ಲೂ ವಿಶೇಷವಾಗಿ ಆರ್ಥಿಕ ತುರ್ತು ಪರಿಸ್ಥಿತಿ ಘೋಷಣೆಯಾದಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಅಡಿಯಾಳಾಗಿ ಬದುಕಬೇಕಾದ ಅನಿವಾರ್ಯತೆ ಇದೆ. ಇಂತಹುದೇ ವಿಶೇಷ ಅಧಿಕಾರಗಳು ರಾಜ್ಯದ ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರವನ್ನು ಕಸಿದುಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿದೆ. ರಾಜ್ಯದಲ್ಲಿ ಸಂವಿಧಾನ ಕುಸಿದು ಬಿದ್ದಿದೆ ಎಂದು ಹೇಳಿದರೆ ಸಾಕು ರಾಜ್ಯ ಸರ್ಕಾರವನ್ನು ವಜಾ ಮಾಡಿ ಕೆಂದ್ರ ಸರ್ಕಾರದ ಅಧಿಕಾರ ಸ್ಥಾಪಿಸಬಹುದಾಗಿದೆ. ಕೇಂದ್ರ ಸರ್ಕಾರವನ್ನು ವಿರೋಧಿಸಿದರಂತೂ ರಾಜ್ಯಗಳ ಸರ್ವನಾಶಕ್ಕೆ ಎಡೆಮಾಡಿಕೊಟ್ಟಂತಾಗುತ್ತದೆ.

ರಾಷ್ಟ್ರಪತಿಗಳಿಗಂತೂ ರಾಜ್ಯಪಾಲರ ವರದಿಗೂ ಕಾಯಬೇಕು ಎಂದಿಲ್ಲ. ಸ್ವಯಂ ಪ್ರೇರಣೆಯಿಂದ ರಾಷ್ಟ್ರಪತಿ ಆಡಳಿತ ಹೇರಲು ವಿಪುಲ ಅವಕಾಶವಿದೆ. ಇಂತಹ ಸರ್ವಶಕ್ತ ಕೇಂದ್ರ ಸರ್ಕಾರದ ಆಡಳಿತ ಜಗತ್ತಿನ ಯಾವುದೇ ರಾಜ್ಯಾಂಗದಲ್ಲೂ ಕಂಡು ಬಂದಿಲ್ಲ.

**ಗಾಂಧೀಜಿಗೆ ತಿಲಾಂಜಲಿ, ಇಂಗ್ಲಿಷ್‌ನ ಅಟ್ಟಹಾಸ!**

ಗಾಂಧೀಜಿ ಕನಸಿದ್ದು ಗ್ರಾಮ ಸ್ವರಾಜ್ಯವನ್ನು. ಸಮಾಜವಾದಿ ಚಿಂತಕ ಡಾ.ರಾಮಮನೋಹರ ಲೋಹಿಯಾ ಪ್ರತಿಪಾದಿಸಿದ್ದು ಈ ಭಾವನೆಯಿಂದ ಸ್ಫೂರ್ತಿ ಪಡೆದ ಚತುಷ್ಕಂಭ ರಾಷ್ಟ್ರದ ಪರಿಕಲ್ಪನೆಯನ್ನ. ಕೇಂದ್ರ, ರಾಜ್ಯ, ಜಿಲ್ಲೆ ಮತ್ತು ಗ್ರಾಮ ಸರ್ಕಾರಗಳ ನಡುವೆ ಅಧಿಕಾರ ವಿಕೇಂದ್ರೀಕರಣದ ಪರಿಕಲ್ಪನೆ. ಆದರೆ ಇವಾವುವೂ, ಭಾರತದ ಸಂವಿಧಾನದ ಅಡಿಯಲ್ಲಿ ಅಸ್ತಿತ್ವಕ್ಕೆ ಬಂದಿಲ್ಲ. ಬದಲಾಗಿ, ಒಂದು ವಿಶಿಷ್ಟ ಕೇಂದ್ರ ಮತ್ತು ರಾಜ್ಯಗಳ ಸಮನ್ವಯತೆಯನ್ನು ಇಲ್ಲಿ ಸಾಧಿಸಲಾಗಿದೆ. ಇತ್ತೀಚೆಗೆ ಮಾತ್ರ ೭೩ ಮತ್ತು ೭೪ನೇ ಸಂವಿಧಾನ ತಿದ್ದುಪಡಿಗಳಲ್ಲಿ ವಿಕೇಂದ್ರೀಕರಣದ ಪರಿಕಲ್ಪನೆಗೆ ಸ್ವಲ್ಪ ಜೀವ ಕೊಟ್ಟು ಜಿಲ್ಲಾ ಮತ್ತು ಗ್ರಾಮ ಮಟ್ಟದಲ್ಲಿ ಪಂಚಾಯಿತಿಗಳನ್ನು ಮತ್ತು ನಗರಗಳಲ್ಲಿ ಕಾರ್ಪೋರೇಷನ್ ಅಥವಾ ಮುನಿಸಿಪಾಲಿಟಿಗಳನ್ನು ತನ್ನ ಶಿಶುಗಳಾಗಿ ಪರಿಗಣಿಸುವುದರ ಮೂಲಕ ಪ್ರಾತಿನಿಧಿಕ ಪ್ರಜಾತಂತ್ರಕ್ಕೆ ಸ್ವಲ್ಪ ಜೀವ ತುಂಬಲಾಗಿದೆ. ಆದರೆ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿರುವ ಅಧಿಕಾರವನ್ನು ಪರಿಗಣಿಸಿದರೆ ಯಾವುದೇ ಅರ್ಥಪೂರ್ಣ ವಿಕೇಂದ್ರೀಕರಣ ಮಾಡದೇ–ಜಿಲ್ಲೆ ಅಥವಾ ಪಟ್ಟಣಗಳ ಮಟ್ಟದಲ್ಲಿ ಸ್ವಾಯತ್ತ ಸಂಸ್ಥೆಗಳಾಗಿ ಆಡಳಿತ ನಡೆಸದೆ–ಈ ಘಟಕಗಳು ಕೇವಲ ಔಪಚಾರಿಕ ಸಂಸ್ಥೆಗಳಾಗಿ ಉಳಿದುಕೊಂಡಿವೆ. ಈ ಹಿನ್ನೆಲೆಯಲ್ಲಿ ಭಾರತದ ರಾಜಕೀಯ ವ್ಯವಸ್ಥೆಯನ್ನು ಒಕ್ಕೂಟ ವ್ಯವಸ್ಥೆ ಅಥವಾ ವಿಕೇಂದ್ರಿತ ವ್ಯವಸ್ಥೆ ಎಂದು ಹೇಳಲು ಬರುವುದೇ ಇಲ್ಲ.

ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲಕ ಒಕ್ಕೂಟ ವ್ಯವಸ್ಥೆಯ ಕನಸನ್ನು ಸಂವಿಧಾನದ ಪ್ರಾರಂಭ ದಿನಗಳಲ್ಲಿ ನಿರೀಕ್ಷಿಸಲಾಗಿತ್ತು. ಭಾಷೆಯೇ ರಾಜ್ಯದ ಅಸ್ತಿತ್ವದ ಆಧಾರವಾದ್ದರಿಂದ ರಾಜ್ಯಗಳೂ ಅಭಿವೃದ್ಧಿ ಹೊಂದುತ್ತವೆ, ಭಾರತೀಯ ಭಾಷೆಗಳು ಬಲಿಷ್ಟವಾಗುತ್ತವೆ ಎಂದು ಕನಸು ಕಾಣಲಾಗಿತ್ತು. ಆದರೆ, ಒಟ್ಟಾರೆ ಇರುವ ವ್ಯವಸ್ಥೆಯಲ್ಲಿ ರಾಜ್ಯಗಳ ಅಧಿಕಾರಗಳು ಸೀಮಿತವಾಗಿ, ಇಂದು ಪ್ರಾದೇಶಿಕ ಭಾಷೆಗಳೂ ಸಹ ಅವಸಾನದ ಅಂಚಿನಲ್ಲಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಇಂಗ್ಲೀಷ್ ಭಾಷೆಯ ನಿರಂತರ ಅಟ್ಟಹಾಸ, ಇಂಗ್ಲೀಷ್ ಮಾಧ್ಯಮದ ಪ್ರಭಾವ ಹಾಗೂ ಮಾತೃಭಾಷೆಗಳ ಸರ್ವನಾಶ, ಭಾರತದ ವಿಕೇಂದ್ರಿತ ವ್ಯವಸ್ಥೆಯ ಅಥವಾ ಒಕ್ಕೂಟ ರಚನೆಯ ಕನಸು ನುಚ್ಚುನೂರಾಗಿರುವುದರ ಸಂಕೇತವಾಗಿದೆ.

**ಪರಿಚ್ಛೇದ ೩೫೬: ಬಹಳ ಬಾರಿ ಕೆಟ್ಟದಕ್ಕೆ, ಒಮ್ಮೊಮ್ಮೆ ಒಳ್ಳೆಯದಕ್ಕೂ!**

ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರಪತಿ ಆಡಳಿತ ಹೇರಿ ರಾಜ್ಯ ಸರ್ಕಾರಗಳನ್ನು ವಜಾ ಮಾಡಿ ವಿಧಾನಸಭೆಯನ್ನು ವಿಸರ್ಜಿಸುವ ಅಧಿಕಾರ ಪರಿಚ್ಛೇದ ೩೫೬ರಲ್ಲಿ ಕೇಂದ್ರ ಸರ್ಕಾರಕ್ಕೆ ಕೊಡಲಾಗಿದೆ. ಈ ಅಧಿಕಾರವನ್ನು ಸಂವಿಧಾದನದಲ್ಲಿ ಅಡಕ ಮಾಡುವಾಗ ಬಾಬಾಸಾಹೇಬ್ ಅಂಬೇಡ್ಕರ್‌ರವರು ಈ ಅಧಿಕಾರಕ್ಕೆ ಯಾವುದೇ ಮಹತ್ವ ಕೊಡಬೇಕಾದ್ದಿಲ್ಲ, ಇದೊಂದು ಕೇವಲ ಔಪಚಾರಿಕ ಪರಿಚ್ಛೇದ ಎಂದು ಹೇಳಿದ್ದರು. ಆದರೆ, ಕಳೆದ ೬೪ ವರ್ಷಗಳಲ್ಲಿ ಈಗಾಗಲೇ ಎಷ್ಟು ಬಾರಿ ಪರಿಚ್ಛೇದವನ್ನು ಬಳಸಿದ್ದಾರೆ ಎಂದು ನೋಡಿದರೆ ಅದು ಕೇಂದ್ರ ಸರ್ಕಾರದ ಸರ್ವವ್ಯಾಪಿ ಅಧಿಕಾರವನ್ನು ಎತ್ತಿಹಿಡಿದು ಒಕ್ಕೂಟ ವ್ಯವಸ್ಥೆಯನ್ನು ಅಣಕ ಮಾಡಿದಂತೆ ಕಾಣುತ್ತಿದೆ. ಆದರೂ ಒಂದು ಅಪರೂಪದ ಸನ್ನಿವೇಶದಲ್ಲಿ ಅದರ ಸದುಪಯೋಗವನ್ನು ಸಹ ನೋಡಬಹುದಾಗಿದೆ.

೧೯೯೧ರಲ್ಲಿ ಆರೆಸ್ಸೆಸ್ ವಿಶ್ವ ಹಿಂದೂ ಪರಿಷತ್, ಬಜರಂಗ ದಳ, ಶಿವಸೇನೆ ಮುಂತಾದ ಬಿಜೆಪಿ ನೇತ್ರತ್ವದ ಸಂಘ ಪರಿವಾರದ ಸಂಘಟನೆಗಳು ಸೇರಿ ಅಯೋಧ್ಯೆಯಲ್ಲಿನ ಬಾಬ್ರಿ ಮಸೀದಿ ಉರುಳಿಸಿದಾಗ, ಇದು ಸಂವಿಧಾನದ ಧರ್ಮನಿರಪೇಕ್ಷತೆಯ ತತ್ವಕ್ಕೆ ವಿರುದ್ಧವಾದದ್ದು ಎಂಬ ಮುಖ್ಯ ಅಂಶದ ಆಧಾರದ ಮೇಲೆ ಆಗಿನ ರಾಷ್ಟ್ರಪತಿಗಳು ಬಿಜೆಪಿ ಅಧಿಕಾರದಲ್ಲಿದ್ದ ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಾಸ್ಥಾನ, ಹಿಮಾಚಲ ಪ್ರದೇಶಗಳ ಸರ್ಕಾರಗಳನ್ನು ವಜಾಗೊಳಿಸಿದರು. ಇದರ ವಿರುದ್ಧ ಹೂಡಲಾದ ಮೊಕದ್ದಮೆಯಲ್ಲಿ ೯ ಸದಸ್ಯರಿದ್ದ ಸರ್ವೋನ್ನತ ನ್ಯಾಯಾಲಯ, ಸಂವಿಧಾನಾತ್ಮಕ ಆಡಳಿತಕ್ಕೆ ಈ ರಾಜ್ಯಗಳಲ್ಲಿ ಧಕ್ಕೆಯಾಗಿದೆ ಎಂಬ ರಾಷ್ಟ್ರಪತಿಗಳ ಆಜ್ಞೆಯ ಹಿಂದಿದ್ದ ವಿವರಣೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಅದನ್ನು ಎತ್ತಿಹಿಡಿಯಿತು.

ಹೀಗೆ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ರಾಜ್ಯಸರ್ಕಾರಗಳು ನಡೆದುಕೊಂಡಾಗ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ಸಂವಿಧಾನವನ್ನು ಎತ್ತಿ ಹಿಡಿಯುವ ಪ್ರಮೇಯದಲ್ಲಿ ಕೇಂದ್ರಸರ್ಕಾರದ ಮಂತ್ರಿಗಳೇ ಧರ್ಮಾಂಧರಾಗಿ 'ಭಗವದ್ಗೀತೆ' ರಾಷ್ಟ್ರೀಯ ಗ್ರಂಥವೆಂದು ಜನತೆಯ ಮೇಲೆ ಹೇರಲು ಹೋದರೆ ಅದನ್ನು ನಿಯಂತ್ರಿಸುವವರ್‍ಯಾರು ಎನ್ನುವ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ಆ ಸನ್ನಿವೇಶದಲ್ಲಿ ಭಾರತದ ಸಂವಿಧಾನದ ಅಡಿಯಲ್ಲಿ ಇರುವ ಒಕ್ಕೂಟ ವ್ಯವಸ್ಥೆಯನ್ನು ಅವಲೋಕಿಸಿದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಇರತಕ್ಕಂತಹ ಅಸಮಾನತೆ ಮತ್ತು ತಾರತಮ್ಯಗಳು ಎದ್ದು ಕಾಣುತ್ತದೆ.

**ಸರ್ಕಾರಿಯಾ ಆಯೋಗ ಹೇಳಿದ್ದೇನು, ಆಗಿರುವುದೇನು?**

ಕೇಂದ್ರ ರಾಜ್ಯಗಳ ಸಂಬಂಧಗಳ ಸಲುವಾಗಿ ನ್ಯಾಯಮೂರ್ತಿ ಸರ್ಕಾರಿಯಾ ಆಯೋಗ ಬಹಳ ಗಂಭೀರವಾದಂತಹ ಅಧ್ಯಯನ ಮಾಡಿ ಉತ್ತಮ ಸಲಹೆಗಳನ್ನು ನೀಡಿತ್ತು. ಅಧಿಕಾರದ ನಿಜವಾದ ವಿಕೇಂದ್ರೀಕರಣದ ಮೂಲಕ ಸ್ವಾಯತ್ತ ಸಮಿತಿಗಳಿಗೆ ಅಧಿಕಾರ ಕೊಟ್ಟು ಯಾವುದೇ ಕೇಂದ್ರಾಪಗಾಮಿಯಾದ ಶಕ್ತಿಗಳ ಆತಂಕ ನಿವಾರಣೆ ಮಾಡಬಹುದು ಎಂದು ಹೇಳಿದ್ದು, ವಿಶೇಷವಾಗಿ ಅಂತಹ ವಿಕೇಂದ್ರೀಕರಣ ವ್ಯವಸ್ಥೆಯ ಮೂಲಕ ಜನಶಕ್ತಿಯ ಸಂಚಯನ, ಪ್ರಜಾತಂತ್ರದ ವಿಶಾಲ ಹರಡುವಿಕೆ, ಆಡಳಿತದ ದಕ್ಷತೆ, ಆರೋಗ್ಯ ಮತ್ತು ಸರ್ಕಾರ–ಸರ್ಕಾರಗಳ ನಡುವೆ ಒಂದು ಸ್ಥಿರ ಸಂಬಂಧದ ಪರಿಕಲ್ಪನೆ ಸಾಕ್ಷಾತ್ಕಾರವಾಗುತ್ತದೆ ಎಂದು ತಿಳಿಸಿತ್ತು. ಅತಿ ಕೇಂದ್ರೀಕರಣದಿಂದ ಕೇಂದ್ರದಲ್ಲಿ ಬ್ಲಡ್ ಪ್ರೆಷರ್, ರಾಜ್ಯದಲ್ಲಿ ಅನೀಮಿಯ ಕಾಣಿಸುತ್ತದೆ ಎಂದು ಎಚ್ಚರಿಕೆ ನೀಡಿತ್ತು. ಈ ಎಚ್ಚರಿಕೆ ಇಂದು ನಿಜವಾಗಿದೆ.

**(ಲೋಹಿಯಾ ಸಮಾಜವಾದಿ ತತ್ವಗಳ ಹಿನ್ನೆಲೆಯ ಪ್ರೊ. ರವಿವರ್ಮ ಕುಮಾರ್ ರೈತ, ದಲಿತ ಮತ್ತು ವಿಚಾರವಾದಿ ಆಂದೋಲನದೊಂದಿಗೆ ಗುರುತಿಸಿಕೊಂಡು ಬೆಳೆದ ಹಿರಿಯ ವಕೀಲರು. ಸದ್ಯಕ್ಕೆ ರಾಜ್ಯದ ಅಡ್ವೊಕೇಟ್ ಜನರಲ್)**

ಹೊಸ ಮನುಷ್ಯ/ ಫೆಬ್ರುವರಿ/೨೦೧೫ 

# ನಮ್ಮ ನ್ಯಾಯಾಂಗ ಸೋಲುತ್ತಿದೆಯೇ?: ಒಂದು ವಿಶ್ಲೇಷಣೆ

–ಬಾಪು ಹೆದ್ದೂರಶೆಟ್ಟಿ




**ಭಾರತದ ನ್ಯಾಯಾಂಗದ ವಿವಿಧ ಹಂತಗಳಲ್ಲಿ ವಿಚಾರಣೆಗಳನ್ನು ಎದುರಿಸುತ್ತಿರುವ ಯಾವ ಆರೋಪಿಯನ್ನಾದರೂ ಕೇಳಿ, ಅವರು ಹೇಳುವುದು: ನನಗೆ ನಮ್ಮ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆ ಇದ್ದು, ನನಗೆ ನ್ಯಾಯ ಸಿಗುವ ನಂಬಿಕೆ ಇದೆ. ಆದರೆ ಹಾಗೆ ಹೇಳುವ ಎಲ್ಲರಿಗೂ–ವಾದಿ, ಪ್ರತಿವಾದಿಗಳಿಬ್ಬರಿಗೂ–ನ್ಯಾಯ(ಅಂದರೆ ಜಯ) ದೊರಕಲು ಸಾಧ್ಯವಿಲ್ಲ ಎಂಬುದು ಬೇರೆ ವಿಷಯ. ಆದರೂ ಸಾಮಾನ್ಯ ಜನತೆ ನಮ್ಮ ಸಂವಿಧಾನದ ಮೂರು ಸ್ತಂಭಗಳಲ್ಲಿ ಅಷ್ಟಿಷ್ಟು ನಂಬಿಕೆ ಉಳಿಸಿಕೊಂಡಿರುವುದು ನ್ಯಾಯಾಂಗದಲ್ಲೇ. ಅದು ಕೊನೆಯ ದೂರು ವೇದಿಕೆ ಎಂಬುದೂ ಅದಕ್ಕೆ ಕಾರಣವಿರಬಹುದು. ಅದೇನೇ ಇದ್ದರೂ, ಜನತೆ ಮತ್ತು ಅವರ ಪ್ರಜಾತಂತ್ರ ನ್ಯಾಯಾಂಗದ ಮೇಲೆ ಇಷ್ಟು ನಂಬಿಕೆ ಇಡುವಷ್ಟು ಅದು ಇಂದು ಸುಭದ್ರ ಮತ್ತು ಸಮರ್ಥವಾಗಿದೆಯೇ? ಈ ಪ್ರಶ್ನೆಗೆ ಎದುರಾಗುವ ಮೊದಲ ಸಂಗತಿ ಎಂದರೆ ಇಂದು ನಮ್ಮ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಮೊಕದ್ದಮೆಗಳ ಸಂಖ್ಯೆ ಮೂರು ಕೋಟಿಯನ್ನೂ ಮೀರಿದ್ದು! ಇವುಗಳಲ್ಲಿ ಸರ್ವೋನ್ನತ ನ್ಯಾಯಾಲಯದಲ್ಲಿರುವ ಪ್ರಕರಣಗಳ ಸಂಖ್ಯೆಯೇ ೬೩ ಸಾವಿರಕ್ಕೂ ಹೆಚ್ಚು. ಉಚ್ಚ ನ್ಯಾಯಾಲಯಗಳಲ್ಲಿರುವ ಮೊಕದ್ದಮೆಗಳ ಸಂಖ್ಯೆ ೪೪ ಲಕ್ಷ. ಇನ್ನು ಎರಡನೆಯ ಸಂಗತಿ ನ್ಯಾಯಾಂಗದಲ್ಲಿನ ಭ್ರಷ್ಟಾಚಾರ. ಇದು ಹೆಚ್ಚು ಕಾಣುವುದು ಕೆಳ ಹಂತದ ನ್ಯಾಯಾಲಯಗಳಲ್ಲಾದರೂ, ಉನ್ನತ ಹಂತವೇನೂ ಇದಕ್ಕೆ ಹೊರತಾಗಿಲ್ಲ ಎಂಬುದು ಈಗಾಗಲೇ ಹಲವು ಸಂದರ್ಭಗಳಲ್ಲಿ ಸಾಬೀತಾಗಿದೆ.**

**ಮುಖ್ಯವಾಗಿ ಮೂರನೆಯದು, ಇತ್ತೀಚಿನ ಮೋದಿ ಸರ್ಕಾರ ಬಂದ ಮೇಲೆ ಎದ್ದು ಕಾಣತೊಡಗಿರುವಂತೆ ನ್ಯಾಯಾಂಗವು ರಾಜಕೀಯ ಒತ್ತಡ–ಆಮಿಷಗಳಿಂದ ಮುಕ್ತವಾಗಿಲ್ಲ ಎಂಬುದು. ಉದಾಹರಣೆಗೆ, ಇಶ್ರತ್ ಜಹಾನ್ ಹುಸಿ ಎನ್‌ಕೌಂಟರ್ ಮೊಕದ್ದಮೆಯಲ್ಲಿ ಆರೋಪಿಯಾಗಿದ್ದ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಅವರಿಗೆ ಜಾಮೀನು ನೀಡಿದ ಸರ್ವೋನ್ನತ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಸದಾಶಿವಂ ಅವರಿಗೆ ಅವರ ನಿವೃತ್ತಿಯಾದ ಕೂಡಲೇ ಕೇರಳ ರಾಜ್ಯದ ರಾಜ್ಯಪಾಲರ ಹುದ್ದೆ ನೀಡಿದ್ದು, ಇದೇ ಪ್ರಕರಣದಲ್ಲಿ ಷಾ ವಿರುದ್ಧ ವಾದ ಮಂಡಿಸಿದ್ದ ಗೋಪಾಲ ಸುಬ್ರಮಣ್ಯಂ ಅವರನ್ನು ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರನ್ನಾಗಿ ಮಾಡಬಹುದೆಂಬ ಉನ್ನತ ನ್ಯಾಯಾಂಗದ ಶಿಫಾರ್ಸನ್ನು ಸರ್ಕಾರ ತಿರಸ್ಕರಿಸಿದ್ದೂ ಮತ್ತೂ ಮುಖ್ಯವಾಗಿ ಈ ತಿರಸ್ಕಾರವನ್ನು ಉನ್ನತ ನ್ಯಾಯಾಂಗ ಪ್ರಶ್ನೆ ಇಲ್ಲದೆ ಒಪ್ಪಿಕೊಂಡದ್ದೂ ಹಾಗೂ ಇತ್ತೀಚೆಗೆ ಇದೇ ಪ್ರಕರಣದಲ್ಲಿ ಅಮಿತ್ ಶಾರಿಗೆ ಸಮನ್ಸ್ ಜಾರಿ ಮಾಡಿದ್ದ ವಿಶೇಷ ಸಿ.ಬಿ.ಐ. ನ್ಯಾಯಾಲಯದ ನ್ಯಾಯಾಧೀಶರನ್ನು ಸರ್ಕಾರ ವರ್ಗ ಮಾಡಿ, ತನಿಖಾಧಿಕಾರಿಯನ್ನೂ ಬದಲಿಸಿದ ಪರಿಣಾಮವಾಗಿ ಹೊಸದಾಗಿ ಬಂದ ನ್ಯಾಯಾಧೀಶರು ಮೊಕದ್ದಮೆಯನ್ನು ರಾಜಕೀಯ ಉದ್ದೇಶದ ಪ್ರಕರಣವೆಂದು ಸುಲಭವಾಗಿ ಶಾ ಅವರನ್ನು ಖುಲಾಸೆ ಮಾಡಿರುವುದೂ ಹಲವು ಅನುಮಾನ–ಪ್ರಶ್ನೆಗಳಿಗೆ ಎಡೆ ಮಾಡಿಕೊಟ್ಟಿದೆ.. ಇನ್ನು ಈ ಹಿಂದೆ ಮನಮೋಹನ ಸಿಂಗ್ ಅವರ ಗೌಹಾತಿ ನಿವಾಸಿತನವನ್ನು ಪ್ರಶ್ನಿಸಿ ಮತ್ತು ರಾಜ್ಯಸಭೆಯ ಸ್ವರೂಪವನ್ನೇ ಬದಲಿಸಲು ಕಾರಣವಾದ ಸಂವಿಧಾನ ತಿದ್ದುಪಡಿಯನ್ನು ಪ್ರಶ್ನಿಸಿದ ಮನವಿಗಳನ್ನು ತಳ್ಳಿಹಾಕಿದ ತೀರ್ಪುಗಳೂ ಚರ್ಚಾರ್ಹವೇ ಆಗಿದೆ ಎಂದೂ ಹೇಳಲಾಗುತ್ತದೆ.**

**ಈ ಎಲ್ಲ ಏರುಪೇರುಗಳಿಗೂ ನ್ಯಾಯಾಂಗವೊಂದೇ ಜವಾಬ್ದಾರವಾಗಿರಲಾರದು, ನಿಜ. ಆದರೆ ಸಂವಿಧಾನದ ಇತರ ಎರಡು ಸ್ತಂಭಗಳ ಅನುಸಂಧಾನದೊಂದಿಗೆ ಅದು ತನ್ನ ಜವಾಬ್ದಾರಿಯನ್ನು ನಿರ್ವಹಿಸಿದೆಯೇ ಎಂಬ ಪ್ರಶ್ನೆ ಇದ್ದೇ ಇದೆ. ಜೊತೆಗೆ ಅದರ ಇತ್ತೀಚಿನ ಕ್ರಿಯಾಶೀಲತೆ ಒಮ್ಮೊಮ್ಮೆ ಪ್ರಶ್ನಾರ್ಹ ಪರಿಣಾಮಗಳಿಗೂ ಕಾರಣವಾಗಿದೆ ಎಂದು ಕಾನೂನು ಪಂಡಿತರು ಹೇಳುವರು. ಮುಖ್ಯವಾಗಿ ಅದು ಸಂವಿಧಾನದಲ್ಲಿ ಅಡಕವಾಗಿರುವ ಜನಪರ ಚಿಂತನೆ, ಅಧಿಕಾರಗಳ ಪರಿಮಿತಿ ತತ್ವ ಇತ್ಯಾದಿ ಪ್ರಜಾತಾಂತ್ರಿಕ ಗಣರಾಜ್ಯದ ಲಕ್ಷಣಗಳನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿದೆಯೇ ಎಂಬ ಪ್ರಶ್ನೆಯನ್ನು ಕೇಳುವ ಕಾಲವೀಗ ಬಂದಿದೆ ಎನ್ನಿಸುತ್ತದೆ. ಅಂಥದೊಂದು ನಿಷ್ಠುರ ಪ್ರಯತ್ನ ಮಾಡುವ ಲೇಖನವಿದು**–ಸಂಪಾದಕ.

**ನ**ಮ್ಮ ಸಂವಿಧಾನ ಜಾರಿಗೆ ಬಂದು ೬೫ ವರ್ಷಗಳು ಕಳೆದಿವೆ. ಈ ವರ್ಷಗಳಲ್ಲಿ ದೇಶ ಜನತಾಂತ್ರಿಕ ಆಡಳಿತ ಪದ್ಧತಿಯಲ್ಲಿ ನಡೆಸಿದ ವೈಶಿಷ್ಟ್ಯಪೂರ್ಣವಾದ ಪ್ರಯೋಗಗಳಿಗೆ, ಅರ್ಥ ವ್ಯವಸ್ಥೆಯಲ್ಲಿ, ಸಾಮಾಜಿಕ ಸಂರಚನೆಯಲ್ಲಿ ಆದ ಬದಲಾವಣೆಗಳಿಗೆ ದೇಶದ ಸಂವಿಧಾನ ಇಂಬುಗೊಟ್ಟಿದೆ.

ಕಳೆದ ಶತಮಾನದಲ್ಲಿ ಭಾರತದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಆಂದೋಲನದಲ್ಲಿ 'ಭಾರತ ಬಿಟ್ಟು ತೊಲಗಿ' ಆಂದೋಲನ ಅತ್ಯಂತ ದೊಡ್ಡದು. ಅಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಂಗೀಕರಿಸಿದ 'ಭಾರತ ಬಿಟ್ಟು ತೊಲಗಿ' ನಿರ್ಣಯದಲ್ಲಿ, ಸ್ವಾತಂತ್ರ್ಯ ಪಡೆದ ನಂತರ ಭಾರತ ಒಂದು ಒಕ್ಕೂಟ ರಾಷ್ಟ್ರ ಆಗುವುದೆಂದೂ, ಅಲ್ಲಿ ಘಟಕ ರಾಜ್ಯಗಳಿಗೇ ಅತ್ಯಂತ ಹೆಚ್ಚಿನ ಸ್ವಾಯತ್ತತೆ ಇರುವುದೆಂದೂ, ಕೇಂದ್ರ ಸರಕಾರಕ್ಕೆ ಹಲವು ಅಧಿಕಾರಗಳನ್ನು ನಿರ್ದಿಷ್ಟಗೊಳಿಸಿದ ನಂತರ ಉಳಿಕೆ ಅಧಿಕಾರಗಳು ಘಟಕ ರಾಜ್ಯಗಳಿಗೇ ಸೇರಿರುತ್ತವೆ ಎಂದೂ ಹೇಳಿತ್ತು. ಆದರೆ ನಂತರ ಸಂವಿಧಾನ ಸಭೆ ಘಟಕ ರಾಜ್ಯಗಳಿಗೆ ನಿರ್ದಿಷ್ಟ ಅಧಿಕಾರಗಳನ್ನು ಕೊಟ್ಟು, ಉಳಿಕೆ ಅಧಿಕಾರಗಳನ್ನು ಕೇಂದ್ರ ಸರಕಾರಕ್ಕೆ ನೀಡುವ ಮೂಲಕ ಒಂದು ಬಲವಾದ ಕೇಂದ್ರವನ್ನು ನಿರ್ಮಿಸಬಯಸಿತ್ತು. ಇದಕ್ಕೆ ಬಹುಶಃ ಸಂವಿಧಾನ ರಚನೆಯ ಸಂದರ್ಭದಲ್ಲಿ ನಡೆದ ದೇಶದ ವಿಭಜನೆ ಹಾಗೂ ಅದರ ಪರಿಣಾಮವಾಗಿ ನಡೆದ ಮಾರಣಹೋಮಗಳೇ ಕಾರಣವಾಗಿರಬಹುದು. ಆದರೆ ಕಳೆದ ಆರು ದಶಕಗಳಲ್ಲಿ ಭಾರತದ ಜನತೆ ಪ್ರಾದೇಶಿಕ ರಾಜಕೀಯ ಪಕ್ಷಗಳನ್ನು ಬೆಳೆಸುವ ಮೂಲಕ, ಅವುಗಳನ್ನು ವಿವಿಧ ರಾಜ್ಯಗಳಲ್ಲಿ ಅಧಿಕಾರಕ್ಕೆ ತರುವ ಮೂಲಕ, ನಮ್ಮ ಸಂವಿಧಾನಕ್ಕೆ ನಿಜವಾದ ಒಕ್ಕೂಟ ರಾಷ್ಟ್ರದ ಸ್ವರೂಪವನ್ನು ಒದಗಿಸಿದೆ. ಆ ಮೂಲಕ 'ಭಾರತ ಬಿಟ್ಟು ತೊಲಗಿ' ನಿರ್ಣಯದ ಆಶಯಗಳನ್ನು ಸಾಕಾರಗೊಳಿಸಿದೆ. ಹಿಂದೆ ಪ್ರಧಾನಮಂತ್ರಿಗಳಾದವರು ರಾಜ್ಯಗಳ ಮುಖ್ಯಮಂತ್ರಿಗಳನ್ನು 'ನೇಮಕ' ಮಾಡುತ್ತಿದ್ದರು. ಇಂದು ಯಾರು ಪ್ರಧಾನಮಂತ್ರಿಗಳಾಗಬೇಕೆನ್ನುವುದನ್ನು ಮುಖ್ಯಮಂತ್ರಿಗಳು 'ನಿರ್ಧಾರ'ಮಾಡುವ ದಿನಗಳು ಬರುವಂತಾಗಿದೆ. ಕೇಂದ್ರದಲ್ಲಿ ಸರಕಾರ ರಚಿಸಿದ ಪಕ್ಷಕ್ಕಿಂತ ಹಲವು ಹನ್ನೆರಡು ಭಿನ್ನಭಿನ್ನ ಪಕ್ಷಗಳು ವಿವಿಧ ರಾಜ್ಯಗಳಲ್ಲಿ ಸರಕಾರ ರಚಿಸುವಂತೆ ಮಾಡುವ ಮೂಲಕ ಜನತೆ ಇನ್ನು ಮುಂದೆ ಯಾವ ಪ್ರಧಾನಿಯೂ 'ತುರ್ತು ಪರಿಸ್ಥಿತಿ'ಯನ್ನು ಹೇರಿ ಸರ್ವಾಧಿಕಾರಿಯಾಗದಂತೆ ಒಕ್ಕೂಟ ರಾಷ್ಟ್ರದ ಸ್ವರೂಪವನ್ನೂ, ಜನತಂತ್ರವನ್ನೂ ಇನ್ನಷ್ಟು ಗಟ್ಟಿಗೊಳಿಸಿದೆ.



ಜನತಂತ್ರವಿದ್ದಲ್ಲಿ ಕ್ಷಾಮಗಳು ತಲೆದೋರುವುದಿಲ್ಲ ಎಂದು ಅಮರ್ತ್ಯ ಸೇನ್ ಉದಾಹರಣೆಗಳನ್ನು ಕೊಡುವ ಮೂಲಕ ಹೇಳುತ್ತಾರೆ. ಆದುದರಿಂದ ಜನತಂತ್ರದಲ್ಲಿಯೇ ಜನತೆಯ ಹಿತ ಕಾಪಾಡಲಾಗುತ್ತದೆ ಎನ್ನುವುದು ನಿರ್ವಿವಾದ. ಜನತಂತ್ರಕ್ಕೆ, ಹಲವಾರು ಕೊರತೆಗಳಿದ್ದರೂ, ಪರ್ಯಾಯವಿಲ್ಲ. ವಿವಿಧ ಧರ್ಮಗಳು, ಜಾತಿಗಳು, ಭಾಷೆಗಳು, ಸಂಸ್ಕೃತಿಗಳು ಇರುವ ಈ ದೇಶದಲ್ಲಿ ಇಂದು ಜನತಂತ್ರ ಬೇರೂರಿದ್ದರೆ, ಗಟ್ಟಿಗೊಂಡಿದ್ದರೆ, ವಿಸ್ತ್ರತವಾಗಿದ್ದರೆ ಅದಕ್ಕೆ ಭಾರತದ ಜನರ ಜನತಾಂತ್ರಿಕ ಆಶೋತ್ತರಗಳೇ ಕಾರಣ. ಹಾಗೂ ಆ ಆಶೋತ್ತರಗಳಿಗೆ ಇಂಬುಗೊಡುತ್ತಿರುವುದೇ ನಮ್ಮ ಸಂವಿಧಾನ ಇಂದು ಯುರೋಪಿನಲ್ಲಿ 'ಯುರೋಪಿಯನ್ ಯುನಿಯನ್' ಎಂಬ ಹೆಸರಿನಲ್ಲಿ ನಡೆಯುತ್ತಿರುವ ಒಕ್ಕೂಟದ ಪ್ರಯೋಗವನ್ನು ನಮ್ಮ ಸಂವಿಧಾನ ೬೦ ವರ್ಷಗಳ ಹಿಂದೆಯೇ ಪ್ರಾರಂಭಿಸಿತ್ತು ಎನ್ನುವುದು ನಾವೆಲ್ಲ ಹೆಮ್ಮೆ ಪಡಬೇಕಾದ ಸಂಗತಿಯೇ ಹೌದು.

ಆದರೆ ಇನ್ನೂ ಒಂದು ವಿಷಯದಲ್ಲಿ ಸಂವಿಧಾನದಲ್ಲಿ ಕೊರತೆ ಇದೆ. ಜನತಾಂತ್ರಿಕ ವಿಕೇಂದ್ರೀಕರಣವನ್ನು ಸಾಧಿಸಲು ಸಂವಿಧಾನದಲ್ಲಿ ತಿದ್ದುಪಡಿಯನ್ನೇನೋ ಮಾಡಿದ್ದಾರೆ. ಆದರೆ ಪಂಚಾಯತಿ ರಾಜ್ ಸಂಸ್ಥೆಗಳು

ಮತ್ತು ನಗರ ಸಭೆಗಳು, ತಮ್ಮ ಅಸ್ತಿತ್ವ ಹಾಗೂ ಅಧಿಕಾರಗಳಿಗಾಗಿ ಆಯಾ ರಾಜ್ಯಗಳ ಸರಕಾರಗಳನ್ನು ಅವಲಂಬಿಸಬೇಕಾಗಿದೆ. ಇದನ್ನು ತಪ್ಪಿಸಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗಿರುವಂತೆ ಪಂಚಾಯತಿರಾಜ್ ಸಂಸ್ಥೆಗಳಿಗೆ ಹಾಗೂ ನಗರ ಸಭೆಗಳಿಗೂ ಸಂವಿಧಾನದಲ್ಲಿ ಸ್ಥಾನ ಕಲ್ಪಿಸಿದ್ದರೆ ಜನತಾಂತ್ರಿಕ ವಿಕೇಂದ್ರೀಕರಣ ಸಾರ್ಥಕವಾಗುತ್ತಿತ್ತು. ಇದಕ್ಕೆ ಸಮಾಜವಾದಿಗಳು ಸೇರಿದಂತೆ 'ಎಲ್ಲಾ ಜನತಂತ್ರವಾದಿಗಳು ಪ್ರಯತ್ನಿಸಬೇಕಿದೆ.

ಒಂದೆಡೆಗೆ ಜನತೆ ಇಂತಹ ಪ್ರಯೋಗಗಳ ಮೂಲಕ ಒಕ್ಕೂಟ ರಾಷ್ಟ್ರದ ಸ್ವರೂಪವನ್ನೂ, ಜನತಂತ್ರವನ್ನೂ ಗಟ್ಟಿಗೊಳಿಸುತ್ತ ಹೋಗುತ್ತಿದ್ದರೆ ಇನ್ನೊಂದೆಡೆಗೆ 'ನಮ್ಮ ಸಂವಿಧಾನ ಕಲ್ಪಿಸಿದ ವಿಸ್ತೃತವಾದ ನ್ಯಾಯಾಂಗ ಅತ್ಯಂತ ನಿರಾಶಾದಾಯಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಸ್ವಾತಂತ್ರ್ಯ ಬಂದ ಹೊಸದರಲ್ಲಿ ಒಂದೆಡೆ ಸರಕಾರ ಕಾನೂನುಗಳನ್ನು ರಚಿಸುವ ಮೂಲಕ ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಲು, ಗೇಣಿದಾರರಿಗೆ ರಕ್ಷಣೆ ನೀಡಲು ಪ್ರಯತ್ನಿಸುತ್ತಿದ್ದರೆ, ನಮ್ಮ ಸರ್ವೋಚ್ಚ ನ್ಯಾಯಾಲಯ ಈ ಕಾನೂನುಗಳನ್ನು ಸಂವಿಧಾನಬಾಹಿರ ಎಂದು ಘೋಷಿಸಿತ್ತು. ಇದಕ್ಕೆ ಉತ್ತರವಾಗಿ ಸಂಸತ್ತು ಸಂವಿಧಾನವನ್ನೇ ತಿದ್ದುಪಡಿ ಮಾಡಿ ಇಂತಹ ಕಾನೂನುಗಳನ್ನು ನ್ಯಾಯಾಂಗದ ವ್ಯಾಪ್ತಿಯಿಂದ ಹೊರಗೆ ಇಡಬೇಕಾಗಿ ಬಂದಿತ್ತು. ಜಮೀನುದಾರರಿಗೆ ಕೊಡಬೇಕಿದ್ದ ಪರಿಹಾರಧನದ ಅರ್ಥವ್ಯಾಪ್ತಿಯ ಬಗ್ಗೆ ಸಂಸತ್ತಿಗೂ ಸರ್ವೋಚ್ಚ ನ್ಯಾಯಾಲಯಕ್ಕೂ ತೀವ್ರ ಘರ್ಷಣೆಯೇ ಆಗಿತ್ತು. ಜಮೀನುದಾರರಿಂದ ಸರಕಾರ ಕಿತ್ತುಕೊಂಡ ಭೂಮಿಯ ಪರಿಹಾರಧನ ಎಂದರೆ ಆ ಭೂಮಿಗೆ ಮಾರುಕಟ್ಟೆಯಲ್ಲಿ ಬರುವ ಬೆಲೆ ಎಂದು ಸರ್ವೋಚ್ಚ ನ್ಯಾಯಾಲಯ ಜಮೀನುದಾರರ ಪರವಾಗಿ ನಿರ್ಣಯಗಳನ್ನು ನೀಡಿತ್ತು. ಬಾಡಿಗೆದಾರರನ್ನು ಮಾಲೀಕರು ಮನೆಯಿಂದ ಹೊರಹಾಕುವುದರಿಂದ ಅವರಿಗೆ ರಕ್ಷಣೆ ಕೊಡಲು ಕರ್ನಾಟಕದ ಬಾಡಿಗೆ ನಿಯಂತ್ರಣ ಕಾನೂನನ್ನು ರಚಿಸಲಾಗಿದ್ದರೆ, ನ್ಯಾಯಲಯಗಳು ಆ ಕಾನೂನನ್ನು, ಮಾಲೀಕರ ಮೇಲೆ ಹಲವು ನಿರ್ಬಂಧಗಳಿಗೆ ಒಳಪಟ್ಟು ಬಾಡಿಗೆದಾರರನ್ನು ಮನೆಯಿಂದ ಹೊರಹಾಕುವ ಅಧಿಕಾರವನ್ನು ಮಾಲೀಕರಿಗೆ ನೀಡಲಾಗಿದೆ ಎಂದು ಅರ್ಥೈಸುತ್ತಿವೆ ಎಂದು ಹೇಳಿ ನಾನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಲಯ ನಿಂದನೆ ಮೊಕದ್ದಮೆಯನ್ನೂ ಎದುರಿಸಿದ್ದೇನೆ.

ಮೊದಮೊದಲಿಗೆ ವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ನಿರ್ಣಯಗಳನ್ನು ನೀಡುತ್ತಿದ್ದ ಸರ್ವೋಚ್ಚ ನ್ಯಾಯಾಲಯ, ಭಾರತದ ಜನರಿಗೆ ನ್ಯಾಯಾಂಗದ ಅತ್ಯಂತ ತುರ್ತಿನ ಆವಶ್ಯಕತೆ ಇದ್ದಾಗಲೇ ವ್ಯಕ್ತಿ ಸ್ವಾತಂತ್ರ್ಯವನ್ನು ಹೊಸಕಿ ಹಾಕುವ ತುರ್ತು ಪರಿಸ್ಥಿತಿಯನ್ನು ಎತ್ತಿ ಹಿಡಿದು, ಅಂಥ ಸಂದರ್ಭದಲ್ಲಿ ಭಾರತದ ನಾಗರಿಕರಿಗೆ ಮೂಲಭೂತ ಹಕ್ಕುಗಳೇ ಇರುವುದಿಲ್ಲವಷ್ಟೇ ಅಲ್ಲ, ಬದುಕುವ ಹಕ್ಕೂ ಇಲ್ಲ ಎನ್ನುವಷ್ಟರ ಮಟ್ಟಿಗೆ ಸಂವಿಧಾನ ದ್ರೋಹ ಮಾಡಿತ್ತು. ತಮ್ಮ ಪ್ರಕರಣಗಳ ವಿಚಾರಣೆಯಾಗದೇ ಲಕ್ಷಾಂತರ ಅಪರಾಧಿಗಳು, ತಾವು ಅಪರಾಧ ಎಸಗಿರುವುದಾಗಿ ರುಜುವಾತಾದಾಗ ತಾವು ಅನುಭವಿಸಬೇಕಿದ್ದ ಪ್ರಮಾಣದ ಸಮಯಕ್ಕಿಂತ ಹೆಚ್ಚು ಸಮಯವನ್ನು ಕಾರಾಗೃಹಗಳಲ್ಲಿ ಕಳೆಯಬೇಕಾಗಿ ಬರುತ್ತಿದ್ದರೂ, ಲಕ್ಷಾಂತರ ನಾಗರಿಕ ಪ್ರಕರಣಗಳು ದಶಕ ದಶಕಗಳಿಂದ ನ್ಯಾಯಾಲಯಗಳಲ್ಲಿ ನಿರ್ಣಯವಾಗದೇ ಕೊಳೆಯುತ್ತಿದ್ದರೂ, ನಮ್ಮ ನ್ಯಾಯಾಂಗ ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯಗಳು ಎಂಬ ಹೆಸರಿನಲ್ಲಿ ಅನಾವಶ್ಯಕವಾಗಿ ಕಾರ್ಯಾಂಗದ ಕೆಲಸದಲ್ಲಿ ಕೈಹಾಕುತ್ತಿದೆ. ಒಂದು ಸಲವಂತೂ ಒಂದು ವಿಧಾನ ಸಭೆಯಲ್ಲಿ ಅವಿಶ್ವಾಸ ನಿರ್ಣಯದ ಮೇಲೆ ನಡೆಯಬೇಕಿರುವ ಚರ್ಚೆಯನ್ನು ಚಿತ್ರೀಕರಿಸಬೇಕೆಂದು ಹೇಳುವ ಮೂಲಕ ಅದು ಶಾಸಕಾಂಗದ ಕೆಲಸದಲ್ಲಿಯೂ ಕೈಹಾಕಿತ್ತು. ಕಾರ್ಯಾಂಗ ತನ್ನ ಕರ್ತವ್ಯವನ್ನು ನಿಭಾಯಿಸುವುದರಲ್ಲಿ ಎಡವುತ್ತಿದೆ ಎನ್ನುವುದು ಇದಕ್ಕೆಲ್ಲ ನ್ಯಾಯಾಂಗ ಕೊಡುತ್ತಿರುವ ಕಾರಣ. ಹಾಗಾದರೆ ನ್ಯಾಯಾಂಗ ಎಡವಿದಲ್ಲಿ ಕಾರ್ಯಾಂಗ ನ್ಯಾಯಾಂಗದ ಕೆಲಸದಲ್ಲಿ ಕೈಹಾಕಬಹುದೇ?

ದೇಶದ ಸಂವಿಧಾನಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಕೈಗೊಂಡ ಅತ್ಯಂತ ವಿವಾದಾಸ್ಪದ ತೀರ್ಮಾನವೆಂದರೆ, ಸಂವಿಧಾನದ ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಹೇಳುತ್ತಲೂ, ಸಂವಿಧಾನವನ್ನು ತಿದ್ದುಪಡಿ ಮಾಡುವ ಅಧಿಕಾರ ತನಗೆ ಇಲ್ಲದಿದ್ದರೂ, ಸಂವಿಧಾನದಲ್ಲಿ ಅಪರೋಕ್ಷವಾಗಿ ತಿದ್ದುಪಡಿ ಮಾಡಿದ್ದು. ಇಬ್ಬರು ಜಮೀನುದಾರರು ತಮ್ಮ ಜಮೀನನ್ನು ಕಿತ್ತುಕೊಳ್ಳಲು ಸರಕಾರಕ್ಕೆ ಅಧಿಕಾರ ಇಲ್ಲ ಎಂದು ಮೊಕದ್ದಮೆ ಹೂಡಿದ ಪ್ರಕರಣದಲ್ಲಿ, ಆಸ್ತಿಯ ಹಕ್ಕು ಒಂದು ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ಇರುವಾಗ, ಮೂಲಭೂತ ಹಕ್ಕುಗಳಿಗೆ ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿತ್ತು. ಅಂದರೆ ಆಸ್ತಿಯ ಹಕ್ಕನ್ನು ತಿದ್ದುಪಡಿ ಮಾಡಲಾಗದು ಎನ್ನುವುದೇ ಇದರ ಅರ್ಥವಾಗಿತ್ತು. ಇದು ಸರ್ವೋಚ್ಚ ನ್ಯಾಯಾಲಯ, ತನಗೆ ಆ ಅಧಿಕಾರವಿಲ್ಲದಿದ್ದರೂ, ಸಂವಿಧಾನಕ್ಕೆ ಮಾಡುತ್ತಿರುವ ತಿದ್ದುಪಡಿ ಎಂದು ಹೇಳಿ, ಅದರ ಈ ತೀರ್ಪನ್ನು ಅನೂರ್ಜಿತಗೊಳಿಸಲು, ಪ್ರಜಾ ಸಮಾಜವಾದಿ ಪಕ್ಷದ ಸಾಂಸದ ನಾಥ ಪೈ ಸಂವಿಧಾನಕ್ಕೆ ವೈಯಕ್ತಿಕ ತಿದ್ದುಪಡಿಯೊಂದನ್ನು ಸಂಸತ್ತಿನಲ್ಲಿ ಮಂಡಿಸಬೇಕಾಗಿ ಬಂದಿತ್ತು. ನಂತರ ಇದೇ ಆಶಯದ ತಿದ್ದುಪಡಿಯನ್ನು ಸರಕಾರವೇ ಮಾಡಿ ಮೂಲಭೂತ ಹಕ್ಕುಗಳಲ್ಲಿ ತಿದ್ದುಪಡಿ ಮಾಡುವ ಅಧಿಕಾರವನ್ನು ಮರಳಿ ಸಂಸತ್ತಿಗೆ ದೊರಕಿಸಿಕೊಟ್ಟಿತು. ನಂತರ ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ಕಿತ್ತುಹಾಕಬೇಕೆಂದು ಸಮಾಜವಾದಿ ಸಾಂಸದ ಮಧುದಂಡವತೆಯವರು ಸಂವಿಧಾನಕ್ಕೆ ವೈಯಕ್ತಿಕ ತಿದ್ದುಪಡಿಯನ್ನು ಮಂಡಿಸಿದ್ದರು ಹಾಗೂ ತದನಂತರ ಮತ್ತೆ ಸರಕಾರವೇ ಈ ಬಗ್ಗೆ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ಕಿತ್ತು ಹಾಕಿತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ದೇಶದಲ್ಲಿ ಮಾಡಬೇಕಾಗಿರುವ ಆರ್ಥಿಕ ಬದಲಾವಣೆಗಳಿಗೆ ಇದು ಎಷ್ಟು ಮಹತ್ವದ್ದು ಎಂದು ಬೇರೆ ಹೇಳಬೇಕಿಲ್ಲ.

ಹೀಗೆಯೇ ಇನ್ನೊಂದು ವಿಷಯದಲ್ಲಿಯೂ ಸರ್ವೋಚ್ಚ ನ್ಯಾಯಾಲಯ ನಮ್ಮ ಸಂವಿಧಾನಕ್ಕೆ ಅಪರೋಕ್ಷವಾಗಿ ತಿದ್ದುಪಡಿ ಮಾಡಿ ತನಗೆ ಇಲ್ಲದಿದ್ದ ಅಧಿಕಾರವನ್ನು ಕಾರ್ಯಾಂಗದಿಂದ, ನ್ಯಾಯಾಂಗದ ಸ್ವಾತಂತ್ರ್ಯದ ಹೆಸರಿನಲ್ಲಿ ಕಿತ್ತುಕೊಂಡಿದೆ. ಸಂವಿಧಾನ ಜಾರಿಯಾದಂದಿನಿಂದ ಮೂವತ್ತು ವರ್ಷಗಳವರೆಗೆ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರ ಕಾರ್ಯಾಂಗಕ್ಕಿತ್ತು. ರಾಷ್ಟ್ರಪತಿಗಳು ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುತ್ತಿದ್ದರು. ಆದರೆ ಅವರು ಮಂತ್ರಿಮಂಡಲದ ಸಲಹೆಯ ಮೇರೆಗೆ ಕೆಲಸ ಮಾಡಬೇಕಾಗಿದ್ದುದರಿಂದ ಕಾರ್ಯಾಂಗವೇ ಈ ನೇಮಕಗಳನ್ನು ಮಾಡುತ್ತಿತ್ತು ಎಂದು ಹೇಳಬಹುದು. ಆದರೆ ೧೯೮೨, ೧೯೯೩ ಹಾಗೂ ೧೯೯೮ರಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ಮೂರು ತೀರ್ಪುಗಳ ಮೂಲಕ ನ್ಯಾಯಾಂಗ ಈ ಅಧಿಕಾರವನ್ನು ಕಾರ್ಯಾಂಗದಿಂದ ಕಿತ್ತುಕೊಂಡು ತಾನೇ ವಹಿಸಿಕೊಂಡಿತು. ಇದಕ್ಕಾಗಿ ಅದು ಸಂವಿಧಾನವನ್ನು ತನ್ನದೇ ರೀತಿಯಲ್ಲಿ ಅರ್ಥೈಸಿತು. ಈ ಪ್ರಕ್ರಿಯೆಯಲ್ಲಿ ರಾಷ್ಟ್ರಪತಿಗಳು ಹಲವು ನ್ಯಾಯಾಧೀಶರ ಸಲಹೆಯನ್ನು ಪಡೆಯ'ಬಹುದು' ಎಂದಿದ್ದ ಸಂವಿಧಾನದ ಆಶಯವನ್ನು 'ಪಡೆಯುವುದು ಕಡ್ಡಾಯ' ಎಂದು ಅರ್ಥೈಸಿ, ಅಂತಹ ಸಲಹೆ ಬರಿ ಸಲಹೆಯಲ್ಲ, ಅದು ರಾಷ್ಟ್ರಪತಿಗಳ ಮೇಲೆ 'ಬಂಧನಕಾರಿ' ಎಂದೂ ಅರ್ಥೈಸಿತು. ಈ ಬದಲಾವಣೆಯಿಂದಾಗಿ ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನೇಮಕ ಮಾಡುವ ಅಧಿಕಾರವನ್ನು ತಾನೇ ವಹಿಸಿಕೊಂಡಿತು. ಇದರಿಂದಾಗಿ ನ್ಯಾಯಾಂಗ ಸ್ವತಂತ್ರವಾಗುವುದು ಹಾಗಿರಲಿ, ಈಗ ಅಲ್ಲಿ–ಉನ್ನತ ಹಂತದಲ್ಲಿ ನ್ಯಾಯಾಧೀಶರೇ ಹೇಳಿದಂತೆ– ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮೊದಲಾದವುಗಳು ಗಣನೀಯ ಪ್ರಮಾಣದಲ್ಲಿ ಕಾಣಿಸಿಕೊಂಡಿವೆ. ಸಂವಿಧಾನ ತನಗೆ ನೀಡಿದ ಜವಾಬ್ದಾರಿಯನ್ನು ನ್ಯಾಯಾಂಗ ಸಂವಿಧಾನದ ಚೌಕಟ್ಟಿನೊಳಗೇ ನಿರ್ವಹಿಸುವುದು ದೇಶದ ಹಾಗೂ ಜನರ ಹಿತದೃಷ್ಟಿಯಿಂದ ಒಳ್ಳೆಯದು.

ನಮ್ಮ ದೇಶದಲ್ಲಿ ನ್ಯಾಯಾಂಗ ಸೋಲುತ್ತಿದೆ ಎನ್ನುವುದಕ್ಕೆ ಅದು ಇತ್ತೀಚೆಗೆ ಪ್ರಾರಂಭಿಸಿರುವ 'ಲೋಕ ಅದಾಲತ್'ಗಳೇ ಸಾಕ್ಷಿ. ಒಂದು ರೀತಿ ನ್ಯಾಯಾಂಗ ತನ್ನ ಸೋಲನ್ನು ಒಪ್ಪಿಕೊಳ್ಳುತ್ತಲೂ, ಅದು ತನ್ನ ಗೆಲುವು ಎಂದೇ ಸಾಧಿಸುತ್ತಿದೆ. ಉದಾಹರಣೆಗೆ, ನ್ಯಾಯಾಂಗ ಯೋಗ್ಯ ಸಮಯದಲ್ಲಿ ತೀರ್ಪು ಕೊಡುವುದು ಸಾಧ್ಯವಾಗದೇ ಇನ್ನೇನು ನ್ಯಾಯಾಂಗ ಕುಸಿದು ಬೀಳುತ್ತದೆ ಎನ್ನುವಾಗ, ಅದು ಲೋಕ ಅದಾಲತ್ ಎಂಬ ಪ್ರಹಸನಗಳನ್ನು ಪ್ರಾರಂಭಿಸಿದೆ. ಲೋಕ ಅದಾಲತ್‌ನಲ್ಲಿ ಒಂದೇ ದಿನದಲ್ಲಿ ಲಕ್ಷಾಂತರ ಪ್ರಕರಣಗಳನ್ನು ಬಗೆಹರಿಸಿರುವುದಾಗಿ ಕೊಚ್ಚಿಕೊಳ್ಳುತ್ತಿದೆ. ಜನರ ನಡುವೆ ಭಿನ್ನಾಭಿಪ್ರಾಯಗಳು ಉಂಟಾದಾಗ ಜನ ಮೊದಲಿಗೆ ಪರಸ್ಪರ ಚರ್ಚೆಯ ಮೂಲಕ ಅವುಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅದು ಸಾಧ್ಯವಾಗದೇ ಇದ್ದಾಗ ಮಾತ್ರ ಅವರು ನ್ಯಾಯಾಲಯಗಳ ಮೊರೆ ಹೋಗುತ್ತಾರೆ. ನ್ಯಾಯಾಲಯದ ವಿಳಂಬದಿಂದ ಬೇಸತ್ತು ಅವರು ಪರಸ್ಪರ ರಾಜಿಯಾಗಲು ಸಿದ್ಧರಾದಾಗ ಅವರನ್ನು ಲೋಕ ಅದಾಲತ್ ಮುಂದೆ ಕರೆಸಿ, ರಾಜಿ ಮಾಡಿಸಿ, ಪ್ರಕರಣ ವಿಲೇವಾರಿಯಾಗಿದೆ ಎಂದು ಹೇಳಲಾಗುತ್ತದೆ. ರಾಜಿ ಎಂದಾಗ ಎರಡೂ ಪಕ್ಷಗಳಲ್ಲಿ ಇಬ್ಬರಿಗೂ ತಮಗೆ ನ್ಯಾಯ ದೊರೆಯಲಿಲ್ಲ ಎಂಬ ಭಾವನೆಯೇ ಇರುತ್ತದೆ.

ಹೊಸ ಮನುಷ್ಯ/ ಫೆಬ್ರುವರಿ/೨೦೧೫ 

ಫ್ರೆಂಚ್ ಕ್ರಾಂತಿಯಿಂದ ಮೊದಲು ಮಾಡಿ ಇಡೀ ಜಗತ್ತಿನಲ್ಲಿ ಸಮಾಜವಾದದ ಮೂಲತತ್ವಗಳೆಂದು ಒಪ್ಪಿಕೊಳ್ಳಲಾಗಿರುವ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರ ಭಾವಗಳನ್ನು ಸಂವಿಧಾನದ ಪೀಠಿಕಾ ಭಾಗದಲ್ಲಿ ಅಳವಡಿಸಲಾಗಿದೆ. ಇದರ ಶ್ರೇಯ ಅಂಬೇಡ್ಕರ್ ಅವರಿಗೆ ಸಲ್ಲಬೇಕು. ಸಂವಿಧಾನ ರಚನಾ ಸಭೆ ವಯಸ್ಕ ಮತದಾನ ಪದ್ಧತಿಯ ಮೇರೆಗೆ ಆಯ್ಕೆಯಾಗಿಲ್ಲ ಎಂಬ ಕಾರಣದಿಂದ ಸಮಾಜವಾದಿಗಳು ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ ಈ ನಿರ್ಣಯವನ್ನು ತೆಗೆದುಕೊಳ್ಳುವ ಮೊದಲೇ ಸಮಾಜವಾದಿಗಳಾದ ಶಾರಂಗಧರ ದಾಸ ಹಾಗೂ ದಾಮೋದರ ಸ್ವರೂಪ ಸೇಠರು ಸಂವಿಧಾನ ರಚನಾ ಸಭೆಗೆ ಆಯ್ಕೆಯಾಗಿದ್ದರಿಂದ ಹಾಗೂ ಮೀನೂ ಮಸಾನಿಯವರು ನಾಮನಿರ್ದೇಶಿತರಾಗಿದ್ದರಿಂದ ಇಷ್ಟು ಸಮಾಜವಾದಿಗಳು ಮಾತ್ರ ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಂಡರು. ಸಭೆಯ ಇನ್ನೊಬ್ಬ ಸದಸ್ಯರಾಗಿದ್ದ ಹರಿ ವಿಷ್ಣು ಕಾಮತರು ಆಗ ಇನ್ನೂ ಸಮಾಜವಾದಿ ಪಕ್ಷದ ಸದಸ್ಯರಾಗಿರಲಿಲ್ಲ. ತಮ್ಮ ಈ ಮಡಿವಂತಿಕೆಯನ್ನು ಬಿಟ್ಟು ಸಮಾಜವಾದಿಗಳೂ ಸಂವಿಧಾನ ರಚನಾ ಸಭೆಯಲ್ಲಿ ಪಾಲ್ಗೊಂಡಿದ್ದರೆ, ಜನತಾಂತ್ರಿಕ ವಿಕೇಂದ್ರೀಕರಣವನ್ನು, ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಸಾಧಿಸಲು ಸಂವಿಧಾನದಲ್ಲಿ ಇನ್ನೂ ಹಲವಾರು ವಿಧಾನಗಳನ್ನು ಅಳವಡಿಸಬಹುದಿತ್ತು.

**(ಬಾಪು ಹೆದ್ದೂರಶೆಟ್ಟಿಯವರು ಹಿರಿಯ ಸಮಾಜವಾದಿ ಮತ್ತು ಹಿರಿಯ ವಕೀಲರು. ಅವರು ಸಮಾಜವಾದ ಕುರಿತಂತೆ ಅನೇಕ ಪುಸ್ತಕಗಳನ್ನು ಬರೆದಿದ್ದು ಯುವಜನರಿಗಾಗಿ ಸಮಾಜವಾದಿ ಶಿಬಿರಗಳನ್ನೂ ನಡೆಸುವರು)**

---

# ಜನತೆಯ ಭರವಸೆಯ ಬೆಳಕಾಗಿ ಉಳಿದಿರುವ ನಮ್ಮ ನ್ಯಾಯಾಂಗ

**–ಪ್ರೊ.ಸಿ.ಕೆ.ಎನ್. ರಾಜ**




ಏಳುನೂರು ವರ್ಷಗಳ ಮುಸ್ಲಿಮರ ಆಡಳಿತ, ಮುನ್ನೂರು ವರ್ಷಗಳ ಆಂಗ್ಲರ ಆಡಳಿತಕ್ಕೆ ಸಿಲುಕಿ ತತ್ತರಿಸಿದ ಭಾರತ, ಸ್ವಾತಂತ್ರ್ಯ ಪ್ರಾಪ್ತಿಯಾದ ಹೊಸ್ತಿಲಲ್ಲೇ ತನ್ನದೇ ಆದ ಪ್ರಜಾಸತ್ತಾತ್ಮಕ ಸಂವಿಧಾನವೊಂದನ್ನು ರೂಪಿಸಿಕೊಂಡದ್ದೇ ಒಂದು ಐತಿಹಾಸಿಕ ಪವಾಡವೆಂದು ಹೇಳಬೇಕು. ಕೇವಲ ಅರವತ್ನಾಲ್ಕು ವರ್ಷಗಳಲ್ಲಿ ಸಾಕಷ್ಟು ತೃಪ್ತಿಕರವಾಗಿ ಸಂವಿಧಾನಬದ್ಧ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿರುವುದು ನಿಜಕ್ಕೂ ಪ್ರಶಂಸನೀಯ! ಇಂಗ್ಲೆಂಡ್, ಫ್ರಾನ್ಸ್ ಹಾಗೂ ಅಮೇರಿಕಾ ಸಂಯುಕ್ತ ಸಂಸ್ಥಾನಗಳು ತಮ್ಮ ಸಾಂವಿಧಾನಿಕ ಜೀವನದ ಅರವತ್ನಾಲ್ಕನೆಯ ವರ್ಷದಲ್ಲಿ ಭಾರತದಷ್ಟು ಯಶಸ್ವೀ ಸಾಧನೆಯನ್ನು ಖಂಡಿತ ಮಾಡಿರಲಿಲ್ಲ. ಭಾರತದ ನ್ಯಾಯಾಂಗ ವ್ಯವಸ್ಥೆಯ ಸಾಧನೆಯೂ ಇದಕ್ಕೆ ಹೊರತಾಗಿಲ್ಲ. ಕೇವಲ ನೂರುವರ್ಷಗಳ ಆಯಸ್ಸಿಗೆ ಸೀಮಿತಗೊಂಡಿರುವ ಮಾನವನ ಜೀವನದಲ್ಲಿ ಅರವತ್ನಾಲ್ಕು ವರ್ಷಗಳು ಪ್ರಬುದ್ಧತೆಯನ್ನು ಸೂಚಿಸುತ್ತವೆ. ಆದರೆ ಒಂದು ರಾಷ್ಟ್ರದ ಜೀವನದಲ್ಲಿ ಹಾಗಲ್ಲ. ಅರವತ್ತು ವರ್ಷಗಳೆಂದರೆ ಅದನ್ನು ಬಾಲ್ಯಾವಸ್ಥೆಯೆಂದೇ ಪರಿಗಣಿಸಬೇಕು. ಸಹಸ್ರಾರು ಭಾಷೆಗಳು, ನೂರಾರು ಮತಗಳು, ಸಾವಿರಾರು ಜಾತಿಗಳು, ನೂರಾರು ಪಂಗಡಗಳು ಹಾಗೂ ಅಷ್ಟೇ ಸಂಖ್ಯೆಯ ಸಮಸ್ಯೆಗಳು (ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ) ಇರುವಂತಹ ನಮ್ಮ ಭಾರತದ ಪರಿಸ್ಥಿತಿಯಲ್ಲಿ ನ್ಯಾಯಾಂಗ ವ್ಯವಸ್ಥೆಯ ಕಾರ್ಯನಿರ್ವಹಣೆ ಸಾಕಷ್ಟು ಯಶಸ್ವಿಯಾಗಿದೆಯೆಂದೇ ಹೇಳಬೇಕು. ಹಾಗೆಂದ ಮಾತ್ರಕ್ಕೇ ನ್ಯಾಯಾಂಗ ವ್ಯವಸ್ಥೆಯಲ್ಲಿ ದೋಷಗಳೇ ಇಲ್ಲವೆಂದಲ್ಲ. ನ್ಯಾಯ ನಿರ್ವಹಣೆಯಲ್ಲಿ ವಿಳಂಬ, ನ್ಯಾಯಾಂಗದಲ್ಲಿ ಇತ್ತೀಚೆಗೆ ತಲೆಹಾಕುತ್ತಿರುವ ಭ್ರಷ್ಟಾಚಾರ ಇತ್ಯಾದಿ ಸಮಸ್ಯೆಗಳನ್ನು ನಾವು ಪರಿಹರಿಸಬೇಕಾಗಿದೆ. ಅದನ್ನು ನಾವು ಖಂಡಿತ ಪರಿಹರಿಸುತ್ತೇವೆ.

ಮಧ್ಯಯುಗದ ಊಳಿಗಮಾನ್ಯ ಮನೋಭಾವದಿಂದ ಹೊರಬಂದು ಪ್ರಜಾಸತ್ತಾತ್ಮಕ ಮನೋಭಾವವನ್ನು ತಳೆಯುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕು. ಇನ್ನೂ ಅನೇಕ ತಪ್ಪು ಹೆಜ್ಜೆಗಳನ್ನು ಇಟ್ಟ ನಂತರವೇ ಪ್ರಬುದ್ಧತೆ ಮೂಡಲು ಸಾಧ್ಯ. ಕೇವಲ ಅರವತ್ನಾಲ್ಕು ವರ್ಷಗಳಲ್ಲಿ ಭಾರತದ ನ್ಯಾಯಾಂಗ ಪ್ರಶಂಸನೀಯವಾಗಿಯೇ ಕಾರ್ಯನಿರ್ವಹಿಸಿದೆಯೆಂದು ಖಚಿತವಾಗಿ ಹೇಳಲು ಸಾಕಷ್ಟು ಸಾಕ್ಷ್ಯಾಧಾರಗಳಿವೆ.

**<u>ಸಾರ್ವಜನಿಕ, ಕೌಟುಂಬಿಕ ಮತ್ತು ವೈಯಕ್ತಿಕ ಮಹತ್ವದ ತೀರ್ಪುಗಳು</u>**

ಈ ವಿಷಯದಲ್ಲಿ ಭಾರತೀಯ ನ್ಯಾಯಾಂಗ ವ್ಯವಸ್ಥೆ ತುಂಬಾ ತೃಪ್ತಿಕರವಾಗಿಯೇ ಕಾರ್ಯನಿರ್ವಹಣೆ ಮಾಡಿದೆಯೆಂದು ಹೇಳಬಹುದು. ಭೂ ಸುಧಾರಣಾ ಕಾಯಿದೆಗಳಿಗೆ ವಿಶ್ಲೇಷಣೆ ನೀಡುವಾಗ 'ಸಾರ್ವಜನಿಕ ಉದ್ದೇಶ'ದ ಮಹತ್ವದ ಆಧಾರದ ಮೇಲೆ ಭಾರತದ ವರಿಷ್ಠ ನ್ಯಾಯಾಲಯ ನೀಡಿದ ಮಹತ್ವದ ತೀರ್ಪುಗಳಲ್ಲಿ ನಾವು ಗೋಲಕನಾಥ್ ಹಾಗೂ ಕೇಶವಾನಂದ ಭಾರತಿ ಮೊಕದ್ದಮೆಗಳನ್ನು ಇಲ್ಲಿ ಉಲ್ಲೇಖಿಸಬಹುದು. ರಮೇಶ್ ಥಾಪರ್ ಹಾಗೂ ಬ್ರಿಜ್ ಭೂಷಣ್ ಮೊಕದ್ದಮೆಗಳಲ್ಲಿ ಪತ್ರಿಕಾ ಸ್ವಾತಂತ್ರ್ಯದ ಇತಿಮಿತಿಗಳನ್ನು ಭಾರತದ ವರಿಷ್ಠ ನ್ಯಾಯಾಲಯ ವಿವರಿಸಿದ ರೀತಿ ಅಸದೃಶ ಮತ್ತು ಶ್ಲಾಘನೀಯ.



ವ್ಯಕ್ತಿ ಸ್ವಾತಂತ್ರ್ಯದ ರೂಪರೇಷೆಗಳನ್ನು, ಇತಿಮಿತಿಗಳನ್ನು, ವಿಸ್ತಾರವನ್ನು ನಿರ್ಧರಿಸುವ ದಿಕ್ಕಿನಲ್ಲಿ ವರಿಷ್ಠ ನ್ಯಾಯಾಲಯದ ಕೊಡುಗೆ ತುಂಬಾ ಪ್ರಶಂಸನೀಯ. ಮನೇಕಾಗಾಂಧಿ ಮೊಕದ್ದಮೆಯಲ್ಲಿ ಸಂವಿಧಾನದ ವಿಧಿ ೨೧ನ್ನು ಕುರಿತು ನ್ಯಾಯಾಲಯದ ವಿಶ್ಲೇಷಣೆ ಐತಿಹಾಸಿಕವೆಂದೇ ಹೇಳಬೇಕು. ಯಾವುದೇ ವ್ಯಕ್ತಿಯ ವೈಯಕ್ತಿಕ ಸ್ವಾತಂತ್ರ್ಯವನ್ನಾಗಲೀ, ಜೀವಿಸುವ ಹಕ್ಕನ್ನಾಗಲೀ ಕಾನೂನು ನಿರ್ದೇಶಿತ ಪ್ರಕ್ರಿಯೆಯ ಪ್ರಕಾರವೇ ನಿರಾಕರಿಸಬೇಕು. ಇನ್ನಾವ ರೀತಿಯಲ್ಲೂ ಆ ಹಕ್ಕುಗಳಿಗೆ ಚ್ಯುತಿಯುಂಟುಮಾಡುವಂತಿಲ್ಲ. ಅಂತಹ ಕ್ರಮವಂತೂ ನ್ಯಾಯಯುತವಾಗಿರಬೇಕು, ನಿಷ್ಪಕ್ಷಪಾತವಾಗಿರಬೇಕು ಮತ್ತು ಸಕಾರಣಯುತವಾಗಿರಬೇಕು. ಜೀವಿಸುವ ಹಕ್ಕೆಂದರೆ ಕೇವಲ ಉಸಿರಾಡುತ್ತಾ ಜೀವಿಸುವುದಲ್ಲ. ಅದು ಘನತೆಯಿಂದ ಕೂಡಿದ ಜೀವನವಾಗಿರಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಆಹಾರದ ಭದ್ರತೆ ಇರಬೇಕು. ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹದಿನಾಲ್ಕನೆಯ ವಯಸ್ಸಿನವರೆಗೂ ದೊರಕಬೇಕು. ಮಹಿಳೆಯರು ಹಾಗೂ ಮಕ್ಕಳ ದೌರ್ಬಲ್ಯದ ದುರುಪಯೋಗವಾಗದಂತೆ ಕ್ರಮಗಳನ್ನು ಜರುಗಿಸಬೇಕು. ಕಾರ್ಮಿಕರ ಸ್ಥಿತಿಗತಿಗಳಲ್ಲಿ ಸುಧಾರಣೆಯಾಗಿ ಅವರ ಶೋಷಣೆ ತಪ್ಪಬೇಕು. ಸಾಮಾಜಿಕ ಪಿಡುಗಾಗಿರುವ ಬಾಲಕಾರ್ಮಿಕ ಪದ್ಧತಿಯನ್ನು ಕೊನೆಗಾಣಿಸಬೇಕು. ಈ ಚಿಂತನೆಗಳತ್ತ ಗಮನ ಹರಿಸಲು ಮುಖ್ಯ ಕಾರಣ ನ್ಯಾಯಾಲಯದ ತೀರ್ಪುಗಳು ಹಾಗೂ ವಿಶ್ಲೇಷಣೆಗಳು. ನ್ಯಾಯಾಲಯ ಸಂವಿಧಾನದಲ್ಲಿ ನಿರೂಪಿತವಾಗಿರುವ ಮೂಲಭೂತ ಹಕ್ಕುಗಳನ್ನು ಆಯಾಯ ಕಾಲಕ್ಕನುಗುಣವಾಗಿ, ಸಾಮಾಜಿಕ ಅಗತ್ಯತೆಗಳಿಗನುಗುಣವಾಗಿ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ವಿಶ್ಲೇಷಿಸುತ್ತಾ ಬಂದಿದೆ. ಇದಕ್ಕಾಗಿ ನಾವು ನಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ಅಭಿನಂದಿಸಬೇಕು.

ಅಪರಾಧ ನ್ಯಾಯ ಕ್ಷೇತ್ರದಲ್ಲಂತೂ ಆಗಿರುವ ಅನೇಕ ಸುಧಾರಣೆಗಳಿಗೆ ನಮ್ಮ ವರಿಷ್ಠ ನ್ಯಾಯಾಲಯದ ತೀರ್ಪುಗಳೂ ಕಾರಣವಾಗಿವೆಯೆಂಬುದು ವಾಸ್ತವಿಕ ಸತ್ಯವೇ ಆಗಿದೆ. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಗೆ ನ್ಯಾಯಾಂಗದ ಕ್ರಿಯಾಶೀಲತೆಯೇ ಕಾರಣ. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ನ್ಯಾಯಾಂಗದ ಕ್ರಿಯಾಶೀಲತೆಯ ಪ್ರಮುಖ ಸಾಧನ ಮಾತ್ರವೇ ಆಗದೇ ಸಾಮಾಜಿಕ ಪರಿವರ್ತನೆಗೂ ಕಾರಣವಾಗಿವೆ.

**<u>ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಗೆ ಮೂಲ ಕಾರಣಗಳು:</u>**

೧. ವರಿಷ್ಠ ನ್ಯಾಯಾಲಯ ಐತಿಹಾಸಿಕವಾದ ಕೇಶವಾನಂದ ಭಾರತಿ ಮೊಕದ್ದಮೆಯಲ್ಲಿ ನೀಡಿದ ಐತಿಹಾಸಿಕ ತೀರ್ಪು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಗೆ ಸ್ಫೂರ್ತಿಯಾಯಿತು.

೨. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ತುರ್ತು ಪರಿಸ್ಥಿತಿಯ ಭೀಕರ ಪರಿಣಾಮಗಳಿಂದ ತತ್ತರಿಸಿದ ಅನೇಕ ಅಮಾಯಕ ಜನರ ಸಾಮಾಜಿಕ ಪ್ರತಿಕ್ರಿಯೆಯಾಗಿ ರೂಪಿತವಾದವು. ತುರ್ತುಪರಿಸ್ಥಿತಿಯ ಭೀಕರ ದುರಾಡಳಿತ, ಮಾನವ ಹಕ್ಕುಗಳ ಉಲ್ಲಂಘನೆಗಳು, ವ್ಯಾಪಕವಾಗಿದ್ದ ಅನಿಯಂತ್ರಿತ ಪರಿಸರ ಮಾಲಿನ್ಯ ಇತ್ಯಾದಿಗಳು ಕ್ರಿಯಾಶೀಲ ಸಂಘಗಳಿಗೆ ಜನ್ಮ ನೀಡಿದವು. ಈ ಬಗೆಯ ಮೊಕದ್ದಮೆಗಳ ಪರಿಣಾಮಗಳ ಬಗ್ಗೆ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದ ವಿ. ಆರ್. ಕೃಷ್ಣ ಅಯ್ಯರ್‌ರವರು ಹೀಗೆ ಹೇಳುತ್ತಾರೆ: "ಅಧಿಕಾರಶಾಹಿ ವ್ಯವಸ್ಥೆಯ ಅಂಗವೇ ಆಗಿದ್ದ ನ್ಯಾಯಾಂಗ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಜನಪರ ಮುಖವಾಣಿಯಾಗಲೇಬೇಕಾಯಿತು". ನಿಜಕ್ಕೂ ಇದೊಂದು ಸ್ವಾಗತಾರ್ಹ ಬದಲಾವಣೆ.

೩. ಸಂವಿಧಾನದ ವಿಧಿಗಳಾದ ೩೨ನೆಯ ವಿಧಿ ಮತ್ತು ೨೨೬ನೆಯ ವಿಧಿಗಳ ಪ್ರಕಾರ ಜನರು ತಮ್ಮ ಹಕ್ಕುಗಳಿಗಾಗಿ ಅನೇಕ ರೀತಿಯ ರಿಟ್‌ಗಳನ್ನು ದಾಖಲಿಸುವ ಹಕ್ಕು ಇದೆ. ನ್ಯಾಯಾಂಗ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳನ್ನು ಸ್ವೀಕರಿಸುವಾಗ ಆಡಳಿತಾಂಗ ಮತ್ತು ಶಾಸನಾಂಗಕ್ಕೆ ಹಾನಿಯಾಗದಂತೆ ಎಚ್ಚರ ವಹಿಸಿತು.

ವರಿಷ್ಠ ನ್ಯಾಯಾಲಯದ ನ್ಯಾಯಮೂರ್ತಿಯೊಬ್ಬರು ಜೈಲಿನಲ್ಲಿದ್ದ ಖೈದಿಯೊಬ್ಬ ಬರೆದ ಪತ್ರವೊಂದನ್ನು ಎಲ್ಲಾ ಪ್ರಕ್ರಿಯೆಗಳನ್ನೂ ಬದಿಗೊತ್ತಿ, ರಿಟ್ ಅರ್ಜಿಯಾಗಿ ಪರಿಗಣಿಸಿದ್ದು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಿಗೆ ಸ್ಫೂರ್ತಿಯಾಯಿತು.

೪. ಪರಿಸರ ಮಾಲಿನ್ಯ, ಹೆಂಗಸರು, ಮಕ್ಕಳು ಮತ್ತು ಕಾರ್ಮಿಕರ ಹಕ್ಕುಗಳ ಉಲ್ಲಂಘನೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಸುಮಾರು ಮೂರು ದಶಕಗಳ ಕಾಲ ನ್ಯಾಯಾಲಯದಲ್ಲಿ ದಾಖಲಾಗಿ, ನ್ಯಾಯಾಲಯ ಸೂಕ್ತ ಪರಿಹಾರವನ್ನು ನೀಡಿದ್ದು ಗಮನಾರ್ಹ. ಶೀಲಾ ಬರ್ಸೆ ಮೊಕದ್ದಮೆಯಲ್ಲಿ ತೀರ್ಪು ನೀಡುತ್ತಾ ವರಿಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯನವರು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳ ಬಗ್ಗೆ ಹೀಗೆ ಹೇಳುತ್ತಾರೆ– "ಸಮಾನತೆಯ ಆಧಾರದ ಮೇಲೆ ರಚಿತವಾದ ಸಾಮಾಜಿಕ ವ್ಯವಸ್ಥೆ ಮತ್ತು ಸುಖೀರಾಜ್ಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳೂ ಸಂವಿಧಾನದಲ್ಲಿ ಉಲ್ಲೇಖಿಸಿರುವ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಗೆ ಸಹಕಾರಿಯಾಗಿವೆ. ಸಾಮೂಹಿಕ ಹಕ್ಕುಗಳು ಹಾಗೂ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಸಂರಕ್ಷಿಸುವಲ್ಲಿ ಯಶಸ್ವಿಯೂ ಆಗಿವೆ."

ಕ್ಷುಲ್ಲಕ ಕಾರಣಗಳಿಗೆಲ್ಲಾ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವ ಪ್ರವೃತ್ತಿಯನ್ನು ನ್ಯಾಯಾಲಯ ತೀವ್ರವಾಗಿ ಖಂಡಿಸುತ್ತಾ–"ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ"ಗಳು "ಪ್ರಚಾರಪ್ರಿಯತೆ(publicity) ಹಿತಾಸಕ್ತಿ ಮೊಕದ್ದಮೆ"ಗಳಾಗಬಾರದೆಂದು ಎಚ್ಚರಿಕೆ ನೀಡಿದೆ.

**ಬದಲೀ ವ್ಯಾಜ್ಯ ಪರಿಹಾರ ವ್ಯವಸ್ಥೆ**

ಕೌಟುಂಬಿಕ ಸಮಸ್ಯೆಗಳಿಂದ ಹಿಡಿದು ಅಂತರರಾಷ್ಟ್ರೀಯ ಸಮಸ್ಯೆಗಳವರೆಗೆ ಎಲ್ಲವೂ ನ್ಯಾಯಯುತ ಪರಿಹಾರವನ್ನೇ ನಿರೀಕ್ಷಿಸುತ್ತವೆ. ವ್ಯಾಜ್ಯಗಳು ಕುಟುಂಬದ ಸಂಬಂಧಗಳನ್ನು ಕುರಿತಾಗಿರಬಹುದು, ಆಸ್ತಿಗೆ ಸಂಬಂಧಿಸಿರಬಹುದು, ಕೈಗಾರಿಕಾ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿರಬಹುದು, ಇಲ್ಲವೇ ಗ್ರಾಹಕ ಹಕ್ಕುಗಳಿಗೆ ಸಂಬಂಧಿಸಿರಬಹುದು. ಅಸಂಖ್ಯಾತವಾದ ಈ ವ್ಯಾಜ್ಯಗಳೆಲ್ಲಾ ನ್ಯಾಯಯುತ ಪರಿಹಾರವನ್ನೇ ನಿರೀಕ್ಷಿಸುತ್ತವೆ. ಸಾಂಪ್ರದಾಯಿಕ ವ್ಯಾಜ್ಯ ಪರಿಹಾರ ವ್ಯವಸ್ಥೆ ಈ ನಿರೀಕ್ಷೆಯನ್ನು ಹುಸಿಗೊಳಿಸಿದಾಗ ಪಂಚಾಯಿತಿ (Arbitration), ಸಂಧಾನ, ಸಮಾಧಾನಕರ ವ್ಯಾಜ್ಯ ಪರಿಹಾರ (Conciliation) ಇತ್ಯಾದಿಗಳ ಕಡೆ ಗಮನ ಹರಿಯಿತು. ಇದನ್ನೇ ಬದಲೀ ವ್ಯಾಜ್ಯ ಪರಿಹಾರ ವ್ಯವಸ್ಥೆಯೆಂದು ಕರೆಯುತ್ತಾರೆ.

**ನ್ಯಾಯನಿರ್ವಹಣೆಯಲ್ಲಿ ವಿಳಂಬದ ಪ್ರಶ್ನೆ**

ಶೀಘ್ರವಾಗಿ ತಮ್ಮ ಸಮಸ್ಯೆಗೆ ನ್ಯಾಯಯುತ ಪರಿಹಾರವನ್ನು ಎಲ್ಲರೂ ನಿರೀಕ್ಷಿಸುತ್ತಾರೆ. ನಿಷ್ಕಾರಣವಾಗಿ ಅದು ವಿಳಂಬಿತವಾದರೆ ನ್ಯಾಯಾಂಗದಲ್ಲೇ ಜನ ತಮ್ಮ ನಂಬಿಕೆಯನ್ನು ಕಳೆದುಕೊಳ್ಳುತ್ತಾರೆ. "ವಿಳಂಬಿತ ನ್ಯಾಯ, ನಿರಾಕರಿಸಲ್ಪಟ್ಟ ನ್ಯಾಯ" ಎಂಬ ಉಕ್ತಿಯು ಇದೆ. ನ್ಯಾಯ ನಿರ್ವಹಣೆಯಲ್ಲಿ ಆಗುತ್ತಿರುವ ವಿಳಂಬ ಇಂದು ನಿನ್ನೆಯದಲ್ಲ. ಷೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದ್ದಾನೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಇದೊಂದು ಬೃಹತ್ ಸಮಸ್ಯೆಯೇ ಆಗಿದೆ. ಭಾರತದ ಮಟ್ಟಿಗೆ ಹೇಳುವುದಾದರೆ, ವಿಳಂಬಕ್ಕೆ ಈ ಕೆಳಕಂಡ ಕಾರಣಗಳನ್ನು ನೀಡಬಹುದು–

೧ ಹೆಚ್ಚಿರುವ ಮೊಕದ್ದಮೆಗಳಿಗನುಗುಣವಾಗಿ ನ್ಯಾಯಾಧೀಶರ ನೇಮಕಾತಿ ಆಗದಿರುವುದು.

೨ ಪೌರಪ್ರಕ್ರಿಯಾ ಸಂಹಿತೆ(C.P.C) ಮತ್ತು ಅಪರಾಧಿಕ ಪ್ರಕ್ರಿಯಾ ಸಂಹಿತೆ (Cr.P.C) ಗಳ ಪ್ರಕಾರ ವಿಚಾರಣೆ ನಡೆಸುವಲ್ಲಿ ಆಗುವ ವಿಳಂಬ

೩ ಭಾರತೀಯ ಪುರಾವೆಗಳ ಶಾಸನ (Evidence act) ದ ಪ್ರಕಾರ ನ್ಯಾಯಾಲಯಕ್ಕೆ ಸೂಕ್ತ ಪುರಾವೆಗಳನ್ನು ಒದಗಿಸುವಲ್ಲಿನ ವಿಳಂಬ

೪ ಶೀಘ್ರ ಪರಿಹಾರದತ್ತ ಒಲವಿಲ್ಲದ ನ್ಯಾಯಾಧೀಶರು ಹಾಗೂ ವಕೀಲರು ಹಾಗೂ ಪಕ್ಷಕಾರರು (Parties)

ಈ ಸಮಸ್ಯೆಯ ಅರಿವು ಎಲ್ಲರಿಗೂ ಇದೆ. ನ್ಯಾಯಾಂಗಕ್ಕೆ ಇದೊಂದು ದೊಡ್ಡ ಕಳಂಕವಾಗಿದೆ. ಶೀಘ್ರಗತಿ ನ್ಯಾಯಾಲಯಗಳ ಸ್ಥಾಪನೆ (ಈಚಿನ track courts) ಸಮಸ್ಯೆಗೆ ಯಶಸ್ವೀ ಪರಿಹಾರವಾಗಿಲ್ಲ. ಸಮಸ್ಯೆ ಬೃಹದಾಕಾರವಾಗಿರುವುದೇ ಇದಕ್ಕೆ ಕಾರಣ. ಭಾರತೀಯ ಕಾನೂನು ಆಯೋಗ ಇದಕ್ಕೆ ಸೂಕ್ತ ಪರಿಹಾರ ನೀಡುವಲ್ಲಿ ವಿಫಲವಾಗಿದೆ.

ಮೂಲತಃ ವಿಳಂಬಕ್ಕೆ ಕಾರಣ ನ್ಯಾಯನಿರ್ಣಾಯಕ ವ್ಯವಸ್ಥೆ ಆಂಗ್ಲೋ ಸ್ಯಾಕ್ಸನ್ ಮಾದರಿಯಲ್ಲಿರುವುದು. ಶೀಘ್ರಗತಿಯಲ್ಲಿ ನ್ಯಾಯ ನಿರ್ವಹಣೆಯನ್ನು ಮಾಡುವ "ಭಾರತೀಯ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು" ನಾವು ರೂಪಿಸಿ ಜಾರಿಗೊಳಿಸಬೇಕಾಗಿದೆ.

ಮೊಕದ್ದಮೆಗಳ ಶೀಘ್ರ ಪರಿಹಾರ ಪ್ರಜೆಗಳ ಮೂಲಭೂತ ಹಕ್ಕಾಗಬೇಕು. ಸಂವಿಧಾನದ ಮೂರನೆಯ ಭಾಗಕ್ಕೆ ಇದಕ್ಕನುಗುಣವಾಗಿ ತಿದ್ದುಪಡಿಯಾಗಬೇಕು.

**(ಪ್ರೊ. ಸಿ.ಕೆ.ಎನ್ ರಾಜ ಅವರು ಮೈಸೂರು ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥರಾಗಿದ್ದು ನಿವೃತ್ತರಾದವರು. ಸದ್ಯಕ್ಕೆ ಮೈಸೂರಿನ ಮಹಾರಾಜ ಕಾಲೇಜಿನ ಕಾನೂನು ಅಧ್ಯಯನ ಕೇಂದ್ರದ ನಿರ್ದೇಶಕರು. ಹಾಗೇ ಕನ್ನಡದ ಹಿರಿಯ ಮತ್ತು ಪ್ರಸಿದ್ಧ ವಿನೋದ ಬರಹಗಾರರು).**

---

## ಇನ್ನಷ್ಟು ಪತ್ರಗಳು

ಪ್ರಿಯ ಸಂಪಾದಕರೇ,

ಜನವರಿ ತಿಂಗಳಿನ ಸಂಚಿಕೆಯಲ್ಲಿ ಸಮಾಜವಾದಿ ಕೃಷ್ಣಗೋಪಾಲರ ಬಗ್ಗೆ ಶಿವರಾಮ ಕಾಡನಕುಪ್ಪೆಯವರ ಲೇಖನ ಹಾಗೂ ತಮ್ಮ ಮಾತುಗಳನ್ನು ಓದಿದೆ.

ನಾವೆಲ್ಲ ಗೌರವಿಸುವ ಗೋಪಾಲಗೌಡರ ಬಗ್ಗೆ ಕೃಷ್ಣಗೋಪಾಲರು ಬರೆದಿರುವುದನ್ನು ಓದಿ ಹೃದಯ ಭಾರವಾಯಿತು. ಮತ್ತೆ ಕೆಲವು ನೆನಪುಗಳು ತಾವಾಗಿ ಮೂಡಿಬಂದವು.

ನನ್ನ ವಿದ್ಯಾರ್ಥಿ ದಿನಗಳಲ್ಲಿ ಒಮ್ಮೆ ವಿಧಾನಸಭೆಯ ಕಾರ್ಯಕಲಾಪವನ್ನು ವೀಕ್ಷಿಸಲು ಹೋಗಿ ಗೋಪಾಲಗೌಡರು ಸಿಟ್ಟಿನಿಂದ ತಮ್ಮ ಕೈಲಿದ್ದ ಕಾಗದವನ್ನು ಪರಪರನೆ ಹರಿದು ನೆಲಕ್ಕೆ ಹಾಕಿ, ಕಾಲಿನಿಂದ ಹೊಸಕಿಹಾಕಿ ಸಭಾತ್ಯಾಗ ಮಾಡಿದ್ದನ್ನು ನೋಡಿಬಂದಿದ್ದೆ.

ಮುಂದೆ ನನ್ನ ಮದುವೆಯಾದ ಮೇಲೆ ಶ್ರೀರಾಮ್‌ರೊಡನೆ ಗೋಪಾಲಗೌಡರನ್ನು ಅವರ ಕಾರ್ಯಕ್ಷೇತ್ರ ತೀರ್ಥಹಳ್ಳಿಯಲ್ಲಿ ನೋಡಿದಾಗ ಅವರಿಗಾಗಿ ಉಳ್ಳವರ ಮನೆಯಿಂದ ಬರುತ್ತಿದ್ದ ಊಟವನ್ನು ನಿರ್ಲಕ್ಷಿಸಿ ತಮ್ಮನ್ನು ನೋಡಲು ಬರುತ್ತಿದ್ದ ಬಡರೈತರು ತರುತ್ತಿದ್ದ ಕಿರ್ಮಿನಿನ ಚಟ್ನಿಯನ್ನು ಆನಂದದಿಂದ ತಿನ್ನುತ್ತಿದ್ದುದನ್ನು ಕಂಡೆ.

ಇಂತಹ ಧೀಮಂತ ವ್ಯಕ್ತಿತ್ವದ ಗೋಪಾಲಗೌಡರು ಅನಾರೋಗ್ಯದಿಂದ ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದಾಗ ಶ್ರೀರಾಮ್‌ರೊಡನೆ ಹೋಗಿ ನೋಡಿದೆ ಮತ್ತು ಅವರ ದೇಹಾವಸಾನವಾದಾಗಲೂ ನೋಡಿದೆ. ಅಂದಿನ ನಿರ್ಭೀತ ರಾಜಕಾರಣಿ ಸೊರಗಿದ ಶವವಾಗಿದ್ದರು. ಕೃಷ್ಣಗೋಪಾಲರು ಗೋಪಾಲಗೌಡರ ಬಗ್ಗೆ ಬರೆದಿರುವ "ನೊಂದವರಿಗೆ, ತಬ್ಬಲಿಗಳಿಗೆ ಮಿಡುಕುತ್ತಿದ್ದ ಜೀವ ಮರೆಯಾಯಿತು" ಎಂಬ ಕೊನೆಯ ಮಾತುಗಳು ಎಷ್ಟು ಸತ್ಯ ಎನಿಸುತ್ತದೆ.

ನಾವು ನಮ್ಮ ವೈವಾಹಿಕ ಜೀವನದ ಪ್ರಾರಂಭದಲ್ಲಿ ಬೆಂಗಳೂರಿನ ಸಮೀಪದ ಶ್ರೀರಾಮರ ಹಳ್ಳಿಗೂ ಮೈಸೂರಿಗೂ ಓಡಾಡುವಾಗ ರಾಮನಗರ ದಾಟುವಾಗ ಶ್ರೀರಾಂ ಇಲ್ಲಿ ಕೃಷ್ಣಗೋಪಾಲ್ ಎಂಬ ಸಮಾಜವಾದಿ ಇದ್ದಾರೆ ಎಂದು ಹೇಳುತ್ತಿದ್ದರು. ಮತ್ತೊಮ್ಮೆ ರಾಮನಗರದಲ್ಲಿ ಒಂದು ಪ್ರತಿಭಟನಾ ಮೆರವಣಿಗೆಯಿಂದಾಗಿ ನಮ್ಮ ಬಸ್ಸು ನಿಧಾನವಾದಾಗ, ಮೆರವಣಿಗೆಯ ನೇತೃತ್ವ ವಹಿಸಿದ್ದ ವ್ಯಕ್ತಿಗೆ ಬಸ್ಸಿನಿಂದ ಶ್ರೀರಾಂ ಕೊಂಚ ತಲೆ ಹೊರಹಾಕಿ ಕೈಬೀಸಿದರು. ಅವರೇ ಕೃಷ್ಣಗೋಪಾಲರು.

ಸರಳತೆಯನ್ನು ಮೈಗೂಡಿಸಿಕೊಂಡು ತಾನು ನಂಬಿದ ತತ್ವಗಳಿಗಾಗಿ ಎಲೆ ಮರೆಯ ಕಾಯಿಯಂತೆ ನಿಷ್ಠೆಯಿಂದ ನಡೆದುಕೊಂಡ ಕೃಷ್ಣಗೋಪಾಲರನ್ನು ಪರಿಚಯಿಸಿದ ಮತ್ತು ಅವರ ಬಗ್ಗೆ ವಿಶದವಾಗಿ ಬರೆದ ಶಿವರಾಮು ಕಾಡನಕುಪ್ಪೆಯವರಿಗೆ ನನ್ನ ವಂದನೆಗಳು.

**–ಪದ್ಮಾಶ್ರೀರಾಮ,** ಮೈಸೂರು.

'ಹೊಸ ಮನುಷ್ಯ'ದ ಲೇಖನಗಳು ಹಳೆಯ ವಿಷಯಗಳನ್ನು ಮೆಲುಕು ಹಾಕುವಂತೆ ಮಾಡುತ್ತದೆಯೇ ಹೊರತು ಬಿಸಿ ರಕ್ತದವರು ಬಂಡವಾಳಶಾಹಿಗಳ ಸೈತಾನ ರಾಜಕಾರಣಿಗಳ ಮತ್ತು ಪೋಲೀಸರ ದಬ್ಬಾಳಿಕೆ ಮತ್ತು ಗೂಂಡಾಗಿರಿಗಳ ವಿರುದ್ಧ ಬೀದಿಗಿಳಿದು ಏನಾದರೂ ಮಾಡಬೇಕೆಂದು ಅನಿಸುವಂತೆ ಮಾಡುವುದಿಲ.

**–ಶೆಳ್ಳಗಿ ದೇವೇಂದ್ರ,** ಗುಲ್ಬರ್ಗ

**ಭಾಷೆ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ**

## ಇದು ಎಲ್ಲರೂ 'ಎಲ್ಲ'ವನ್ನೂ ಕಳೆದುಕೊಂಡಿರುವ ಕಾಲವೆ?

**ಅ**ದು ಎಪ್ಪತ್ತರ ದಶಕದ ಕೊನೆಯ ವರ್ಷಗಳಿರಬಹುದು. ದೆಹಲಿಯಿಂದ ಹೀಗೇ ಬಂದಿದ್ದ ನಾನು ನಮ್ಮ ಗುರು ಕೆ.ಎಂ. ಶಂಕರಪ್ಪನವರೊಂದಿಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಹಿಂಭಾಗದ ಪ್ಯಾಲೇಸ್ ರಸ್ತೆಯಲ್ಲಿ ನಡೆದಿದ್ದೆ. ಇದ್ದಕ್ಕಿದಂತೆ ಭರ್ರನೆ ದೊಡ್ಡ ಕಾರೊಂದು ನಮ್ಮ ಪಕ್ಕಕ್ಕೇ ಬಂದು ನಿಂತಿತು. ಗಾಬರಿಯಿಂದ ನಾವು ನೋಡುತ್ತಿದ್ದಂತೆ ಕಾರಿನ ಕಿಟಕಿಯ ಗಾಜು ಇಳಿದು ತಲೆಯೊಂದು ಇಣುಕಿ 'ಶಂಕರಪ್ಪಾ!' ಎಂದು ಕೂಗಿತು. ನೋಡಿದರೆ ಅವರು ಮುಖ್ಯಮಂತ್ರಿ ದೇವರಾಜ ಅರಸು! ನಾನು ಸಾವರಿಸಿಕೊಳ್ಳುತ್ತಿರುವಂತೆ ಅವರು 'ಎಷ್ಟು ಸರ್ತಿ ಹೇಳಿಕಳಿಸಬೇಕು, ನನ್ನನ್ನು ಕಾಣಬೇಕೆಂದು? ನಿಮ್ಮಂತಹವರ ಪ್ರತಿಭೆಯನ್ನು ಬಳಸಿಕೊಳ್ಳುವುದು ನಮ್ಮ ಕರ್ತವ್ಯ. ಬಾ, ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ದೋ, ಮತ್ತೊಂದರದ್ದೋ ಜವಾಬ್ದಾರಿ ಕೊಡುವೆ' ಎಂದರು. ಶಂಕರಪ್ಪ ತುಸು ನಕ್ಕು, 'ಆಗಲಿ ಸಾಹೇಬ್ರೇ, ಬರುತ್ತೇನೆ' ಎಂದು ಕೈಮುಗಿಯುತ್ತಿದ್ದಂತೆ ಕಾರು ಮುಂದೆ ಹೊರಟಿತು. ಆಗ ಸಮಾಜವಾದಿಯಾಗಿ ಕಾಂಗ್ರೆಸ್ಸೇತರವಾದದ ಪ್ರಬಲ ಪ್ರತಿಪಾದಕರಾಗಿದ್ದ ಶಂಕರಪ್ಪ ಅರಸು ಅವರತ್ತ ಸುಳಿಯಲಿಲ್ಲವೆಂಬುದು ಬೇರೆ ವಿಚಾರ.

ಇನ್ನೊಂದು ಪ್ರಸಂಗ. ಸಿದ್ದಲಿಂಗಯ್ಯ ತಮ್ಮ 'ಊರು ಕೇರಿ'ಯಲ್ಲಿ ದಾಖಲಿಸಿರುವುದು. ಅವರೊಮ್ಮೆ ತಮ್ಮ ಗೆಳೆಯರೊಂದಿಗೆ ಮುಖ್ಯಮಂತ್ರಿ ದೇವರಾಜ ಅರಸು ಮನೆಗೆ ಹೋಗಬೇಕಾಯಿತು. ಅವರ ಗೆಳೆಯ ಅರಸುಗೆ ಸಾಷ್ಟಾಂಗ ನಮಸ್ಕಾರ ಮಾಡಿದರಲ್ಲದೆ, ಸಿದ್ದಲಿಂಗಯ್ಯನವರನ್ನೂ ಅಡ್ಡಬೀಳುವಂತೆ ನೂಕಿದರು. ಆದರೆ ಸಿದ್ಧಲಿಂಗಯ್ಯ ಅದನ್ನು ಪ್ರತಿರೋಧಿಸುತ್ತಿದ್ದಂತೆ, ಇದನ್ನು ಗಮನಿಸುತ್ತಿದ್ದ ಅರಸು ಅದನ್ನು ತಡೆದು 'ಇವರು ಯಾರು?' ಎಂದು ಕೇಳಲಾಗಿ ಸಿದ್ಧಲಿಂಗಯ್ಯ ಕೂಡಲೇ ಜೋಳಿಗೆಯಿಂದ ತಮ್ಮ 'ಹೊಲೆ ಮಾದಿಗರ ಹಾಡು' ಕವನ ಸಂಕಲನವನ್ನು ತೆಗೆದು ಸಹಿ ಮಾಡಿ ಅವರಿಗೆ ಕೊಟ್ಟರು. ಪುಸ್ತಕ ತೆಗೆದುಕೊಂಡ ಅರಸು ಪದ್ಯಗಳ ಮೇಲೆ ಕಣ್ಣಾಡಿಸುತ್ತಿರುವಾಗಲೇ ಅವರನ್ನು ಮನೆಯೊಳಗೆ ಬರಲು ಹೇಳಿದರು. ಪದ್ಯ ಓದಿ ಚಹಾ ತರಿಸಿಕೊಟ್ಟು ಹೇಳಿದರು: 'ನೀವು ಆಗಾಗ ಬಂದು ಹೋಗಬೇಕು'

ಇದರೊಂದಿಗೇ, ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಯಾವುದೋ ಸಾಹಿತ್ಯಿಕ-ಸಾಂಸ್ಕೃತಿಕ ವಿಷಯವಾಗಿ ಕುವೆಂಪು ಅವರ ಸಲಹೆ ಬೇಕಾಗಿಬಂದು, ಅದಕ್ಕಾಗಿ ಕುವೆಂಪು ಅವರೇ ಬರಲು ಸಿದ್ಧವಿದ್ದಾಗ ನಿಜಲಿಂಗಪ್ಪನವರು ಅವರಿಗೆ 'ನೀವು ಬರಬೇಡಿ. ನಿಮ್ಮ ಬಳಿಗೆ ನಾನು ಬರಬೇಕು' ಎಂದು ಹೋಗಿಬಂದದ್ದನ್ನು ಎಲ್ಲೋ ಓದಿದ್ದ ನೆನಪು ಬರುತ್ತಿದೆ.

ಇಂತಹ ಪರಂಪರೆಯುಳ್ಳ ಕರ್ನಾಟಕದಲ್ಲಿ ಇಂದೇನಾಗುತ್ತಿದೆ? ನಮ್ಮ ಇಂದಿನ ಮುಖ್ಯಮಂತ್ರಿಗಳಿಗೆ ಲೇಖಕ-ಬುದ್ಧಿಜೀವಿ-ಚಿಂತಕರ ಸಹವಾಸವೇ ಬೇಡವಾಗಿದೆ. ಅಹಿಂದದ ರಾಜಕೀಯ ಪುಢಾರಿಗಳ ಸಹವಾಸವೇ ಅವರಿಗೆ ಅಪ್ಯಾಯಮಾನವಾಗಿದೆ. ಹೆಚ್ಚೆಂದರೆ ಅವರ ಕಣ್ಣಿಗೆ ಬೀಳಲು ಹವಣಿಸುತ್ತಾ ಅವರ ಸುತ್ತ ತಿರುಗಿ ಸಣ್ಣ ಪುಟ್ಟ ಸ್ಥಾನಮಾನಗಳನ್ನು ಗಿಟ್ಟಿಸಿರುವ ಅಥವಾ ಗಿಟ್ಟಿಸಬಯಸುವ ಸಾಹಿತ್ಯ ಪುಢಾರಿಗಳು ಸಾಕು. ಇವರಿಗೆಲ್ಲ ಈ ಮುಖ್ಯಮಂತ್ರಿ ಕರ್ನಾಟಕದ ಶಾಸನ ಸಭೆಯ ಇತಿಹಾಸದಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ತಿನಲ್ಲಿ ಸಾಹಿತಿಯೊಬ್ಬರಿಗೆ ಸ್ಥಾನ ಕೊಡುವ ಅಗತ್ಯವೇನೂ ಇಲ್ಲವೆನ್ನುವಷ್ಟು ಸಾಂಸ್ಕೃತಿಕ ಜಡತ್ವಕ್ಕೀಡಾಗಿದ್ದಾರೆ ಎಂಬುದು ಮುಖ್ಯವೇ ಆಗಿಲ್ಲ. ಇಂತಹ ಜಡತ್ವದಿಂದಾಗಿಯೇ ಶಿಕ್ಷಣ ಮಾಧ್ಯಮ ಕುರಿತ ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಪರಿಣಾಮಗಳನ್ನು ನಿವಾರಿಸಿಕೊಳ್ಳಲು ಕೈಗೊಳ್ಳಬೇಕಾದ ತುರ್ತು ಶಾಸನಾತ್ಮಕ ಕ್ರಮಗಳ ಬಗ್ಗೆ ಅವರಿಂದ ಸೊಲ್ಲೇ ಇಲ್ಲ ಎಂಬ ಯಾವ ಯೋಚನೆಯೂ ಈ ಸಾಹಿತಿಗಳ ಬಳಿ ಸುಳಿದಿರಲಾರದು. ಇದು ಕಂತೆಗೆ ತಕ್ಕ ಬೊಂತೆ ಅಷ್ಟೆ.


ಅದೇನೇ ಇದ್ದರೂ, ಶ್ರವಣಬೆಳಗೊಳದಲ್ಲಿನ ಹಾಲಂಬಿಯವರ ಕನ್ನಡ ಸಂತೆಯಲ್ಲಿ ಕನ್ನಡಪರವಾದ ವೀರಾವೇಶದ ಮಾತುಗಳು ಮೊಳಗಲಿವೆ. ಜನ ಚಪ್ಪಾಳೆ ತಟ್ಟಿ ಎದ್ದು ಹೋಗಲಿದ್ದಾರೆ. ಆನಂತರ ಹಾಲಂಬಿ ಮತ್ತವರ ಗೆಣೆಕಾರರು ಕನ್ನಡದ ಸುದ್ದಿ ಮರೆತು ಹಾಯಾಗಿ ನಿದ್ದೆ ಮಾಡಬಹುದು. ಏಕೆಂದರೆ ಪರಿಷತ್ತಿನ ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಸಮ್ಮೇಳನಾಧ್ಯಕ್ಷತೆಯ ಜೊತೆಗೆ ನೃಪತುಂಗ ಇತ್ಯಾದಿ ದೊಡ್ಡ ಗಂಟುಗಳ ಪ್ರಶಸ್ತಿಗಳನ್ನು ಹಿಂದುಳಿದವರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಸಂದಾಯವಾಗುವಂತೆ ನೋಡಿಕೊಂಡ ತೃಪ್ತಿ ಅವರಿಗಿದೆಯಂತೆ! ಇದು ಪ್ರಶಸ್ತಿಗಳು ಮತ್ತು ಸಮ್ಮೇಳನಾಧ್ಯಕ್ಷತೆ ಇಂದು ಯಾವ ದುಃಸ್ಥಿತಿಗೀಡಾಗಿವೆ ಎಂಬುದನ್ನು ತೋರಿಸುತ್ತದೆ ಎಂಬ ಪರಿವೆಯೂ ಹಾಲಂಬಿಯವರಿಗೆ ಇದ್ದಂತಿಲ್ಲ. ಇದೆಲ್ಲದರ ಜೊತೆಗೆ ಒಂದು ದುಃಖದ ಸಂಗತಿ ಎಂದರೆ, ಸಿದ್ಧಲಿಂಗಯ್ಯ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಒಪ್ಪಿಕೊಳ್ಳುವ ಮುನ್ನ ಒಮ್ಮೆಯಾದರೂ, 'ಕನ್ನಡಕ್ಕೆ ನನಗಿಂತ ಹೆಚ್ಚು ಸೇವೆ ಸಲ್ಲಿಸಿದ ನನ್ನ ಹಿರಿಯರೂ, ಮೇಷ್ಟ್ರೂ ಆದ ಚಿದಾನಂದಮೂರ್ತಿ ಇದ್ದಾರೆ' ಎಂಬ ಮುಜುಗರದ ಮಾತನ್ನಾಡಬಹುದೆಂಬ ನನ್ನ ಊಹೆ ಸುಳ್ಳಾಗಿ ಹೋಗಿದೆ.

ಇದು ಎಲ್ಲರೂ 'ಎಲ್ಲ'ವನ್ನೂ ಕಳೆದುಕೊಂಡಿರುವ ಕಾಲ ಎನಿಸುತ್ತಿದೆ.

**-ಡಿಎಸ್ಸೆನ್**

## ಮೈಸೂರಿನಲ್ಲಿ ಬಹುರೂಪಿ ಉತ್ಸವ: ಒಂದು ಯುವ ನೋಟ

**-ಅರವಿಂದ**



**ಮೈ**ಸೂರಿನ ರಂಗಾಯಣವು ಪ್ರತಿವರ್ಷ ಆಯೋಜಿಸುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವು ಈ ವರ್ಷ ವಿಲಿಯಮ್ ಶೇಕ್ಸ್‌ಪಿಯರ್‌ನ ನಾಲ್ಕುನೂರಾಐವತ್ತನೆ ಜಯಂತಿಯ ಅಂಗವಾಗಿ "ಜಗದ ಜಾನಪದ: ಬಹುಮುಖಿ ಶೇಕ್ಸ್‌ಪಿಯರ್" ಎಂಬ ಆಶಯ ಹೊತ್ತು ಇದೇ ಜನವರಿ ೧೩ರಿಂದ ೧೮ರವರೆಗೆ 'ನಡೆಯಿತು. ಕಲೆಯ ನಾನಾ ಪ್ರಕಾರಗಳನ್ನು ಒಂದೆಡೆ ಪ್ರದರ್ಶಿಸುವ ಜೀವಂತ ಮ್ಯೂಸಿಯಂನಂತಿರುವ 'ಬಹುರೂಪಿ'ಯಲ್ಲಿ ಈ ಬಾರಿ ಶೇಕ್ಸ್‌ಪಿಯರ್ ಕೃತಿಗಳನ್ನು ಆಧರಿಸಿದ ನಾಟಕಗಳು, ಸಿನೆಮಾಗಳು, ವಸ್ತು ಪ್ರದರ್ಶನ, ವಿಚಾರ ಸಂಕಿರಣವನ್ನು ಏರ್ಪಡಿಸುವುದರೊಂದಿಗೆ ನಾಡಿನ ಜನಪದ ಕಲೆಗಳಿಗೂ ಒತ್ತು ನೀಡಲಾಗಿತ್ತು.

ಉತ್ಸವದ ಅಂಗವಾಗಿ ಪ್ರದರ್ಶನಗೊಂಡ ಬಹುತೇಕ ನಾಟಕಗಳು ಶೇಕ್ಸ್‌ಪಿಯರ್‌ನ ಕೃತಿಗಳನ್ನು ಭಾರತದ ಸಂದರ್ಭಕ್ಕೆ ಒಗ್ಗಿಸುವ ಪ್ರಯತ್ನದಂತಿದ್ದವು. ರಂಗಾಯಣ ನಾಟಕ ತಂಡದ, ಪ್ರಸನ್ನ ಅವರು ನಿರ್ದೇಶಿಸಿದ *ಹ್ಯಾಮ್ಲೆಟ್* ನಾಟಕವು ಈ ಒಗ್ಗಾಣಿಕೆಯ ಸಮಸ್ಯೆಯಿಂದ ಬಳಲುತ್ತಿರುವಂತೆ ಕಂಡುಬಂತು. ನಾಟಕದ ನಿರ್ದೇಶಕರು ಹ್ಯಾಮ್ಲೆಟ್‌ನ ತಾರ್ಕಿಕ ವರ್ತನೆಗೆ ಕನ್ನಡದಲ್ಲಿ ಹುಚ್ಚನೆಂಬ ಪಟ್ಟ ಕಟ್ಟಿದರೆ, ನಟರು ಅದೇ ಮಾದರಿಯ ಅಭಿನಯವನ್ನು ನೀಡಿದರು. ಪಾತ್ರಧಾರಿಗಳು ಐರೋಪ್ಯ ಮಾದರಿಯ ವೇಷ ಧರಿಸಿ, ಪಾಶ್ಚಿಮಾತ್ಯ ಸಂಗೀತದೊಂದಿಗೆ ಗ್ರಾಮ್ಯ ಕನ್ನಡ ಭಾಷೆ ಬಳಸಿದ್ದು ಪ್ರೇಕ್ಷಕರಿಗೆ 'ರುಚಿ'ಯಾಗಿ ಕಂಡಿತಾದರೂ, ಆಂಗ್ಲ ಪಠ್ಯದ ಅರಿವಿರುವವರಿಗೆ ಈ ಮಾದರಿಯ ಅನುಸಂಧಾನದ ಬಗ್ಗೆ ಯೋಚಿಸುವಂತಾಯಿತು. ಇದೇ ಮಾದರಿಯ ಸಮಸ್ಯೆಗಳು *ಕಿಂಗ್ ಲಿಯರ್* ಆಧಾರಿತ ಯಕ್ಷಗಾನ ಪ್ರಹಸನ 'ಪಾಪಣ್ಣ ವಿಜಯ ಗುಣಸುಂದರಿ'ಯನ್ನು ಕಾಡಿತು. ಮೂಲ *ಲಿಯರ್*‌ನಲ್ಲಿ ಮಾನವ ಪ್ರೇಮದ ಮಿತಿಗಳನ್ನು ಅರಿಯುವ ಪ್ರಯತ್ನವಿದ್ದರೆ, ಈ ಪ್ರಹಸನವು "ಪತಿಯ ಪ್ರೇಮವೇ ಶ್ರೇಷ್ಠ" ಎಂಬ ಸಂದೇಶ ಸಾರುತ್ತಾ ನಿಜಾರ್ಥದಲ್ಲಿ ಪ್ರಹಸನವೇ ಆಯಿತು! 'ನಮ್ಮ ಸಂಸಾರ' ಎಂಬ ಸಾಮಾನ್ಯ ಶೀರ್ಷಿಕೆಯಡಿ ಎರಡು ನಾಟಕಗಳನ್ನು ಒಂದೇ ದೃಷ್ಟಿಕೋನದಲ್ಲಿ ಪ್ರದರ್ಶಿಸಿದ ನೀನಾಸಂ ತಂಡವು(ನಿ: ರಘುನಂದನ)

ನಟನೆಗೆ ಸಂಬಂಧಿಸಿದಂತೆ ಯಶಸ್ವಿಯಾಯಿತಾದರೂ, ನಾಟಕದ ಎಡ ಪಂಥೀಯ ಚಿಂತನೆಗಳು ಆಧುನಿಕತೆಯನ್ನು ವಿರೋಧಿಸುವುದಕ್ಕೆ ಮಾತ್ರ ಸೀಮಿತವಾಗಿ ನಿರಾಸೆ ಹುಟ್ಟಿಸಿತು.

ಮೈಸೂರು ಕಾರಾಗೃಹ ಖೈದಿಗಳ 'ಸಂಕಲ್ಪ' ರಂಗ ತಂಡವು ಶೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ಆಧರಿಸಿದ ಎಚ್.ಎಸ್.ಶಿವಪ್ರಕಾಶರ 'ಮಾರ ನಾಯಕ' ನಾಟಕವನ್ನು (ನಿ:ಹುಲಿಗೆಪ್ಪ ಕಟ್ಟಿಮನಿ) ಉತ್ಸಾಹದಿಂದ ಪ್ರದರ್ಶಿಸಿದರೂ ನಾಟಕದ ಅಂತ್ಯ ಅನಿರೀಕ್ಷಿತವೆನಿಸಿ ಅಸಮಾಧಾನವನ್ನು ಉಂಟುಮಾಡಿತು. ಟಿಕೇಟು ಲಭ್ಯವಿಲ್ಲದ ಕಾರಣ ನಾನು ನೋಡಲಾಗದ 'ಶೇಕ್ಸ್‌ಪಿಯರ್ ಮನೆಗೆ ಬಂದ', 'ರಕ್ತ ರಾತ್ರಿ' ಹಾಗು 'ಹಸಿವು–ಕಸಿವು' ನಾಟಕಗಳು ಬಹು ಜನರಿಗೆ ಇಷ್ಟವಾದಂತೆ ಕೇಳಿಬಂತು. ರಂಗ ಮಂದಿರದ ಪಕ್ಕದಲ್ಲೇ ನಡೆಯುತ್ತಿದ್ದ ಬೀದಿ ನಾಟಕಗಳು ಸಾಮಾಜಿಕತೆಯ ಹೆಸರಿನಲ್ಲಿ ವಾಚ್ಯವಾಗಿದ್ದರೂ, ಕೆಲವು ಪ್ರಯೋಗಗಳು ಜನರ ಗಮನ ಸೆಳೆದಿದ್ದಂತೂ ನಿಜ.

ಬಹುರೂಪಿಯ ಎರಡನೆಯ ದಿನ 'ಜಾನಪದ ಉತ್ಸವ'ವನ್ನು ಅಪಾರ ಸಂಖ್ಯೆಯ ವೀಕ್ಷಕರ ಸಮ್ಮುಖದಲ್ಲಿ ಉದ್ಘಾಟಿಸಿದ ಕೃಷ್ಣಮೂರ್ತಿ ಹನೂರು ಶೇಕ್ಸ್‌ಪಿಯರ್‌ನ ಸಾಲುಗಳಲ್ಲಿ ಕನ್ನಡ ಜಾನಪದವನ್ನು ಹುಡುಕಲು ಪ್ರಯತ್ನಿಸಿದ್ದು ಕುತೂಹಲ ಹುಟ್ಟಿಸಿತು. ಅಧ್ಯಕ್ಷತೆ ವಹಿಸಿದ್ದ ಪಿಚ್ಚಳ್ಳಿ ಶ್ರೀನಿವಾಸ ಅವರು ಎಲ್ಲ ಉತ್ಸವಗಳಲ್ಲೂ ಜನಪದ ಕಲಾವಿದರಿಗೆ ಸಲ್ಲಬೇಕಾದ ಗೌರವ ಮತ್ತು ಅನುಕೂಲಗಳನ್ನು ಕುರಿತು ಪ್ರಸ್ತಾಪಿಸಿದರು. ಅನೇಕ ತಂಡಗಳು ಉತ್ತಮ ಪ್ರದರ್ಶನವನ್ನು ನೀಡಿದ್ದು, ತಮಟೆ ವಾದನ, ಕಂಗೀಲು ನೃತ್ಯ ಹಾಗು ಮಹಿಳಾ ವೀರಗಾಸೆ ನೆರೆದ ಸಮೂಹಕ್ಕೆ ಇಷ್ಟವಾಯಿತು.

"ಶೇಕ್ಸ್‌ಪಿಯರ್– ಭಾರತೀಯ ಅನುಸಂಧಾನ" ವಿಚಾರ ಸಂಕಿರಣವು ಉತ್ಸವದ ಕಡೆಯ ಎರಡು ದಿನಗಳ ಕಾಲ ಜರುಗಿತು. ಕಾರ್ಯಕ್ರಮದ ಆಶಯ ಭಾಷಣಕಾರ ರಾಜೇಂದ್ರ ಚೆನ್ನಿ ಅವರು ಶೇಕ್ಸ್‌ಪಿಯರ್ ಭಾರತಕ್ಕೆ ಬಂದ ವಸಹಾತು ಕಾಲದಲ್ಲಿನ ಭಾಷಾಂತರ ಹಾಗು ರೂಪಾಂತರದ ಸಿದ್ಧಾಂತಗಳನ್ನು ಮಂಡಿಸುತ್ತಾ ಭಾರತೀಯ ವೃತ್ತಿ ರಂಗಭೂಮಿಯು ಶೇಕ್ಸ್‌ಪಿಯರ್‌ನ ಅನುಸಂಧಾನಕ್ಕೆ ಮುಖ್ಯ ಕಾರಣವೆಂದು ಪ್ರತಿಪಾದಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿ.ಕೆ. ಗೋವಿಂದ ರಾವ್ ಇವರ ಮಾತನ್ನು ಅನುಮೋದಿಸುತ್ತಲೇ ಶೇಕ್ಸ್‌ಪಿಯರ್‌ನ ಕೆಲವು ಜನಪ್ರಿಯ ಸಾಲುಗಳನ್ನು ಉಲ್ಲೇಖಗಳ ಆಧಾರದ ಮೇಲೇ ಆತನು ವಿಶ್ವವ್ಯಾಪಿ ಎಂದು ಘೋಷಿಸಿದರು! ಪ್ರಸನ್ನರು ಶೇಕ್ಸ್‌ಪಿಯರ್ ಎಂಬ ಐರೋಪ್ಯ ಮಾದರಿಯನ್ನು ಉತ್ಸವ ಮೂರ್ತಿಯನ್ನಾಗಿಸುವ ಅಗತ್ಯವಿಲ್ಲ ಎಂದು ವಾದಿಸುತ್ತಾ, ಅದರ ಭಾಗವಾಗಿ ತಮ್ಮ ಮೇಲಿನ ಕೃತಿ ಚೌರ್ಯದ ಆಪಾದನೆಗೂ ಸ್ಪಷ್ಟನೆ ನೀಡಿದರು!

'ಶೇಕ್ಸ್‌ಪಿಯರ್ ಕನ್ನಡೀಕರಣ' ವಿಚಾರ ಗೋಷ್ಠಿಯಲ್ಲಿನ ವಿಮರ್ಶೆ ಶೇಕ್ಸ್‌ಪಿಯರ್‌ನ ಮೂಲ ಆಂಗ್ಲ ಸಾಲುಗಳನ್ನು ಕನ್ನಡಾನುವಾದಗಳಲ್ಲಿನ ಸಾಲುಗಳಿಗೆ ಹೋಲಿಸುವ ಕೆಲಸ ಮಾತ್ರವಾಯಿತು! ಸೂಕ್ತ ಸಮರ್ಥನೆಗಳೇ ಇಲ್ಲದೆ, ಶೇಕ್ಸ್‌ಪಿಯರ್ ಅತ್ಯಂತ ಜಾಗತಿಕ ನಾಟಕಕಾರ ಎಂದು ಹೇಳುವುದು, ಅವನ ಕೃತಿಗಳ ಸಾಲುಗಳನ್ನು ಮಹಾಭಾರತಕ್ಕೆ ಸಮೀಕರಿಸುವುದಕ್ಕಷ್ಟೇ ಗೋಷ್ಠಿ ಸೀಮಿತವಾಯಿತು. ಈ ಎಲ್ಲರೂ ಶೇಕ್ಸ್‌ಪಿಯರ್‌ನ ಬಗ್ಗೆ ವಿವಿಧ ನಿಲುವುಗಳನ್ನು ಹೊಂದಿದ್ದರಾದರೂ, ಎಲ್ಲರೂ ಸವೆದ ಪರಿಭಾಷೆಯನ್ನೇ ಬಳಸುತ್ತಾ ಪ್ರೇಕ್ಷಕರಲ್ಲಿ ಬೌದ್ಧಿಕ ಆಯಾಸವನ್ನಷ್ಟೇ ಉಂಟುಮಾಡುವಲ್ಲಿ ಯಶಸ್ವಿಯಾದರು. ಶಿವಪ್ರಕಾಶರು, ತಮ್ಮ ವ್ಯಾಪಕ ಪ್ರವಾಸದ ಆಧಾರದ ಮೇಲೆ ಶೇಕ್ಸ್‌ಪಿಯರ್‌ನ ವಿಶ್ವವ್ಯಾಪಕತೆಯನ್ನು ಅನುಮಾನಿಸುತ್ತ ಭಾರತದ ಪುರಾಣ ಹಾಗು ಆಚರಣೆಗಳಲ್ಲಿರುವ ನಮ್ಯತೆಯು ಅವನ ಕೃತಿಗಳ ಅನುಸಂಧಾನಕ್ಕೆ ಪ್ರಮುಖ ಸೌಲಭ್ಯ ಒದಗಿಸಿದೆ ಎಂದು ಹೇಳಿದರು.

ಪ್ರತಿ ವರ್ಷದಂತೆ, ಬಹುರೂಪಿಯ ಆಹಾರ ಹಾಗು ಕರಕುಶಲ ಮೇಳ ಜನರನ್ನು ಆಕರ್ಷಿಸಿತು. ಉತ್ತರ ಕರ್ನಾಟಕದ ತಿನಿಸುಗಳು ಮೈಸೂರಿನ ಜನರಿಗೆ ರುಚಿಯೆನಿಸಿತು. ಕರಕುಶಲ ಮೇಳದಲ್ಲಿ ಮೈಸೂರಿನ ಬಾಲಾಜಿಯವರು ಸಂಗ್ರಹಿಸಿದ್ದ ಶೇಕ್ಸ್‌ಪಿಯರ್‌ನ ಭಿತ್ತಿ ಪತ್ರಗಳ ಪ್ರದರ್ಶನ ಒಂದು ವಿಶೇಷ ಆಕರ್ಷಣೆಯಾಗಿತ್ತು. ಶೇಕ್ಸ್‌ಪಿಯರ್ ಚಿತ್ರೋತ್ಸವವು ಕುರೊಸಾವಾ ಸೇರಿದಂತೆ ಪ್ರಸಿದ್ಧ ನಿರ್ದೇಶಕರುಗಳ ಸಿನಿಮಾಗಳನ್ನು ಒಳಗೊಂಡಿದ್ದರೂ, ಈ ಹಳೆಯವಕ್ಕೆ ಬದಲಾಗಿ ಭಾರದ್ವಾಜರ ಶೇಕ್ಸ್‌ಪಿಯರ್ ತ್ರಿವಳಿ ಎಂದೇ ಹೆಸರಾದ *ಮಖಬೂಲ್*, *ಓಂಕಾರ* ಮತ್ತು *ಹೈದರ್* ತೋರಿಸಬೇಕಾಗಿತ್ತು ಎಂಬುದು ನನ್ನಂತಹ ಯುವ ಸಿನಿಮಾಸಕ್ತರ ಅಪೇಕ್ಷೆಯಾಗಿತ್ತು.


ಈ ವರ್ಷದ ಬಹುರೂಪಿಯ ಪ್ರಮುಖ ಆಕರ್ಷಣೆ ಉದ್ಘಾಟನೆ ಹಾಗು ಸಮಾರೋಪಕ್ಕೆ ಬಂದಿದ್ದ ನಾಸಿರುದ್ದೀನ್ ಷಾ ಹಾಗು ಅರುಂಧತಿ ನಾಗ್. ಕಾರಣಾಂತರದಿಂದ ಷಾ ಅವರ ನಾಟಕಕ್ಕೆ ನಾನು ಹೋಗಲಾಗದಿದ್ದರೂ ಅವರ *ಬೀಸ್ಟ್ಲಿ ಟೇಲ್ಸ್* ಮೋನೋಲಾಗ್‌ಗಳಿಂದ ಕೂಡಿದ್ದರಿಂದ ಜನರಿಗೆ ಅಷ್ಟೇನೂ ಇಷ್ಟವಾಗಲಿಲ್ಲ ಎಂದು ಕೇಳಿದೆ. ಸಮಾರೋಪದಲ್ಲಿ ಅರುಂಧತಿ ನಾಗ್ ಅವರು ರಂಗಾಯಣ ಹಾಗು ರಂಗ ಶಂಕರದ ಬಗ್ಗೆ ಸಂಕ್ಷಿಪ್ತವಾಗಿ ಮಾತನಾಡಿ ಈ ಬಗೆಯ ರಂಗ ಪ್ರಯೋಗಗಳು ಸಂಸ್ಕೃತಿಯ ಬೆಳವಣಿಗೆಗೆ ಅನಿವಾರ್ಯ ಎಂದರು. ಅದೇನೇ ಇರಲಿ, ಈ ಇಬ್ಬರಿಗೆ ಕೊಡಲಾಯಿತೆಂದು ಹೇಳಲಾದ ಲಕ್ಷಾಂತರ ರೂ.ಗಳ ಸಂಭಾವನೆ ನಿಜವಾಗಿಯೂ ಸಾರ್ಥಕವೇ ಎಂಬ ಪ್ರಶ್ನೆ ಇದ್ದೇ ಇದೆ.

ಉತ್ಸವದಲ್ಲಿ ಎಲ್ಲೆಡೆಯೂ ಬಂಡವಾಳಶಾಹಿಯ ವಿರುದ್ಧ ಕೂಗುಗಳು ಕೇಳಿಬಂದಿತಾದರೂ, ಉತ್ಸವ ಮುಗಿದ ರಾತ್ರಿ ಹತ್ತರ ಸುಮಾರಿಗೆ ಕಂಡದ್ದು– ಅಂತಹ ಕೂಗುಗಳನ್ನು ಹಾಕಿದ ವಿಮರ್ಶಕರು, ರಸ್ತೆಯ ಬದಿಗೆ ನಿಂತ ಅಸಂಖ್ಯ (ವೈಭವೋಪೇತ)ಕಾರುಗಳಲ್ಲಿ ತಮ್ಮ ಕಾರು ಯಾವುದೆಂದು ಹುಡುಕುತ್ತಿದ್ದರೆ, ಆಟೋ ಚಾಲಕರು ಗಿರಾಕಿಗಳಿಗಾಗಿ ಆಸೆಗಣ್ಣುಗಳಿಂದ ಕಾಯುತ್ತಾ ನಿಂತಿದ್ದುದು.

## ಪುಸ್ತಕಾವಲೋಕನ

ಪು: ಅರ್ಥಾರ್ಥ. ಲೇ: ಎಂ.ಎಸ್. ಶ್ರೀರಾಮ್. ಪ್ರ: ಅಕ್ಷರ ಪ್ರಕಾಶನ. ಹೆಗ್ಗೋಡು (ಸಾಗರ). ಪು: ೧೯೦. ಬೆಲೆ: ರೂ ೧೪೦/–

### ಮಾರುಕಟ್ಟೆ ವಾಸ್ತವದ ಲಿಬರಲ್ ಅರ್ಥಶಾಸ್ತ್ರ




**ಎಂ**.ಎಸ್.ಶ್ರೀರಾಮ್ ಕನ್ನಡದ ಪ್ರತಿಭಾವಂತ ಕತೆಗಾರರಲ್ಲಿ ಒಬ್ಬರು ಎಂದು ಹೆಸರು ಮಾಡಿದ್ದಾರೆ. ಪತ್ರಿಕೆಗಳ ಮಧ್ಯಪುಟದ ಓದುಗರಿಗೆ ಅವರು ರಾಜಕೀಯ ಆರ್ಥಿಕ ವಿದ್ಯಮಾನಗಳ ಕುರಿತು ಬರೆಯುವವರು ಎಂದು ಪರಿಚಿತರು. ಅರ್ಥಶಾಸ್ತ್ರವನ್ನು ಕುರಿತು ಓದದೆ, ಅದಕ್ಕೆ ಸಂಬಂಧಿಸಿದ ಸಂಗತಿಗಳ ಬಗ್ಗೆ ತಮ್ಮ ಅನ್ನಿಸಿಕೆಗಳನ್ನು ಸಾಹಿತಿಗಳು ಹೇಳುವುದಕ್ಕೆ ಕನ್ನಡದಲ್ಲಿ ಒಂದು ಪರಂಪರೆಯೇ ಇದೆ. ಆದರೆ ಶ್ರೀರಾಮ್, ಆ ಬಗೆಯ 'ಭಾನುವಾರದ ಅರ್ಥಶಾಸ್ತ್ರಜ್ಞ'ರಲ್ಲ. ವೃತ್ತಿಯಲ್ಲಿ ಅವರು ನಾಡಿನ ಪ್ರತಿಷ್ಠಿತ ಮ್ಯಾನೇಜ್‌ಮೆಂಟ್ ಶಿಕ್ಷಣ ಸಂಸ್ಥೆಯೊಂದರಲ್ಲಿ ಬೋಧಕರು; ಪ್ರವೃತ್ತಿಯಲ್ಲಿ ಕತೆಗಾರರು ಮತ್ತು ತಮ್ಮ ಕತೆಗಳಲ್ಲೂ ವೃತ್ತಿಪರ ನೈಪುಣ್ಯವನ್ನು ಸಾಧಿಸಲು ಯತ್ನಿಸುವವರು. ಶಾಸ್ತ್ರದ ತೂಕ ಮತ್ತು ಕಥನದ ಹರಿವುಗಳು ಒಟ್ಟಾಗಿ ಪ್ರಸ್ತುತ ಸಂಕಲನ 'ಅರ್ಥಾರ್ಥ'ದ ಬರಹಗಳನ್ನು ರೂಪಿಸಿವೆ. ಜನರ ದುಡಿಮೆ, ವಿರಾಮ, ಉಡುಪು, ಊಟ, ಮನರಂಜನೆ, ಅವರು ನಿತ್ಯ ವ್ಯವಹರಿಸುವ ಅಂಗಡಿ, ಸರ್ಕಾರಿ ಕಛೇರಿ, ಬ್ಯಾಂಕು ಇತ್ಯಾದಿಗಳನ್ನು ಶ್ರೀರಾಮ್ ತಮ್ಮ ಸಂಕಲನದಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಲೇ ತಮ್ಮ ಪ್ರಮೇಯ ಮಂಡನೆಗೆ ಅವನ್ನು ದೃಷ್ಟಾಂತಗಳಂತೆಯೂ ಬಳಸಿಕೊಳ್ಳುತ್ತಾರೆ. ಅವರ ಕತೆಗಳಂತೆ ಅವರ ಅರ್ಥಶಾಸ್ತ್ರಕ್ಕೂ ನಿತ್ಯದ ಬದುಕೇ ಪ್ರಧಾನ ಕಾಳಜಿ.

ಸಂಕಲನದ ಬಹುತೇಕ ಬರಹಗಳು ೨೦೧೩ರಲ್ಲಿ ಸಿದ್ಧವಾಗಿ ೨೦೧೪ರಲ್ಲಿ ಪರಿಷ್ಕೃತಗೊಂಡಿರುವಂತಹವು. ಇಲ್ಲಿನ ಯಾವ ಬರಹವೂ ೨೦೧೨ಕ್ಕೆ ಮೊದಲು ರಚಿತವಾದದ್ದಲ್ಲ; ಹೆಚ್ಚು ಕಡಿಮೆ ಎಲ್ಲ ಬರಹಗಳೂ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣಗಳ ಹೊಸ ಆರ್ಥಿಕ ನೀತಿಯನ್ನು ಅನುಸರಿಸುತ್ತಿರುವ 'ಆಧುನಿಕೋತ್ತರ' ಭಾರತದ ಕುರಿತಾಗಿವೆ. ೧೯೯೧ರಲ್ಲಿ ರಾಜೀವ್ ಗಾಂಧಿ ಹತ್ಯೆಯ ನಂತರ ಅಧಿಕಾರಕ್ಕೆ ಬಂದ ಪ್ರಧಾನ ಮಂತ್ರಿ ನರಸಿಂಹ ರಾವ್ ಮತ್ತು ಅವರ ಮಂತ್ರಿ ಮಂಡಲದಲ್ಲಿ ಅರ್ಥಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ರೂಪಿಸಿದ ಹೊಸ ಆರ್ಥಿಕತೆ, ಈ ಪುಸ್ತಕಕ್ಕೂ ಒಂದು ತಾತ್ವಿಕ ಚೌಕಟ್ಟನ್ನು ನೀಡಿರುವಂತೆ ಕಾಣುತ್ತದೆ. ಕಳೆದ ೨೫ ವರ್ಷಗಳಿಂದ, ವಿವಿಧ ಪಕ್ಷ ಮತ್ತು ಒಕ್ಕೂಟಗಳ ಸರಕಾರಗಳು ಕಾರ್ಯಗತಗೊಳಿಸುತ್ತಿರುವ ಈ ಧೋರಣೆಗಳ ಬಗ್ಗೆ ಲೇಖಕರಿಗೆ ಅಸಮಾಧಾನವಿದೆ. ಅವು ನಾಡಿನಲ್ಲಿ ಸೃಷ್ಟಿಸಿರುವ ಹೊಸ ಬಗೆಯ ಏರುಪೇರು ಮತ್ತು ತಾರತಮ್ಯಗಳ ಅರಿವೂ ಅವರಿಗೆ ಇದೆ. ಆರ್ಥಿಕ ಸಮಾನತೆ ಮತ್ತು ರಾಜಕೀಯ ಪ್ರಜಾಪ್ರಭುತ್ವಗಳೆರಡಕ್ಕೂ ಬದ್ಧನಾಗಿರುವ

ಹೊಸ ಮನುಷ್ಯ/ ಫೆಬ್ರುವರಿ/೨೦೧೫ ೧೮

ಲಿಬರಲ್‌ನ ದೃಷ್ಟಿಕೋನದಿಂದಲೇ ಈ ಬೆಳವಣಿಗೆಗಳನ್ನು ಅವರು ವಿಶ್ಲೇಷಿಸುವುದು.

ಆದರೆ ಹೊಸ ಆರ್ಥಿಕ ವ್ಯವಸ್ಥೆ ನಮ್ಮ ಕಾಲದ ವಾಸ್ತವ; ಇದನ್ನು ಒಪ್ಪಿಕೊಳ್ಳದೆ ಗತ್ಯಂತರವಿಲ್ಲ ಎಂಬ ಧ್ವನಿ ಈ ಕೃತಿಯ ಉದ್ದಕ್ಕೂ ಸ್ಥಾಯಿಯಾಗಿದೆ. ಹಾಗಾಗಿ ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ೪೭ರ ನಂತರದ ಎರಡು ದಶಕಗಳ ಸಾಧನೆ ಮತ್ತು ವೈಫಲ್ಯ ಇಲ್ಲಿನ ಬರಹಗಳಲ್ಲಿ ಮುನ್ನೆಲೆಗೆ ಬರುವುದಿಲ್ಲ. ಉದಾಹರಣೆಗೆ ಸಂಕಲನದಲ್ಲಿ ಎಲ್ಲಿಯೂ ಭೂ ಸುಧಾರಣೆಯ ಪ್ರಸ್ತಾಪವೇ ಇಲ್ಲ; ಸ್ವಾತಂತ್ರ್ಯೋತ್ತರ ಭಾರತದ "ಅಭಿವೃದ್ಧಿ ನಿರಾಶ್ರಿತ"ರಾದ ಬಡ ರೈತರು, ಗ್ರಾಮೀಣ ಕಸುಬುಗಾರರು ಮತ್ತು ಆದಿವಾಸಿಗಳ ಇಡೀ ಸಮುದಾಯವೇ ಇಲ್ಲಿ ನಾಪತ್ತೆ. ನಮ್ಮ ಅರ್ಥವ್ಯವಸ್ಥೆ, ದಿವಾಳಿ ಎಬ್ಬಿಸಿ ಅದೃಶ್ಯಗೊಳಿಸಿರುವ ಈ ಜನಗಳು ನಮ್ಮ ರಾಜಕೀಯ ವಾಗ್ವಾದದಲ್ಲೂ, ಈಗ ಅದೃಶ್ಯರಾಗಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಸಹ ಅವರನ್ನು ಅಂಚಿನಿಂದ ಆಚೆ ಸರಿಸಲಾಗಿದೆ. ಉದಾಹರಣೆಗೆ ಇಲ್ಲಿನ ಒಂದು ಬರಹದಲ್ಲಿ ಲೇಖಕರು ಎಡ್ಮಂಡ್ ಪೆಲ್ಪ್ಸ್ ಎಂಬ ಅರ್ಥಶಾಸ್ತ್ರಜ್ಞನ ಮಾತುಗಳನ್ನು ಸಮ್ಮತಿಪೂರ್ವಕವಾಗಿ ಉದ್ಧರಿಸಿ "ಕೃಷಿಯಂತಹ ಸ್ವಉದ್ಯೋಗದಲ್ಲಿ ನಿರುದ್ಯೋಗವೆಲ್ಲಿ?"ಎಂದು ಕೇಳುತ್ತಾರೆ. ರಾಜಕೀಯ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಾಗ್ವಾದಗಳಲ್ಲಿಯೂ ಈಗ ಭೂ ಹೀನ ಕೃಷಿ ಕಾರ್ಮಿಕರು ಕಣ್ಮರೆಯಾಗಿದ್ದಾರೆಯೆ? ರಾಜಕೀಯ ಪಕ್ಷಗಳ ಪೈಕಿ ನಮ್ಮ ಕಮ್ಯೂನಿಸ್ಟ್ ಪಕ್ಷಗಳಾದರೂ ಕೃಷಿಕಾರ್ಮಿಕರ ಕುರಿತು ಪದೇ ಪದೇ ಹೇಳುತ್ತಿರುತ್ತವೆ; ಅವು ಈ ಕಾರ್ಮಿಕರನ್ನು ಅಷ್ಟೋ ಇಷ್ಟೋ ಸಂಘಟಿಸಿವೆ ಕೂಡ! ಆದರೆ ಕೃಷಿ ಪುಟ್ಟಂಪೂರಾ ಒಂದು ಸ್ವಉದ್ಯೋಗ ಮತ್ತು ಅಲ್ಲಿ ನಿರುದ್ಯೋಗವಿಲ್ಲ ಎಂಬ ಪ್ರತಿಪಾದನೆ ಕೃಷಿ ಭೂಮಿ ಒಡೆತನದಲ್ಲಿರುವ ತೀವ್ರ ಅಸಮಾನತೆ, ಗ್ರಾಮೀಣ ನಿರುದ್ಯೋಗ, ಋತುಮಾನಕ್ಕೆ ತಕ್ಕಂತೆ ಅಂಶಕಾಲಿಕ ಉದ್ಯೋಗ, ನಿಕೃಷ್ಟ ವೇತನದ ಉದ್ಯೋಗ, ಗ್ರಾಮಗಳಿಂದ ಬಡಜನರ ಒತ್ತಾಯದ ವಲಸೆ ಮುಂತಾದ ಎಲ್ಲ ಜ್ವಲಂತ ಸಮಸ್ಯೆಗಳನ್ನೂ ಮರೆಮಾಚುತ್ತದೆ.

ಮಾರುಕಟ್ಟೆಯ ವಾಸ್ತವವನ್ನು 'ಗುರುತಿಸಿಯೇ' ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳನ್ನು ಪ್ರತಿಪಾದಿಸಬೇಕು ಎಂಬುದು ಲೇಖಕರು ತಮಗೆ ತಾವೇ ಹಾಕಿಕೊಂಡ ಲಕ್ಷ್ಮಣರೇಖೆಯಂತೆ ಭಾಸವಾಗುತ್ತದೆ; 'ಗುರುತಿಸುವುದು' ಮತ್ತು 'ಒಪ್ಪಿಕೊಳ್ಳುವುದು'–ಇವೆರಡರ ನಡುವಿನ ಗೆರೆಯೂ ಅಳಿಸಿಹೋದಂತೆ ಕಾಣುತ್ತದೆ. ಉದಾಹರಣೆಗೆ ಸಂಕಲನದ "ಸಮತಾವಾದ ಮತ್ತು ಬೆಳವಣಿಗೆ–ಯಾವುದು ಹಿತ?"ಎಂಬ ಲೇಖನ ನೋಡಿ. ಅದರ ಶೀರ್ಷಿಕೆಯೇ ಸಮತಾವಾದ ಮತ್ತು ಬೆಳವಣಿಗೆ. ಒಂದು ಇನ್ನೊಂದಕ್ಕೆ ವಿರುದ್ಧ ಎಂಬುದನ್ನು ಗ್ರಹೀತವಾಗಿ ಇಟ್ಟುಕೊಂಡಿದೆ. ಸಮತಾವಾದಕ್ಕೆ ಆರ್ಥಿಕ ಬೆಳವಣಿಗೆ ಅಪಥ್ಯ ಎಂದು ಲೇಖಕರು ಯಾಕೆ ಭಾವಿಸುತ್ತಾರೆ? ಸಮತಾವಾದದ ಆಶಯಗಳನ್ನು ಅಮರ್ತ್ಯ ಸೆನ್‌ರ ಚಿಂತನೆಗೂ, ಬೆಳವಣಿಗೆಯ ಪ್ರತಿಪಾದನೆಯನ್ನೂ ಜಗದೀಶ್ ಭಗವತಿಯವರ ಜೊತೆಗೂ ಸಮೀಕರಿಸಿ ಈ ಇಬ್ಬರು ತುಳಿದ ದಾರಿ ಬೇರೆ ಬೇರೆಯಾದರೂ ತಲುಪಬೇಕಾದ ತಾವು ಒಂದೇ ಎಂದು ಲೇಖಕರು ತೀರ್ಮಾನಿಸುತ್ತಾರೆ. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಲೇಖಕರು ಕೊಡುವ ಸಾಫ್ಟ್‌ವೇರ್ ಕಂಪನಿಯ ಉದಾಹರಣೆ ಸ್ವತಃ ಅವರೇ ಅಳತೆ ಕೊಟ್ಟು ಮಾಡಿಸಿದಂತಿದೆ. ಅದರ ಬದಲು, ಭಾರತದ ಆರ್ಥಿಕ ಬೆಳವಣಿಗೆಗೆ ಅನಿವಾರ್ಯವೆನ್ನಿಸಿರುವ ಗಣಿಗಾರಿಕೆ, ಬೃಹತ್ ನೀರಾವರಿ ಯೋಜನೆ, ಹೆದ್ದಾರಿ ನಿರ್ಮಾಣ ಮುಂತಾದವುಗಳನ್ನು ಉದಾಹರಿಸುವುದಾದರೆ, ಅವು ಸೃಷ್ಟಿಸುವ 'ಅಭಿವೃದ್ಧಿ ನಿರಾಶ್ರಿತರು' ಅರ್ಥಾತ್ ಒಕ್ಕಲೆಬ್ಬಿಸಿದ ರೈತರು ಹಾಗೂ ತಮ್ಮ ಊರು ಮನೆಗಳಿಂದಲೇ ಗಡೀಪಾರಾಗಿರುವ ಆದಿವಾಸಿಗಳನ್ನೂ ಪರಿಗಣಿಸಲೇಬೇಕಾಗುತ್ತದೆ. ಈ ರೈತರು, ಮೇಧಾ ಪಾಟ್ಕರ್‌ರಂತಹವರ ನಾಯಕತ್ವದಲ್ಲಿ ನಡೆಸುವ ಚಳುವಳಿಯನ್ನು ವ್ಯವಸ್ಥೆ ಕಡೆಗಣಿಸುತ್ತದೆ; ಆದಿವಾಸಿಗಳ ಹೋರಾಟವನ್ನು ಹತ್ತಿಕ್ಕುತ್ತಿದೆ. ಅರ್ಥಶಾಸ್ತ್ರಜ್ಞರು ಈ ಬಗ್ಗೆ ಏನು ಹೇಳುತ್ತಾರೆ? ಬೆಳವಣಿಗೆ ಎನ್ನುವುದು ಕೇವಲ ಬಂಡವಾಳ ಹೂಡಿಕೆ, ಉತ್ಪಾದನಾ ವೆಚ್ಚ, ಉತ್ಪಾದನೆ ಮುಂತಾದವುಗಳ ಲೆಕ್ಕಾಚಾರವೊ? ಬೆಳವಣಿಗೆಯಿಂದ ತಲೆದೋರುವ ದುಃಖ ದುಮ್ಮಾನಗಳು ಅಥವಾ ಶಿವ್ ವಿಶ್ವನಾಥನ್ ಹೇಳುವ "The calculus of suffering" ಅರ್ಥಶಾಸ್ತ್ರದ ಪರಿಧಿಯೊಳಗೆ ಬರುವುದಿಲ್ಲವೆ?

'ಮಕ್ಕಳ ಶಾಲೆಗಳೂ ಗಿಟ್ಟದ ವ್ಯಾಪಾರವೂ' ಎಂಬ ಇನ್ನೊಂದು ಲೇಖನದ ಕೊನೆಗೆ ಶ್ರೀರಾಮ್ "ವಿದ್ಯೆ ಆರೋಗ್ಯ, ಗಾಳಿ, ಬೆಳಕು, ನೀರು, ರಸ್ತೆ ಬಡವ ಬಲ್ಲಿದನೆನ್ನದೆ ನಮಗೆಲ್ಲರಿಗೂ ಬೇಕಿರುವ ಮೂಲಭೂತ ಸೌಕರ್ಯಗಳು. ಇವು ಮೂಲತಃ ಮಾರಿಕೊಳ್ಳುವ ವಸ್ತುಗಳಲ್ಲ. ಮಾರುಕಟ್ಟೆಯ ಸೂತ್ರ ಹೊಕ್ಕು ಇವುಗಳೂ ಮಾರಾಟಕ್ಕೆ ಬಂದಿರಬಹುದಾದರೂ ಇದರಿಂದ ಪಲಾಯನಗೈಯ್ಯುವ ಸವಲತ್ತು ಸರಕಾರಕ್ಕಿಲ್ಲ. ಇವು ಸರಕಾರದ ಜವಾಬ್ದಾರಿ ಅಷ್ಟೇ" (ಪುಟ ೫೧) ಎಂದು ನಿರ್ಣಾಯಕವಾಗಿ ಹೇಳುತ್ತಾರೆ. ಆದರೆ "ಬಿಟ್ಟಿ ಊಟ ಯಾರಿಗೂ ಇಲ್ಲ – No free lunch" ಎನ್ನುವುದೇ ಮಾರುಕಟ್ಟೆಯ ನಿಯಮ. ವಿದ್ಯೆ, ಆರೋಗ್ಯ ಮುಂತಾದ ಮೂಲಭೂತ ಸವಲತ್ತುಗಳು ಬಡವ ಬಲ್ಲಿದರೆನ್ನದೆ ಎಲ್ಲರಿಗೂ ದೊರೆಯಬೇಕು ಎಂಬುದನ್ನು ಅಮರ್ತ್ಯ ಸೆನ್ ಸದಾ ಪ್ರತಿಪಾದಿಸುತ್ತ ಬಂದಿದ್ದಾರೆ. ಆದರೆ ಜಗದೀಶ್ ಭಗವತಿಯಂತಹ ಅರ್ಥಶಾಸ್ತ್ರಜ್ಞರು ಈ ಬಗ್ಗೆ ಏನು ಹೇಳುತ್ತಾರೆ? ಇವರು ಎತ್ತಿ ಹಿಡಿಯುವ ಹೊಸ ಆರ್ಥಿಕ ಧೋರಣೆಗಳ ಅನ್ವಯ ಇವುಗಳ ಮೇಲೆ ಇದ್ದ ಚೂರುಪಾರು ಸರಕಾರೀ ಒಡೆತನವೂ ಈಗ ಖಾಸಗೀಕರಣಗೊಂಡಿದೆ. ಅದರ ಪರಿಣಾಮವಾಗಿ ಬಡವರು ಈ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದು ಎಲ್ಲೆಡೆ ಕಂಡುಬರುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಜೀವನಾವಶ್ಯಕ ವಸ್ತು ಮತ್ತು ಸೇವೆಗಳ ನಿರ್ವಹಣೆಯನ್ನು ಪ್ರಭುತ್ವವೇ ವಹಿಸಿಕೊಂಡಾಗ ಆಗುವ ಅನಾಹುತಗಳಿಗೆ ಗತಕಾಲದ ಸೋವಿಯತ್‌ರಷ್ಯದಂತಹ ಕೆಲವು ಉದಾಹರಣೆಗಳೂ ಇವೆ. ಹೀಗೆ ಮಾರುಕಟ್ಟೆ ಮತ್ತು ಸಾಮಾಜಿಕ ನ್ಯಾಯಗಳ ನಡುವೆ ಆಯ್ಕೆ ಮಾಡುವುದು *catch 22* ನಂತಹ ಬಿಕ್ಕಟ್ಟಿನ ಸನ್ನಿವೇಶ. ಪ್ರಸ್ತುತ ಸಂಕಲನದ ಕೆಲವು ಲೇಖನಗಳಲ್ಲಿ ಶ್ರೀರಾಮ್ ಇದನ್ನು ಗುರುತಿಸುತ್ತಾರೆ. ಉದಾ: 'ಸಂಶೋಧನೆ, ವಿದ್ಯೆ ಮತ್ತು ಖಾಸಗೀಕರಣ'.

'ಮುಕ್ತ ಮಾರುಕಟ್ಟೆ'ಯ ಪ್ರತಿಪಾದಕರು, ಅರ್ಥವ್ಯವಸ್ಥೆಯ ಆರೋಗ್ಯಕ್ಕೆ ಮಾರಕ ಎಂದು ಪರಿಗಣಿಸಿರುವ 'ಮನರೇಗಾ', 'ಅನ್ನಭಾಗ್ಯ'ದಂತಹ ಯೋಜನೆಗಳನ್ನು ಲೇಖಕರು ಸ್ವಾಗತಿಸುತ್ತಾರೆ. 'ಮನರೇಗಾ, ರುಪಾಯಿಗೊಂದು ಕಿಲೋ ಅಕ್ಕಿ ಮತ್ತು ಸೋಮಾರಿತನ' ಎಂಬ ಲೇಖನದಲ್ಲಿ ಈ ಯೋಜನೆಗಳು ಬಡವರ ಮುಂದೆ ಇರುವ ಆಯ್ಕೆಗಳನ್ನು ತುಸುವಾದರೂ ಹಿಗ್ಗಿಸುತ್ತವೆ ಎಂದು ಲೇಖಕರು ವಾದಿಸುತ್ತಾರೆ. ಅವು ಬಡವರನ್ನು ಇನ್ನಷ್ಟು ಸೋಮಾರಿಗಳನ್ನಾಗಿ ಮಾಡುತ್ತವೆ; ಅಂದರೆ ಬಡತನಕ್ಕೆ ಸೋಮಾರಿತನ ಹೊರತುಪಡಿಸಿ ಬೇರೆ ಯಾವ ಸಾಂಸ್ಥಿಕ ಕಾರಣವೂ ಇಲ್ಲ ಎಂಬ ಪ್ರತಿಷ್ಠಿತ ವರ್ಗದ ಮುಕಾರುಗಳನ್ನೂ ಲೇಖಕರು ತಿರಸ್ಕರಿಸುತ್ತಾರೆ. ಆದರೆ ರಾಜ್ಯ ಸರಕಾರದ 'ರೂಪಾಯಿಗೊಂದು ಕಿಲೋ ಅಕ್ಕಿ' ಯೋಜನೆಯನ್ನು ಮನರೇಗಾದೊಳಗೆ ಅಳವಡಿಸಿಕೊಳ್ಳಬೇಕು ಎಂಬ ಲೇಖಕರ ಸಲಹೆ ಸಾಧುವಲ್ಲ. ಮನರೇಗಾ ದೈಹಿಕ ದುಡಿಮೆಗೆ ಪ್ರತಿಯಾಗಿ ವೇತನವನ್ನು ಖಾತ್ರಿಗೊಳಿಸುವ ಯೋಜನೆ. ರೂಪಾಯಿಗೊಂದು ಕಿಲೋ ಅಕ್ಕಿ ಯೋಜನೆಯನ್ನು ಇದರೊಳಗೆ ಸೇರಿಸಿದರೆ ಯೋಜನೆಯ ಫಲಾನುಭವಿಗಳು ಕಡ್ಡಾಯವಾಗಿ ದುಡಿಮೆ ಮಾಡಲೇಬೇಕು. ಅಂದರೆ ಯಾವ ಬಗೆಯ ದುಡಿಮೆಗೂ ತ್ರಾಣವಿಲ್ಲದ ವೃದ್ಧರು, ರೋಗಿಗಳು, ಅಥವಾ ಅಪಾಂಗರ ಕುಟುಂಬಗಳು ಕನಿಷ್ಠ ಆಹಾರ ಭದ್ರತೆಯಿಂದಲೂ ವಂಚಿತವಾಗುತ್ತವೆ. ಈ ಯೋಜನೆಯೇ ಇಂತಹ ಅಸಹಾಯಕರನ್ನು ಉದ್ದೇಶಿಸಿರುವುದರಿಂದ ಅದು ಈಗ ಇರುವಂತೆಯೇ ಮುಂದುವರಿಯುವುದು ಸೂಕ್ತ.

ಸಂಕಲನದ 'ಮಾಹಿತಿಯ ಮಹತ್ವದ ಬೆನ್ನೇರಿ' ಎಂಬ ಲೇಖನ, ನಾವು ನಿತ್ಯ ನೋಡುವ ಆದರೆ ಗಮನಿಸದ, ನಮ್ಮ ಸಮಾಜದ ಹಲವು ಸಂಗತಿಗಳ ಬಗ್ಗೆ ನಮಗೆ ಇರುವ ಗಾಢ ಅಜ್ಞಾನವನ್ನು ಬಯಲು ಮಾಡುತ್ತದೆ. ನಮ್ಮ ದೇಶದಲ್ಲಿ ಒಟ್ಟಾರೆ ಇರುವ ಪ್ರಾಥಮಿಕ ವ್ಯವಸಾಯ ಸಹಕಾರಿ ಪತ್ತಿನ ಸಂಘಗಳ ಸಂಖ್ಯೆ ಎಷ್ಟು?ಎಂದು ಲೇಖನದ ಮೊದಲಿಗೇ ನಮಗೆ ಎದುರಾಗುವ ಪ್ರಶ್ನೆಗೆ 'ಉತ್ತರ ಯಾರಿಗೂ ಗೊತ್ತಿಲ್ಲ; ಯಾರೂ ಸರಿಯಾದ ಲೆಕ್ಕವಿಟ್ಟಿಲ್ಲ. ಹಾಗೆಂದು, ಸಹಕಾರಿ ಪದ್ಧತಿಯ ಹವ್ಯಾಸಿ ತಜ್ಞರಿಗೆ ನಮ್ಮಲ್ಲಿ ಬರವಿಲ್ಲ. ಖಚಿತವಾಗಿ ಏನೂ ಗೊತ್ತಿಲ್ಲದ, ಆದರೆ ಆ ಕುರಿತು ಎಲ್ಲರೂ ತಂತಮ್ಮ ಅಭಿಪ್ರಾಯ ಕೊಡುವ ಅಂತಹ ಹಲವು ಪ್ರಶ್ನೆಗಳನ್ನು ಲೇಖಕರು ನಮ್ಮ ಮುಂದೊಡ್ಡುತ್ತಾರೆ. ನಮ್ಮ ನಗರಗಳ ಕೊಳೆಗೇರಿ ನಿವಾಸಿಗಳ ಆರ್ಥಿಕ ಸ್ಥಿತಿಗತಿಯ ಬಗ್ಗೆ ನಮಗೆ ಎಷ್ಟು ಗೊತ್ತಿದೆ? ನಮ್ಮ ಊರಲ್ಲಿರುವ ಡ್ರೈವರುಗಳು, ಕಟ್ಟಡ ಕಾರ್ಮಿಕರು, ಮನೆಗೆಲಸದವರು ಅಂದರೆ ನಾವು ನಿತ್ಯ ನೋಡಿಯೂ ಗಮನಿಸದ ಜನ ಎಷ್ಟಿದ್ದಾರೆ? ನಮಗೆ ಉತ್ತರ ಗೊತ್ತಿಲ್ಲದ ಇಂತಹ ಹಲವು ಪ್ರಶ್ನೆಗಳನ್ನು ನಮ್ಮತ್ತ ಎಸೆಯುವುದರ ಮೂಲಕ ಲೇಖಕರು ನಮ್ಮ ಗ್ರಹಿಕೆಯ ಮಿತಿಗಳನ್ನು ನಮಗೆ ಕಾಣಿಸುತ್ತಾರೆ. ಇದೊಂದು ಲೇಖನ ಮಾತ್ರವಲ್ಲ ಇಡೀ ಸಂಕಲನವೇ, ನಮ್ಮ ಹೆಚ್ಚಿನ ನಿಲುವುಗಳಿಗೆ ಪೂರ್ವಗ್ರಹ ಹೊರತುಪಡಿಸಿ ಲೋಕಜೀವನದಲ್ಲಿ ಯಾವ ತಳಹದಿಯೂ ಇಲ್ಲ ಎಂಬ ಅರಿವನ್ನು ಮೂಡಿಸುತ್ತದೆ.

**–ಜಿ. ರಾಜಶೇಖರ**

ಹೊಸ ಮನುಷ್ಯ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



ಫ್ಲ್ಯಾಟುಗಳು ಮತ್ತು ಸ್ವತಂತ್ರ ಮನೆಗಳ
ಖರೀದಿ ಮತ್ತು ನಿರ್ಮಾಣಕ್ಕಾಗಿ ಸಂರ್ಕಿಸಿ:

**ಶಿವ ಬಿಲ್ಡರ್ಸ್ ಅಂಡ್ ಡೆವಲಪರ್ಸ್**
**ಪ್ರೊ: ಶಶಿಧರ ಎಸ್. ಕಡಲೂರು**
ನಂ.೩, ಎಸ್.ಜೆ.ವಿ. ಕಾಂಪ್ಲೆಕ್ಸ್
ಮೆಂಟಲ್ ಆಸ್ಪತ್ರೆ ಎದುರು
ಧಾರವಾಡ

ಹೊಸ ಮನುಷ್ಯ ಓದುಗರೆಲ್ಲರಿಗೂ
ನಮ್ಮ ಶುಭಾಶಯಗಳು...




**ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 080– 30 600 600**

ಹೊಸ ಮನುಷ್ಯ/ ಫೆಬ್ರುವರಿ/೨೦೧೫ ೨೦

'ಹೊಸ ಮನುಷ್ಯ' ಸಮಾಜವಾದಿ ಮಾಸಿಕಕ್ಕೆ
ಶುಭ ಕೋರುವ–



**ಚಿ. ಆರುಷ್ ತೇಜಸ್ವಿ**
**ಕು. ಅನಘಾ**
**ಮತ್ತು ಕು.ಆದಿತಿ**
**ಇವರ ಅಜ್ಜ–ಅಜ್ಜಿ, ಬೆಂಗಳೂರು**

## ತಿಂಗಳ ಸಾಲುಗಳು...



ಹದ್ದು ಆಕಾಶದಲ್ಲಿ ಎಷ್ಟು ಎತ್ತರಕ್ಕೆ ಹಾರಿದರೂ
ಅದರ ಕಣ್ಣು ಮಾತ್ರ ಭೂಮಿಯ ಮೇಲಿನ ಸತ್ತ ಪ್ರಾಣಿಯ ಕಡೆಗೇ
ಹಾಗೇ ಅಲ್ಪರು ಕಲಿತು ಎಷ್ಟೇ ಧರ್ಮದ ಮಾತುಗಳನ್ನಾಡಿದರೂ
ಅವರ ಗಮನವೆಲ್ಲ ಕ್ಷುಲ್ಲಕ ಆಸೆ-ಆದಿಕಾರಗಳ ಕಡೆಗೇ

**–ರಾಮಕೃಷ್ಣ ಪರಮಹಂಸ**

**ಪತ್ರಿಕೆಗೆ ಶುಭ ಕೋರುತ್ತಾ...**

**–ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15
ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)